ಶಿವಮೊಗ್ಗ
ಸೋಮವಾರ, 16 ಮಾರ್ಚ್ 2026
ಸಂಪುಟ 16, ಸಂಚಿಕೆ 323, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ





ಕೇರಳ, ತ.ನಾಡು, ಅಸ್ಸಾಂ, ಪ.ಬಂಗಾಳ, ಪುದುಚೇರಿ ಚುನಾವಣಾ ದಿನ ಪ್ರಕಟ | ಮೇ 4ರಂದು ಫಲಿತಾಂಶ

# ಮತಯುದ್ಧಕ್ಕೆ ವೇದಿಕೆ

- ಏ.9: ಅಸ್ಸಾಂ, ಕೇರಳ, ಪುದುಚೇರಿ, ದಾವಣಗೆರೆ, ಬಾಗಲಕೋಟೆ
- ಏ.23: ತಮಿಳುನಾಡು, ಪಶ್ಚಿಮ ಬಂಗಾಳ
- ಏ.29: ಪಶ್ಚಿಮ ಬಂಗಾಳ (2ನೇ ಹಂತ)





**ಹೊಸದಿಲ್ಲಿ:** ಬಹು ನಿರೀಕ್ಷಿತ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದೆ. ಜತೆಗೆ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯ ದಿನಾಂಕವನ್ನೂ ಘೋಷಿಸಲಾಗಿದೆ.



ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏ.9ರಂದು ಒಂದೇದಿನ, ತಮಿಳುನಾಡಿನಲ್ಲಿ ಏ.23ರಂದು ಮತ್ತು ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮೇ 4ರಂದು ಎಲ್ಲಾ ಚುನಾವಣೆಗಳ ಮತ ಎಣಿಕೆ ನಡೆಯಲಿದೆ.

ಇಲ್ಲಿನ ವಿಜ್ಞಾನ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕುರಿತು ಅಧಿಕೃತ ಮಾಹಿತಿ ನೀಡಿದರು. ಅವರೊಂದಿಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಉಪಸ್ಥಿತರಿದ್ದರು.

**824 ವಿಧಾನಸಭಾ ಸ್ಥಾನಕ್ಕೆ ಚುನಾವಣೆ:** 4 ರಾಜ್ಯ ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 824 ವಿಧಾನ ಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾ ವಣೆಯಲ್ಲಿ ಸುಮಾರು 17.4 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. 2.18 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳು ಸ್ಥಾಪಿಸಲಾಗಲಿದ್ದು, ಸುಮಾರು 25 ಲಕ್ಷ ಚುನಾವಣಾ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. ➡ಪುಟ ೮

### ಏ.9ಕ್ಕೆ ದಾವಣಗೆರೆ, ಬಾಗಲಕೋಟೆ ಉಪಚುನಾವಣೆ

ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಕೂಡ ಉಪಚುನಾವಣೆ ಘೋಷಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರವು ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದು, ಬಾಗಲಕೋಟೆ ಕ್ಷೇತ್ರವು ಮಾಜಿ ಸಚಿವ ಎಚ್.ವೈ. ಮೇಟಿ ಅವರ ಅಗಲಿಕೆಯಿಂದ ಖಾಲಿಯಾಗಿದೆ. ಈ ಎರಡು ಕ್ಷೇತ್ರಗಳಿಗೂ ಏ.9ರಂದು ಮತದಾನ ನಡೆಯಲಿದ್ದು, ಅವುಗಳ ಫಲಿತಾಂಶವೂ ಮೇ 4ರಂದು ಪ್ರಕಟವಾಗಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

### ಮತದಾನ ವೇಳಾಪಟ್ಟಿ

- ಅಸ್ಸಾಂ, ಕೇರಳ ಮತ್ತು ಪುದುಚೇರಿ: ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಮತದಾನ
- ತಮಿಳುನಾಡು: ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಮತದಾನ

### ಪಶ್ಚಿಮ ಬಂಗಾಳದಲ್ಲಿ 2 ಹಂತದ ಮತದಾನ

**ಮೊದಲ ಹಂತ:** ಏಪ್ರಿಲ್ 23
**ಎರಡನೇ ಹಂತ:** ಏಪ್ರಿಲ್ 29
ಈ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ಮತದಾನದ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

| ವಿಧಾನಸಭೆ | ಕ್ಷೇತ್ರಗಳು |
|---|---|
| ತಮಿಳುನಾಡು | 234 |
| ಪಶ್ಚಿಮ ಬಂಗಾಳ | 294 |
| ಕೇರಳ | 140 |
| ಅಸ್ಸಾಂ | 126 |
| ಪುದುಚೇರಿ | 33 |

### 20 ದೇಶಗಳ ಚುನಾವಣಾ ವೀಕ್ಷಕರು

### ನೀತಿಸಂಹಿತೆ ಜಾರಿ • ಪುಟ ೮

ದೇಶದಲ್ಲಿ 80ಕ್ಕೂ ಹೆಚ್ಚು ಸಂಭಾಗ: ಹೊಸಬಾಳೆ

# ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

**ಸಮಾಲ್ಖಾ(ಹರಿಯಾಣ):** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಸಂಘಟನಾ ಕಾರ್ಯ ವಿಸ್ತರಿಸಲು, ಸಮಾಜದ ಉದಾತ್ತ ಶಕ್ತಿಗಳನ್ನು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಜ್ಜುಗೊಳಿಸಲು ಮತ್ತು ಸಾಮಾಜಿಕ ಸಾಮರಸ್ಯ ಉತ್ತೇಜಿಸುವ ನಿರ್ಣಯದೊಂದಿಗೆ ಮುಕ್ತಾಯವಾಯಿತು.



ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಡೆಯಿತು. ಅಂತಿಮ ದಿನವಾದ ಭಾನುವಾರ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಶತಾಬ್ದಿ ವರ್ಷದ ತರುವಾಯ ಸಂಘದ ಭೌಗೋಳಿಕ ರಚನೆಯಲ್ಲಿ ಪ್ರಾಂತ ರಚನೆಯ ಬದಲು ಇನ್ನೂ ಚಿಕ್ಕ ಘಟಕವಾಗಿರುವ ಸಂಭಾಗ ರಚನೆಯಾಗಲಿದೆ. ದೇಶಾದ್ಯಂತ ಸಂಘಕಾರ್ಯ ವಿಸ್ತಾರವಾಗಿರುವುದರಿಂದ ಸಹಜವಾಗಿಯೇ ವಿಕೇಂದ್ರೀಕರಣದ ಅಗತ್ಯ ಗಮನದಲ್ಲಿರಿಸಿ, ಈ ಪರಿವರ್ತನೆ ಮಾಡಲಾಗಿದೆ. ಹೆಚ್ಚು ವಿಕೇಂದ್ರೀಕರಣಕ್ಕೆ ಗಮನ ನೀಡಲಾಗಿದೆ. ಅದರ ಅನುಷ್ಠಾನದ ನಂತರ ದೇಶದಲ್ಲಿ 46 ಪ್ರಾಂತಗಳ ಬದಲು 80 ಕ್ಕೂ ಹೆಚ್ಚು ಸಂಭಾಗಗಳು ಇರಲಿವೆ ಎಂದು ಅವರು ಹೇಳಿದರು.

**ಯುದ್ಧ ಆದಷ್ಟು ಬೇಗ ಕೊನೆಯಾಗಬೇಕು:** ಭಾರತೀಯ ಮೂಲದವರಾಗಿ ಭಾರತಕ್ಕೆ ಮಾತ್ರ ನಿಷ್ಠರಾಗಿರದೆ ನೀವು ನೆಲೆಸಿರುವ ದೇಶಗಳಲ್ಲಿನ ಕರ್ತವ್ಯಗಳನ್ನೂ ನೀವು ಪಾಲನೆ ಮಾಡಬೇಕು. ವಿಶ್ವ ಶಾಂತಿ ನಮ್ಮ ದೃಷ್ಟಿ. ಅನೇಕ ಕಾರಣಗಳಿಂದ ಯುದ್ಧಗಳು ನಡೆಯುತ್ತವೆ. ಆದಷ್ಟು ಬೇಗ ಅದು ಮುಕ್ತಾಯಗೊಂಡು ಅಲ್ಲಿನ ಜನಜೀವನ ಸುಖ ಶಾಂತಿಯಲ್ಲಿ ನೆಲೆಸಬೇಕು ಎನ್ನುವುದು ನಮ್ಮ ಅಪೇಕ್ಷೆ. ಈಗ ಆಗುತ್ತಿರುವ ಯುದ್ಧದ ಕುರಿತು ಸಂಘಕ್ಕೆ ಯಾವುದೇ ನಿಲುವಿಲ್ಲ, ಆದರೆ, ವಿಶ್ವದಲ್ಲಿ ಶಾಂತಿ ನೆಲೆಸಬೇಕು. ➡ಪುಟ ೮

### ಭಾರತದ ಹಿತಕ್ಕಾಗಿ ಸರ್ಕಾರ ನಿಲ್ಲುತ್ತದೆ

ಭಾರತ ಸರ್ಕಾರ ಭಾರತದ ದೃಷ್ಟಿಯಿಂದ ಯಾವುದು ಹಿತವೋ ಅದನ್ನು ಮಾಡುವುದಕ್ಕಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ ಎಂಬ ವಿಶ್ವಾಸವಿದೆ. ಸರ್ಕಾರದಲ್ಲಿರುವ ಸಚಿವರು ವಿಶ್ವದ ದೇಶಗಳೊಂದಿಗೆ ಸಂಬಂಧ, ಸಂಪರ್ಕ, ವಾಣಿಜ್ಯ, ವ್ಯವಹಾರ, ಸುರಕ್ಷತೆಯ ಕುರಿತು ಮಾತುಕತೆ ನಡೆಸುವುದರ ಜೊತೆಗೆ ರಾಷ್ಟ್ರ ಮೊದಲು ಎಂಬ ಪ್ರಧಾನ ಆಸಕ್ತಿ ಆಧಾರಿತವಾಗಿ ಕೆಲಸ ಮಾಡುತ್ತಿದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

> ಸಮಾಜದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಮತ್ತು ಯಾವುದೇ ಚುನಾವಣೆಯಲ್ಲಿ ಜಾತಿ ಆಧಾರಿತವಾಗಿ ಮತದಾರರ ಮನದಾನದ ಬಳಕೆ ನಿಲ್ಲಿಸಲು ಮಾಧ್ಯಮಗಳು ಸಹ ಮುಂದಾಗಬೇಕು.
>
> ■ ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

## ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠೆ

## ದಿನದ ಮಾತು

ಸಾಧ್ಯವಾದಷ್ಟು ನಾವು ರಾಕ್ಷಸರಾಗಬಾರದು. ಪಶುಗಳಾಗಬಾರದು. ಮನುಷ್ಯರೇ ಆಗಬೇಕು. ಅದು ಮಾನವ ಧರ್ಮದ ಮುಖ್ಯವಾದ ತತ್ವ.
▲ ಶ್ರೀ ವಾಣಿ

### ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ನೇರ ನೋಟ
• ದು.ಗು. ಲಕ್ಷ್ಮಣ
• ಪುಟ ೬

## ಕಿರುಸುದ್ದಿ

### ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

**ಹೊಸದಿಲ್ಲಿ:** ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.
• ಪುಟ ೭

### ಕೌಡಿಯಾರ್ ಅರಮನೆಯಲ್ಲಿ ಅಪಾರ ಮೌಲ್ಯ ಚಿನ್ನ ಕಳವು

**ತಿರುವನಂತಪುರಂ(ಕೇರಳ):** ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೇರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.
• ಪುಟ ೭

### ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!
• ಪುಟ ೭

### ಚುನಾವಣೆ ಘೋಷಣೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ
• ಪುಟ ೭

### ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ
• ಪುಟ ೭

### ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ
• ಪುಟ ೯

### ಶಾಸಕರಿಗೆ 5 ಕೋಟಿ ರೂ. ಆಮಿಷ: ಡಿಕೆಶಿ
• ಪುಟ ೯

### ಅನಿಲ ಪೂರೈಕೆ: ಪರ್ಯಾಯ ಮಾರ್ಗ ಕೋರಿ ಕೇಂದ್ರಕ್ಕೆ ಸಿಎಂ ಪತ್ರ
• ಪುಟ ೯

ಲೋಕಸಭಾ ಸ್ಪೀಕರ್ ಓಂ ಬಿರ್ಲಾಗೆ ಪ್ರಧಾನಿ ಮೋದಿ ಪತ್ರ

# ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

**ಹೊಸದಿಲ್ಲಿ:** ಲೋಕಸಭಾ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ರಾಜಕೀಯ ಹೊಣೆಗೇಡಿತನ. ಸ್ವಹಿತಾಸಕ್ತಿ ಇದರ ಹಿಂದಿದೆ. ವಂಶಪಾರಂಪರ್ಯ ಚಿಂತನೆಯಲ್ಲಿ ಮುಳುಗಿರುವ ಕೆಲವರು ಪ್ರಜಾತಾಂತ್ರಿಕ ಸಂಸ್ಥೆಗಳನ್ನು ತಮ್ಮ ಸೀಮಿತ ವರ್ತುಲದೊಳಗೆ ಸೀಮಿತಗೊಳಿಸಲು ಯತ್ನಿಸುತ್ತಿರುವುದು ಸರ್ವತ್ರ ಖಂಡನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.



ಸಭಾಪತಿ ಓಂ ಬಿರ್ಲಾ ಪದಚ್ಯುತಿಗಾಗಿ ಕಾಂಗ್ರೆಸ್ ನೇತೃತ್ವದ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲಗೊಂಡ ನಂತರದಲ್ಲಿ, ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನಡೆ ಟೀಕಿಸಿದ್ದಾರೆ. ಪ್ರಧಾನಿ ಪತ್ರಕ್ಕೆ ಕೃತಜ್ಞತೆ ವ್ಯಕ್ತಪಡಿಸಿರುವ ಬಿರ್ಲಾ, ಪ್ರಧಾನಿ ಮೋದಿ ಯಾವತ್ತೂ ಸಂಸದೀಯ ಪ್ರಜಾಸತ್ತೆಯ ನಿಯಮಗಳು, ನಿಯಮಾವಳಿಗಳು ಮತ್ತು ಪರಂಪರೆಯಲ್ಲಿ ಅಚಲ ನಂಬುಗೆ ಕಾಯ್ದುಕೊಂಡವರು ಎಂದು ಪ್ರಶಂಸಿಸಿದ್ದಾರೆ. ➡ಪುಟ ೮

### ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಸಂಸದರು ಸದನದೊಳಗೆ ಬ್ಯಾನರ್, ಭಿತ್ತಿಪತ್ರ, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು ಮತ್ತು ಅಸಭ್ಯ ಭಾಷೆ ಬಳಸುವ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಗಂಭೀರ ಆತಂಕ ವ್ಯಕ್ತಪಡಿಸಿ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ. ಅವರು ಸದನದಲ್ಲಿ ಶಿಸ್ತು ಮತ್ತು ನಡವಳಿಕೆಯನ್ನು ಕಾಪಾಡಲು ತಮ್ಮ ಪಕ್ಷದ ಸದಸ್ಯರಿಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ. ಲೋಕಸಭೆಗೆ ಸದಾ ಗೌರವಯುತ ಚರ್ಚೆ ಮತ್ತು ಸಂವಾದದ ಮಹತ್ವದ ಪರಂಪರೆ ಇದೆ. ➡ಪುಟ ೮

ಇರಾನ್ ದಾಳಿ ತಡೆದ ಗಲ್ಫ್ ರಾಷ್ಟ್ರಗಳು | 3 ಇಸ್ರೇಲಿಗರಿಗೆ ಗಾಯ

# ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

**ಕೈರೋ:** ಮಧ್ಯಪ್ರಾಚ್ಯ ಯುದ್ಧ ಮೂರನೇ ವಾರ ಪ್ರವೇಶಿಸಿದ ಹಿನ್ನೆಲೆ ನೆರೆರಾಷ್ಟ್ರಗಳ ಮೇಲಿನ ದಾಳಿಯನ್ನು ಇರಾನ್ ಭಾನುವಾರ ವಿಸ್ತರಿಸಿದ್ದು, ಯುಎಇನಲ್ಲಿನ ಮೂರು ಬಂದರುಗಳನ್ನು ಖಾಲಿ ಮಾಡಲು ಕರೆ ನೀಡಿದೆ. ಇದೇ ಮೊದಲ ಬಾರಿಗೆ ಯುಎಇ ವಿರುದ್ಧ ಇರಾನ್ ದಾಳಿ ಬೆದರಿಕೆ ಹಾಕಿದೆ.

ಭಾನುವಾರ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಇರಾನ್ ನಡೆಸಿದ ಹೊಸ ದಾಳಿಗಳನ್ನು ತಡೆಗಟ್ಟಿರುವುದಾಗಿ ಗಲ್ಫ್ ರಾಷ್ಟ್ರಗಳು ಹೇಳಿಕೊಂಡಿವೆ.

**ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿ:** ಭಾನುವಾರ ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿಗಳನ್ನು ನಡೆಸಿದ್ದು, ಇಸ್ರೇಲ್‌ನಲ್ಲಿ ಸೈರನ್ ಧ್ವನಿಗಳು ಕೇಳಿಬಂದಿವೆ. ಸೈರನ್ ಧ್ವನಿ ಕೇಳಿಬಂದಂತೆ ಜನರು ಆಶ್ರಯ ಕೇಂದ್ರಗಳಿಗೆ ಓಡಿದ್ದಾರೆ. ಕೆಲ ಕ್ಷಿಪಣಿಗಳು ಮಧ್ಯ ಇಸ್ರೇಲ್ ಮತ್ತು ಟೆಲ್ ಅವಿವ್ ಪ್ರದೇಶಗಳಿಗೆ ಹಾನಿಯನ್ನು ಉಂಟುಮಾಡಿವೆ. ➡ಪುಟ ೮



### ಬಾಹ್ಯಾಕಾಶ ಕೇಂದ್ರದ ಮೇಲೆ ದಾಳಿ

ಇರಾನ್‌ನ ಪ್ರಮುಖ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಮತ್ತು ವಾಯು ರಕ್ಷಣಾ ವ್ಯವಸ್ಥೆ ತಯಾರಿಕಾ ಕಾರ್ಖಾನೆಯ ಮೇಲೆ ದಾಳಿ ನಡೆಸಿರುವುದಾಗಿ ಶನಿವಾರ ತಡರಾತ್ರಿ ಇಸ್ರೇಲ್ ತಿಳಿಸಿದೆ. ಭಾನುವಾರವೂ ಇರಾನ್ ಮೇಲಿನ ದಾಳಿ ಮುಂದುವರಿಸಿರುವುದಾಗಿ ಇಸ್ರೇಲ್ ತಿಳಿಸಿದೆ. ಇದೇ ಸಮಯದಲ್ಲಿ ಬಹ್ರೈನ್, ಸೌದಿ ಅರೇಬಿಯಾ ಮತ್ತು ಯುಎಇ ತಮ್ಮ ನಾಗರಿಕರ ರಕ್ಷಣೆಗಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿವೆ.

# ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

- ಕಂದಹಾರ್ ಮೇಲೆ ಪಾಕಿಸ್ತಾನದ ಹೊಸ ದಾಳಿ
- ಆಫ್ಘನ್ ರಕ್ಷಣಾ ಪಡೆ ಪ್ರತಿದಾಳಿಗೆ 14 ಪಾಕ್ ಸೈನಿಕರ ಸಾವು

**ಕಾಬುಲ್:** ಅಫ್ಘಾನಿಸ್ತಾನದ ಸೇನಾ ಮೂಲಸೌಕರ್ಯ ಮತ್ತು ತಾಲಿಬಾನಿ ಅಡಗುದಾಣಗಳನ್ನು ಗುರಿಯಾಗಿಸಿ ಪಾಕಿಸ್ತಾನ ನಡೆಸಿದ ದಾಳಿಗೆ ತಾಲಿಬಾನ್ ಪ್ರತಿದಾಳಿ ನಡೆಸಿದ್ದು, 14 ಪಾಕ್ ಸೈನಿಕರು ಹತರಾಗಿದ್ದಾರೆ. ವಾರಾಂತ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಕದನ ವಿರಾಮಕ್ಕಾಗಿ ಚೀನಾ ಮತ್ತು ಟರ್ಕಿ ನಡೆಸಿದ ಮಧ್ಯಸ್ಥಿಕೆ ವ್ಯರ್ಥವಾಗಿದೆ. ತಾಲಿಬಾನಿಗಳ ಸರ್ವೋಚ್ಚ ನಾಯಕ ಹಿಬಾತುಲ್ಲಾ ಅಖುಂಡ್‌ಜಾದಾ ಆಡಳಿತದ ಕಂದಹಾರ್ ನಗರದ ಮೇಲೆ ಪಾಕಿಸ್ತಾನ ದಾಳಿ ನಡೆಸಿರುವುದಾಗಿ ಭಾನುವಾರ ಹೇಳಿದೆ. ➡ಪುಟ ೮

### ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

**ಚಳ್ಳಕೆರೆ(ಚಿತ್ರದುರ್ಗ):** ಹೆಗ್ಗೆರೆ ಸಮೀಪ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ರಿಸರ್ವ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಎಸ್‌ಐಗಳ ಸ್ಥಿತಿ ಚಿಂತಾಜನಕವಾಗಿದೆ. ಮಂಜುನಾಥ್, ಅಂಬರೀಷ್, ಸಚಿನ್ ಮೃತಪಟ್ಟವರು. ಈಶ್ವರ್, ಮಹಾಂತೇಶ್ ಗಂಭೀರ ಗಾಯಗೊಂಡಿದ್ದು, ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳ್ಳಾರಿಯಲ್ಲಿ ನಡೆಯಲಿದ್ದ ವಿವಾಹದಲ್ಲಿ ಭಾಗಿಯಾಗಲು ತೆರಳುತ್ತಿದ್ದರು. ➡ಪುಟ ೮

## ಕಿರುಸುದ್ದಿ

### ಕೋಟಿ ಚೆನ್ನಯ್ಯ ರಂಗಮಂದಿರದ ನಿರ್ಮಾಣಕ್ಕೆ 1.5 ಲಕ್ಷ ಸಹಾಯಧನ

**ಬಾಳೆಹೊನ್ನೂರು:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ) ಶೃಂಗೇರಿ ಯೋಜನಾ ವ್ಯಾಪ್ತಿಯ ಬಾಳೆಹೊನ್ನೂರು ಬಿಲ್ಲವ ಸಮಾಜ ಸೇವಾ ಸಂಘ (ರಿ) ಶ್ರೀ ನಾರಾಯಣಗುರು ಸಮುದಾಯ ಭವನದ ಶ್ರೀ ಕೋಟಿ ಚೆನ್ನಯ್ಯ ರಂಗಮಂದಿರದ ನಿರ್ಮಾಣಕ್ಕೆ 2025 – 26ನೇ ಸಾಲಿನ ಗ್ರಾಮ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗಡೆಯವರು 150000 ರೂ. ಸಹಾಯಧನವನ್ನು ಮಂಜೂರು ಮಾಡಿದ್ದು, ಮಂಜೂರಾತಿ ಪತ್ರವನ್ನು ಶೃಂಗೇರಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಸುರೇಶ್‌ರವರು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಸಂಜೀವ ಪೂಜಾರಿ ಅವರಿಗೆ ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಬಾಳೆಹೊನ್ನೂರು ವಲಯ ಮೇಲ್ವಿಚಾರಕರಾದ ಮೋಹನ್, ಬಿ. ಕಣಬೂರು ವಲಯ ಮೇಲ್ವಿಚಾರಕಿಯಾದ ಸುರೇಖಾ ಹಾಗೂ ಬಿಲ್ಲವ ಸೇವಾ ಸಂಘದ ಪದಾಧಿಕಾರಿಗಳಾದ ಅರುಣ್ ಕುಮಾರ್, ಸತೀಶ್ ಪೂಜಾರಿ ಅರಳಿಕೊಪ್ಪ, ಶೇಖರ್ ಪೂಜಾರಿ, ಮಂಜುನಾಥ್ ಮತ್ತು ಶ್ವೇತ ಉಪಸ್ಥಿತರಿದ್ದರು.



### ಕಾರಿನ ಮೇಲೆ ಉರುಳಿ ಬಿದ್ದ ಕಟ್ಟಿಗೆ ಲೋಡ್: ಪಾರಾದ ದಂಪತಿ, ಮಗು

**ಚಿಕ್ಕಮಗಳೂರು:** ಲಾರಿಯಲ್ಲಿ ಸಾಗಿಸಲಾಗುತ್ತಿದ್ದ ಕಟ್ಟಿಗೆಯ ಲೋಡು ಕಾರಿನ ಮೇಲೆ ಉರುಳಿ ಬಿದ್ದರೂ ಕಾರಿನಲ್ಲಿದ್ದ ಮಗು ಸೇರಿದಂತೆ ದಂಪತಿಗಳು ಪವಾಡಸದೃಶ ರೀತಿಯಲ್ಲಿ ಪಾರಾದ ಘಟನೆ ಶನಿವಾರ ರಾತ್ರಿ ನಗರ ಸಮೀಪದ ಲಕ್ಯಾ ಕ್ರಾಸ್‌ನಲ್ಲಿ ನಡೆದಿದೆ.

ಚಲಿಸುತ್ತಿದ್ದ ಕಾರಿನ ಮೇಲೆ ಕಟ್ಟಿಗೆ ತುಂಬಿ ಕೊಂಡು ಸಾಗುತ್ತಿದ್ದಾಗ ಕಟ್ಟಿಗೆ ಲೋಡು ಏಕಾಏಕಿ ಉರುಳಿ ಬಿದ್ದಿದೆ. ಪರಿಣಾಮ ದಂಪತಿ ಮತ್ತು ಮಗು ಕಾರಿನಲ್ಲಿ ಸಿಲುಕಿಕೊಂಡಿದ್ದರು. ಅಪಘಾತದ ತೀವ್ರತೆ ಕಂಡು ಬೆಚ್ಚಿಬಿದ್ದ ಸ್ಥಳೀಯರು ತಕ್ಷಣ ಸ್ಥಳಕ್ಕೆ ಧಾವಿಸಿ ಕಾರಿನಲ್ಲಿದ್ದ ಮೂವರನ್ನೂ ಹೊರಕ್ಕೆಳೆದು ರಕ್ಷಿಸಿದರು. ಅದೃಷ್ಟವಶಾತ್ ಮೂರೂ ಮಂದಿ ಗಂಭೀರ ಗಾಯಗಳಿಲ್ಲದೆ ಪಾರಾಗಿದ್ದಾರೆ.

ಘಟನೆ ಪರಿಣಾಮ ಪರಿಣಾಮರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ಟ್ರಾಫಿಕ್ ಜಾಮ್ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪೊಲೀಸರು ಮತ್ತು ಸ್ಥಳೀಯರು ಟ್ರಾಫಿಕ್ ವ್ಯವಸ್ಥೆಯನ್ನು ಸರಿಪಡಿಸಿದರು. ಲಾರಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂಬ ಶಂಕೆ ವ್ಯಕ್ತವಾಗಿದ್ದು, ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



### ವಿವಾಹಿತೆ ನಾಪತ್ತೆ

**ಚಿಕ್ಕಮಗಳೂರು:** ವಿವಾಹಿತ ಮಹಿಳೆಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಷಡಾಕ್ಷರಪ್ಪ ಎಂಬುವವರು ದೂರು ನೀಡಿದ್ದು, ತಮ್ಮ ಪತ್ನಿ ಸುಮಾ ಅವರು ಮಾರ್ಚ್ 11ರಂದು ಚಿಕಿತ್ಸೆಗೆಂದು ಅಂತರಘಟ್ಟೆ ಆಸ್ಪತ್ರೆಗೆ ಹೋದವರು ಮರಳಿ ಬಂದಿಲ್ಲ ಎಂದು ದೂರು ನೀಡಿದ್ದಾರೆ.



## ಗುಡ್ಡದ ಹೈಸ್ಕೂಲ್‌ನಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮ

**ಶೃಂಗೇರಿ:** 78 ವರ್ಷದ ಇತಿಹಾಸ ಹೊಂದಿರುವ ಗುಡ್ಡದ ಹೈಸ್ಕೂಲ್‌ನಿಂದ ಸಾವಿರಾರು ವಿದ್ಯಾರ್ಥಿಗಳು ಪ್ರಯೋಜನ ಪಡೆದು ಶಿಕ್ಷಣವಂತರಾಗಿದ್ದಾರೆ ಎಂದು ಶಿವಮೊಗ್ಗದ ಡಿವಿಎಸ್ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎಚ್.ಟಿ. ಕೃಷ್ಣಮೂರ್ತಿ ಹೇಳಿದರು.

ವಿದ್ಯಾ ನಗರದ ಕನ್ನಡ ಭವನದಲ್ಲಿ ಭಾನುವಾರ ಸರಕಾರಿ ಪ್ರೌಢಶಾಲೆ ಹಳೇ ವಿದ್ಯಾರ್ಥಿ ಸಂಘ ಏರ್ಪಡಿಸಿದ್ದ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಅತಿ ಸೂಕ್ಷ್ಮವಾಗುತ್ತಿದ್ದು, ಸಣ್ಣ ವಿಚಾರಕ್ಕೂ ಆತ್ಮಹತ್ಯೆಗೆ ಮುಂದಾಗುತ್ತಿರುವುದು ಶೋಚನೀಯ. ಮಕ್ಕಳಿಗೆ ನೈತಿಕ ಶಿಕ್ಷಣದ ಅಗತ್ಯವಿದ್ದು, ಸಂಸ್ಕಾರವಿಲ್ಲದೇ ಮಕ್ಕಳು ಸಮಾಜದೊಂದಿಗೆ ಸಂಪರ್ಕವಿಲ್ಲವಾಗುತ್ತಿದೆ. ತಾಲೂಕಿನ ಮೊದಲ ಸರಕಾರಿ ಪ್ರೌಢಶಾಲೆಯಾಗಿ ಪಟ್ಟಣದಲ್ಲಿದ್ದ ಶಾಲೆ ನಂತರ ತಾಲೂಕು ಬೋರ್ಡ್ ಶಾಲೆಯಾಗಿ ನಂತರ ಸರಕಾರಿ ಪ್ರೌಢಶಾಲೆಯಾಗಿದೆ. ಇಂದಿನ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಪೂರಕ ವಾತಾವರಣವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎ. ಪ್ರಕಾಶ್, ಸಂಘದಿಂದ ಅಮೃತ ಮಹೋತ್ಸವ ನಂತರ ಮತ್ತೆ ಹಳೇ ವಿದ್ಯಾರ್ಥಿಗಳು ಒಂದೆಡೆ ಸೇರಲು ಇದೊಂದು ವೇದಿಕೆಯಾಗಿದೆ ಎಂದರು.

ಡಾ. ನಿರಂಜನ ಕುಮಾರ್ ರಸಪ್ರಶ್ನೆ ಕಾರ್ಯಕ್ರಮ ನಡೆಸಿದರು. ಸರಕಾರಿ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ಶಶಿಧರ್, ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷ ರಾಜೇಶ್, ಶಿವಕುಮಾರ್ ಇತರರು ಇದ್ದರು.

## ಶೃಂಗೇರಿ ಸುತ್ತಮುತ್ತ ಮಳೆ

**ಶೃಂಗೇರಿ:** ತಾಲೂಕಿನ ಕೆಲವೆಡೆ ಭಾನುವಾರ ಮಧ್ಯಾಹ್ನ ನಂತರ ಕೆಲವೆಡೆ ತುಂತುರು ಮಳೆಯಾಗಿದೆ. ದಟ್ಟವಾದ ಮೋಡ ಕವಿದಿದ್ದುಭಾರಿ ಮಳೆ ನಿರೀಕ್ಷೆಯಲ್ಲಿದ್ದ ರೈತರಿಗೆ ಅಲ್ಪ ಪ್ರಮಾಣದ ಮಳೆಯಿಂದ ನಿರಾಸೆಯಾಗಿದೆ. ಪಟ್ಟಣದಲ್ಲಿ ತುಂತುರು ಮಳೆಯಾಗಿದ್ದರೆ, ಕುಂಚೆಬೈಲಿನಲ್ಲಿ ಎರಡು ಬಾರಿ ಮಳೆಯಾಗಿದ್ದರೂ, ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ತೋಟಗಾರಿಕೆ ಬೆಳೆ ಹಾಗೂ ಕಾಫಿ ಮಳೆ ಅಗತ್ಯವಾಗಿದ್ದು, ಕನಿಷ್ಟ 25 ಮಿಮೀ ಮಳೆಯಾದಲ್ಲಿ ರೈತರಿಗೆ ಅನುಕೂಲವಾಗಲಿದೆ.

## ತಲಗಾರು ಭಾಸ್ಕರ ರಾವ್ ನಿಧನ

**ಶೃಂಗೇರಿ:** ನೆಮ್ಮಾರ್ ಗ್ರಾಮ ಪಂಚಾಯಿತಿ ಹರೂರು ಗ್ರಾಮದ ತಲಗಾರು ಭಾಸ್ಕರರಾವ್ (85) ಭಾನುವಾರ ನಿಧನರಾದರು. ಇವರಿಗೆ ಪುತ್ರ ವಿದ್ಯುತ್ ಗುತ್ತಿಗೆದಾರ ಟಿ.ಬಿ.ನಾಗೇಶ್ ಹಾಗೂ ಪುತ್ರಿ ಜಯಲಕ್ಷ್ಮೀವಿಶ್ವೇಶ್ವರ ಇದ್ದಾರೆ.ನೆಮ್ಮಾರ್ ಮಂಡಲ ಉಪ ಪ್ರಧಾನರಾಗಿ, ಪೀಕಾರ್ಡ್ ಬ್ಯಾಂಕ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಬೆಟ್ಟಗೆರೆ ಮುರುಳಿಕೃಷ್ಣ, ಎ.ಎಂ. ಶ್ರೀಧರರಾವ್, ಎಚ್.ಕೆ.ದಿನೇಶ್ ಹೆಗ್ಡೆ, ಟಿ.ಎಸ್.ಉಮೇಶ್ ಸಂತಾಪ ವ್ಯಕ್ತಪಡಿಸಿದ್ದಾರೆ.

### ಗುತ್ತಿಗೆ ನೌಕರರಿಗೆ ಸೂಕ್ತ ಸಂಬಳ ನೀಡಿ: ರಾಜ್ಯಾಧ್ಯಕ್ಷ ಸುಧಾಕರ

# ಕನಿಷ್ಟ ವೇತನ ಕರ್ತವ್ಯ

**ಚಿಕ್ಕಮಗಳೂರು:** ಸರ್ಕಾರಿ ಇಲಾಖೆಗಳಲ್ಲಿ ಬಹುತೇಕ ಕೆಲಸಗಳನ್ನು ನಿರ್ವಹಿಸುವ ಗುತ್ತಿಗೆ ನೌಕರರಿಗೆ ಕನಿಷ್ಟ ವೇತನ ಒದಗಿಸುವುದು ಸರ್ಕಾರದ ಕರ್ತವ್ಯ ಎಂದು ಸರ್ಕಾರಿ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಸುಧಾಕರ ಹೇಳಿದರು.

ನಗರದ ಕುವೆಂಪು ಕಲಾ ಮಂದಿರದಲ್ಲಿ ಭಾನುವಾರ ಜಿಲ್ಲಾ ಸರ್ಕಾರಿ ಹೊರ ಗುತ್ತಿಗೆ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ನೂತನ ಜಿಲ್ಲಾ ಘಟಕ ಸ್ಥಾಪನೆ ಹಾಗೂ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯಾದ್ಯಂತ ಸರ್ಕಾರಿ ನೌಕರರಿಗಿಂತ ಅತಿ ಹೆಚ್ಚು ಕಾರ್ಯ ನಿರ್ವಹಿಸುವವರು ಹೊರಗುತ್ತಿಗೆ ನೌಕರರು. ಹೊರಗುತ್ತಿಗೆ ನೌಕರರು ವೃತ್ತಿಬದಿಗಿರಿಸಿ ರಜೆಘೋಷಿಸಿದಲ್ಲಿ ಸರ್ಕಾರ ಮುನ್ನಡೆಯುವುದು ಕಷ್ಟಸಾಧ್ಯ ಎಂದರು.

ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ದಾಖಲಾತಿಗಳ ನಿರ್ವಹಣೆ ಸೇರಿದಂತೆ ಪ್ರತಿಯೊಂದು ಕಾರ್ಯವು ಹೊರಗುತ್ತಿಗೆ ನೌಕರರನೇ ನಿರ್ವಹಿಸುತ್ತಿದ್ದಾರೆ. ರಾಜ್ಯಾದ್ಯಂತ ಅನೇಕ ಜಿಲ್ಲೆಗಳಲ್ಲಿ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ, ಖಾಯಂ, ಕನಿಷ್ಟ ವೇತನ, ಪಿಎಫ್ ಹಾಗೂ ಇಎಸ್‌ಐ ಸೌಲಭ್ಯವಿಲ್ಲ. ಕೆಲವು ಏಜೆನ್ಸಿಗಳಿಂದ ನೇಮಕಗೊಳ್ಳುವ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನವು ದೊರಕುತ್ತಿಲ್ಲ. ಇದರಿಂದ ದಿನದ ಕೂಲಿಗಾಗಿ ನೌಕರರು ಇಂದು ಹೋರಾಟದ ಹಾದಿ ಹಿಡಿಯಬೇಕಾಗಿದೆ ಎಂದು ತಿಳಿಸಿದರು.

ಕಾರ್ಮಿಕ ಇಲಾಖೆ ಕಟ್ಟಡ ಕಾರ್ಮಿಕರ ಮಕ್ಕಳ ಮದುವೆ, ವಿದ್ಯಾಭ್ಯಾಸ ಹಾಗೂ ವಿಮೆ ಸೌಲಭ್ಯವನ್ನು ಕಲ್ಪಿಸುತ್ತಿದೆ. ಆದರೆ ಹೊರಗುತ್ತಿಗೆ ನೌಕರರ ಮಕ್ಕಳಿಗೆ ಯಾವುದೇ ಸೌಲಭ್ಯ ಕಲ್ಪಿಸುತ್ತಿಲ್ಲ. ಮುಂದೆ ಕಾರ್ಮಿಕ ಇಲಾಖೆಯಡಿ ಲಭ್ಯವಾಗುವ ಸಕಲಸೌಲಭ್ಯವು ಗುತ್ತಿಗೆ ನೌಕರರಿಗೆ ಒದಗಿಸಿಕೊಡಬೇಕು, ಮಹಿಳಾ ನೌಕರರಿಗೆ ಋತುಚಕ್ರ ಸಮಯದಲ್ಲಿ ರಜೆ ಹಾಗೂ ರಕ್ಷಣೆಗಾಗಿ ಸಮಿತಿ ರಚಿಸಬೇಕು ಎಂದರು.

ಶಾಸಕ ಹೆಚ್.ಡಿ. ತಮ್ಮಯ್ಯ ಮಾತನಾಡಿ, ನೌಕರರು ಆತ್ಮಶಕ್ತಿ ಕಳೆದುಕೊಳ್ಳಬೇಡಿ. ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ವೃತ್ತಿಗಳಲ್ಲಿ ನಿವೃತ್ತಿಗೊಂಡಲ್ಲಿ, ಅದೇ ಕುಟುಂಬದ ವ್ಯಕ್ತಿಯನ್ನು ಬಲಾಢ್ಯದಿಂದ ವೃತ್ತಿಗೆ ದಾಖಲಿಸಲು ಕಾಣದ ಕೈಗಳು ಕೆಲಸ ಮಾಡುತ್ತಿವೆ. ಹೀಗಾಗಿ ನೌಕರರು ಈ ಸಮಸ್ಯೆಯಿಂದ ಹೊರಬರಲು ಸಂಘಟಿತರಾಗಬೇಕು ಎಂದರು.

ಸಂಘದ ಜಿಲ್ಲಾ ಸಂಘಟನಾ ಸಂಚಾಲಕ ಎಂ.ಜೆ.ಪ್ರದೀಪ್ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷ ಎಲ್. ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೊರಗುತ್ತಿಗೆ ನೌಕರರು ಸಂಘಟಿತರಾಗಿ ಹೋರಾಡಿದರೆ ಯಾವುದೇ ಏಜೆನ್ಸಿಗಳು ವೃತ್ತಿಯಿಂದ ವಜಾಗೊಳಿಸಲು ಸಾಧ್ಯವಿಲ್ಲ. ಅಲ್ಲದೇ ಸರ್ಕಾರದ ಪ್ರತಿಯೊಂದು ಸೌಲಭ್ಯವನ್ನು ನ್ಯಾಯಬದ್ಧವಾಗಿ ಪಡೆದುಕೊಳ್ಳಲು ಸಾಧ್ಯ ಎಂದರು.



> ಇತ್ತೀಚೆಗೆ ಸರ್ಕಾರಗಳು ಹೊರಗುತ್ತಿಗೆ ಪದ್ಧತಿ ಕ್ಯಜೆಸಿ, ಸೊಸೈಟಿ ಮಾದರಿಯಲ್ಲಿ ನೇಮಕಾತಿ ಮಾಡುತ್ತಿ ರುವುದು ಸರಿಯಲ್ಲ. ಇದರಿಂದ ಶೇ.80ರಷ್ಟು ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ಕೋರ್ಟಿನ ಆದೇಶದಂತೆ 45 ದಿನಗಳ ಕಾಲಾವಕಾಶದೊಳಗೆ ಗುತ್ತಿಗೆ ನೌಕರರಿಗೆ ಮೂಲ ಬೇಡಿಕೆ ಈಡೇರಿಸುವ ಮೂಲಕ ಸ್ಪಂದಿಸಬೇಕು.
> ■ ಸುಧಾಕರ, ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ

**ನೂತನ ಪದಾಧಿಕಾರಿಗಳು**

ಜಿಲ್ಲಾ ಸಂಘದ ನೂತನ ಪದಾಧಿಕಾರಿಗಳು : ಎಲ್. ಮಂಜು (ಅಧ್ಯಕ್ಷ), ಎನ್. ಗಿರೀಶ್ (ಉಪಾಧ್ಯಕ್ಷ), ಸುಬ್ರಹ್ಮಣ್ಯ (ಪ್ರ. ಕಾರ್ಯದರ್ಶಿ), ಮಣಿಕುಮಾರ್ (ಕಾರ್ಯದರ್ಶಿ), ಟಿ.ಈ. ತಮ್ಮಯ್ಯ (ಸಹ ಕಾರ್ಯದಶಿ), ಎಂ.ಜೆ. ಪ್ರದೀಪ್ (ಸಂ.ಕಾರ್ಯದರ್ಶಿ), ಕೆ.ಎಸ್. ಮಂಜುಳಾ (ಖಜಾಂಚಿ), ದರ್ಶನ್ (ನಿರ್ದೇಶಕರು) ಆಯ್ಕೆಯಾದರು. ಕಾರ್ಯಕ್ರಮದಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಡಿ. ಡಮರುಗೇಶ್, ಸಂಚಾಲಕ ಎನ್. ಗಂಗಾಧರ್ ವಿವಿಧ ಜಿಲ್ಲಾಧ್ಯಕ್ಷರು ಇದ್ದರು.

# ಮನೆ ಮತ್ತು ಸಮಾಜ ಕಾಪಾಡುವ ಶಕ್ತಿ ಹೆಣ್ಣಿಗಿದೆ

**ಚಿಕ್ಕಮಗಳೂರು:** ಹೆಣ್ಣಿಗೆ ಅಸಾಧ್ಯ ಎಂಬುದು ಯಾವುದು ಇಲ್ಲ, ಬದುಕಿನ ಅನೇಕ ಸವಾಲುಗಳನ್ನು ಎದುರಿಸುವ ಮೂಲಕ ಮನೆ ಮತ್ತು ಸಮಾಜವನ್ನು ಕಾಪಾಡುವ ಶಕ್ತಿ ಆಕೆಗಿದೆ ಎಂದು ಸಮಾಜ ಸೇವಕಿ ಪಲ್ಲವಿ ಸಿ.ಟಿ.ರವಿ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಗ್ರಾಮಾಂತರ ಮಹಿಳಾ ಮೋರ್ಚಾ ವತಿಯಿಂದ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣೊಂದು ಮನಸ್ಸು ಮಾಡಿದರೆ ಸಮಾಜದ ಯಾವುದೇ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಲ್ಲಳು. ಕುಟುಂಬದ ಜವಾಬ್ದಾರಿ, ಮಕ್ಕಳ ಪಾಲನೆಯ ಜೊತೆಗೆ ವಿವಿಧ ರಂಗದಲ್ಲಿ ಹೆಣ್ಣು ಇಂದು ಸಾಧನೆ ಮಾಡುವ ಮೂಲಕ ಪುರುಷರ ಸರಿಸಮಾನವಾಗಿ ಬೆಳೆದು ನಿಂತಿದ್ದಾಳೆ ಎಂದು ಹೇಳಿದರು.

ವಕೀಲೆ ಡಿ.ಎಸ್. ಮಮತ ಮಾತನಾಡಿ, ಆಧುನಿಕ ಮಹಿಳೆಯರಿಗೆ ವಿಶೇಷವಾಗಿ ಹೆಚ್ಚು ಕಾನೂನಿನ ತಿಳುವಳಿಕೆಯ ಅವಶ್ಯವಿದೆ. ಸಂಕಷ್ಟ ಸಮಯದಲ್ಲಿ ನೆರವಾಗುವ ವಿವಿಧ ಮಹಿಳಾ ಸಹಾಯವಾಣಿಗಳ ಮೂಲಕ ತಾವು ಇತರರಿಗೂ ತಿಳಿಸಬೇಕು. ಇದು ಮಹಿಳಾ ರಕ್ಷಣೆಗೆ ಅತ್ಯಂತ ಹೆಚ್ಚು ಪರಿಣಾಮಕಾರಿ ಎಂದರು.

ಬಿಜೆಪಿ ನಗರ ಮಂಡಲ ಅಧ್ಯಕ್ಷೆ ಪವಿತ್ರ ಮಧುಗುಂಡಿ ಮಾತನಾಡಿ, ಮಹಿಳೆಯರ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ದಿನದ 24 ಗಂಟೆಗಳಲ್ಲಿ ಕನಿಷ್ಟ ಒಂದು ಗಂಟೆ ಮಹಿಳೆಯರು ತಮ್ಮ ಸ್ವಂತ ಆರೋಗ್ಯ ಮತ್ತು ಇತರೆ ಚಟುವಟಿಕೆಗಳಿಗೆ ಮೀಸಲಿಡಬೇಕು ಎಂದು ಕಿವಿಮಾತು ಹೇಳಿದರು.

ಗ್ರಾಮಾಂತರ ಮಹಿಳಾ ಮೋರ್ಚಾ ಅಧ್ಯಕ್ಷೆ ಲೀಲಾ ಪರಮೇಶ್ ಅಧ್ಯಕ್ಷತೆ ವಹಿಸಿದ್ದರು. ಜೊತೆಗೆ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಮಹಿಳಾ ಕಾರ್ಯಕರ್ತರಿಗೆ ಸ್ಮರಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಜಸಂತ ಅನಿಲ್ ಕುಮಾರ್, ತಾ.ಪಂ. ಮಾಜಿ ಸದಸ್ಯೆ ದ್ರಾಕ್ಷಾಯಿಣಿ ಪ್ರಾಣೇಶ್, ಮುಖಂಡರಾದ ರೇಖಾ, ಅಂಬಿಕಾ ಪ್ರಕಾಶ್, ಆವಿಲಾ ಚಂದ್ರಶೇಖರ್, ಸಂಗೀತ ಪ್ರಸಾದ್, ಪಲ್ಲವಿ ನಿವೇಶ್, ಆಶಾ ರಾಣಿ, ವಿಮಲ ತೊಗರಿಹಂಕಲ್, ಚೈತ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



## ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮಕ್ಕೆ ನಿರ್ದೇಶನ

**ಚಿಕ್ಕಮಗಳೂರು:** ಪ್ರಸ್ತುತ ಕೊಲ್ಲಿ ರಾಷ್ಟ್ರ ಯುದ್ಧದ ಪರಿಣಾಮವಾಗಿ ಉದ್ಭವಿಸಿರುವ ಎಲ್‌ಪಿಜಿ ಸರಬರಾಜು ಬಗ್ಗೆ ಸಮರ್ಪಕವಾದ ಪರಿಹಾರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅತ್ಯಂತ ಮಹತ್ವದ ಕ್ರಮಗಳನ್ನು ಕೈಗೊಂಡಿದೆ ಎಂದು ರಾಜ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ದೇಶದಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ಎಲ್‌ಪಿಜಿ ದಾಸ್ತಾನು ಗೃಹಬಳಕೆ ಗ್ರಾಹಕರಿಗೆ ಅಗತ್ಯವಿರುವ ಬಗ್ಗೆ ತೈಲ ಕಂಪನಿಗಳು ಮಾಹಿತಿ ನೀಡಿದ್ದು, ರಾಜ್ಯದ ಎಲ್ಲಾ ಗ್ರಾಹಕರು ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಗ್ರಾಹಕರು ಆತಂಕದಲ್ಲಿ ತುರ್ತು ಮತ್ತು ಅನಗತ್ಯ ಬುಕಿಂಗ್ ಮಾಡದೆ, ಮಾರುಕಟ್ಟೆಯಲ್ಲಿ ಕೃತಕ ಬೇಡಿಕೆ ಸೃಷ್ಟಿಯಾಗದಂತೆ ಸಮರ್ಪಕವಾಗಿ ಬಳಕೆ ಮಾಡಲು ಸಮತೋಲನ ಕಾಪಾಡಲು ತಿಳಿಸಲಾಗಿದೆ.

ಅಗತ್ಯ ಸೇವೆಗಳನ್ನು ಒದಗಿಸುವ ಸಾರ್ವಜನಿಕ ಸಂಸ್ಥೆಗಳಾದ ಸರ್ಕಾರಿ ಆಸ್ಪತ್ರೆಗಳು, ವಿದ್ಯಾರ್ಥಿ ನಿಲಯಗಳು, ಅಂಗನವಾಡಿ, ಶಾಲೆ, ಕಾಲೇಜು, ಕಾರಾಗೃಹ, ಇತ್ಯಾದಿ ಸಂಸ್ಥೆಗಳಿಗೆ ಯಾವುದೇ ಅಡಚಣೆ ಯಾಗದಂತೆ ಎಲ್‌ಪಿಜಿ ಸೌಲಭ್ಯವನ್ನು ಒದಗಿಸುವಂತೆ ತೈಲಕಂಪನಿಗಳಿಗೆ ಸೂಚನೆಯನ್ನು ನೀಡಲಾಗಿದೆ.

ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನು, ಸಾಗಾಣಿಕೆ, ರಿಫಿಲ್ಲಿಂಗ್ ಪ್ರಕರಣಗಳು ಕಂಡು ಬಂದಲ್ಲಿ ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಕ್ರಮ ವಹಿಸಲು ಅಗತ್ಯ ಸೂಚನೆ ನೀಡಲಾಗಿದೆ. ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಲು ಸಹ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿದೆ

## ಸಾಂಪ್ರದಾಯಿಕ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲು ಕಾಳಜಿ ವಹಿಸಿ: ತಮ್ಮಯ್ಯ

**ಚಿಕ್ಕಮಗಳೂರು:** ಕಾಂಗ್ರೆಸ್ ಸಾಂಪ್ರದಾಯಿಕ ಮತದಾರರನ್ನು ಮತದಾರ ಪಟ್ಟಿಗೆ ಸೇರಿಸುವಲ್ಲಿ ಬಿಎಲ್‌ಒ-2ಗಳು ಕಾಳಜಿ ವಹಿಸಿದಲ್ಲಿ ಮಾತ್ರ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಗಟ್ಟಿಯಾಗಿ ಎದುರಿಸಲು ಸಾಧ್ಯ ಎಂದು ಶಾಸಕ ಎಚ್.ಡಿ. ತಮ್ಮಯ್ಯ ಹೇಳಿದರು.

ನಗರದ ರೋಟರಿ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಬಿಎಲ್‌ಎ-2 ಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾರ್ಚ್ 31 ಕ್ಕೆ ಬೂತ್‌ಮಟ್ಟದಲ್ಲಿ ಮ್ಯಾಪಿಂಗ್ ಮಾಡುವುದು ಕೊನೆಯಾಗಲಿದೆ ಎಂದು ಡಿಸಿ ಹೇಳಿದ್ದಾರೆ. ಮ್ಯಾಪಿಂಗ್‌ನಲ್ಲಿ ನಮ್ಮ ಪಕ್ಷದ ಮತದಾರರೆ ಹಿಂದುಳಿದಿದ್ದಾರೆ. 51 ಸಾವಿರ ಮತದಾರರು ಕ್ಷೇತ್ರದಲ್ಲಿ ಮ್ಯಾಪಿಂಗ್ ಆಗಿಲ್ಲ. ಅದರಲ್ಲೂ ಕಾಂಗ್ರೆಸ್ ಸಾಂಪ್ರದಾಯಿಕ ಮರದಾರರೇ ಕೈಬಿಟ್ಟು ಹೋಗಿದ್ದಾರೆ. ಸದ್ಯದಲ್ಲೇ ಗ್ರಾಮ, ಜಿಲ್ಲಾ, ತಾಲೂಕು ಪಂಚಾಯಿತಿ ಚುನಾವಣೆಗಳು ಬರಲಿವೆ. ಇದರಲ್ಲಿ ನಮ್ಮ ಕಾರ್ಯಕರ್ತರೇ ಚುನಾವಣೆಯಲ್ಲಿ ನಿಲ್ಲಲಿದ್ದಾರೆ. ನಮ್ಮ ಕಾರ್ಯಕರ್ತರ ಚುನಾವಣೆಗೆ ನ್ಯಾಯ ಒದಗಿಸಬೇಕು ಎಂಬ ಕಾರಣಕ್ಕೆ ಈ ಕಾರ್ಯಾಗಾರ ಅತಿ ಮುಖ್ಯವಾಗಿದೆ ಎಂದರು.

ಮ್ಯಾಪಿಂಗ್‌ನಲ್ಲಿ 56 ಸಾವಿರ ಅಂದರೆ ಒಂದು ಬೂತ್‌ನಲ್ಲಿ200 ಮತದಾರರು ಮ್ಯಾಪಿಂಗ್ ಆಗಿಲ್ಲ. ಒಂದು ಮತದಲ್ಲಿ ಗೆದ್ದರೂ ಅದು ಗೆಲುವೆ. ಹೀಗಾಗಿ ಒಂದೊಂದು ಮತಕ್ಕೂ ಮಹತ್ವ ಇದೆ. ನಮ್ಮ ಕಾಂಗ್ರೆಸ್ ಪಕ್ಷದ ಸಾಪ್ರದಾಯಿಕ ಮತಗಳೇ ಮ್ಯಾಪಿಂಗ್ ಆಗಿಲ್ಲದ ಹಿನ್ನೆಲೆಯಲ್ಲಿ ಇಲ್ಲಿರುವ ಎಲ್ಲ ಕಾರ್ಯಕರ್ತರು ತಮ್ಮ ಆತ್ಮ ಸಾಕ್ಷಿಗನುಗುಣವಾಗಿ ತಮ್ಮ ಬೂತ್‌ನಲ್ಲಿ ಮತ ಪರಿಶೀಲಿಸಿ ಬಿಟ್ಟು ಹೋಗಿದ್ದವರ ಹೆಸರನ್ನು ಸೇರ್ಪಡೆಜತೆಗೆ ಹೊಸ ಮತದಾರರ ಹೆಸರನ್ನು ಸೇರಿಸಬೇಕು. ಅವರವರ ಬೂತ್‌ನಲ್ಲಿ ಪರಿಶೀಲಿಸಬೇಕು ಎಂದು ಮನವಿ ಮಾಡಿ, ಬಿಜೆಪಿಯಲ್ಲಿ ಗ್ರಾಮ ಪಂಚಾಯಿತಿಯಿಂದ ಪ್ರಧಾನಿವರಗೆ ಬಿಎಲ್‌ಒ-2 ಗಳಾಗಿದ್ದಾರೆ ಎಂಬುದನ್ನು ಹೇಳಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಅಂಶುಮಂತ್ ಮಾತನಾಡಿ, ಸಂಸದರು, ಶಾಸಕರನ್ನು ಗೆಲ್ಲಿಸುವಂತಹಚುನಾವಣೆಯಲ್ಲಿ ಪಕ್ಷ ಸಕ್ರೀಯ ಆಗುವುದು ಸಹಜ. ನಮ್ಮ ಪಕ್ಷ ಉಳಿಯಬೇಕು ಎಂದರೆಕಾರ್ಯಕರ್ತರು ಬೆನ್ನೆಲುಬಾಗಿ ನಿಲಬೇಕು. ನಮ್ಮ ಸಕ್ರೀಯ ಕಾರ್ಯಕರ್ತರು ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಸದೃಢ ಆಗುವ ನಿಟ್ಟಿನಲ್ಲಿ ಇಂದಿನ ತರಬೇತಿ ಮಹತ್ವದ್ದುಎಂದರು.

ಕಾಂಗ್ರೆಸ್ ಮುಖಂಡ ಎಂ.ಎಲ್.ಮೂರ್ತಿ, ಕೆಪಿಸಿಸಿ ವಕ್ತಾರಎಚ್.ಎಚ್.ದೇವರಾಜ್, ಸಿಡಿಎ ಅಧ್ಯಕ್ಷ ಎಚ್.ಪಿ. ಮಂಜೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಡಿಮನೆ ಸತೀಶ್, ಪ್ರಚಾರ ಸಮಿತಿ ಅಧ್ಯಕ್ಷ ಷರೀಫ್, ಕೆಪಿಸಿಸಿ ಮಹಿಳಾ ಘಟಕದ ಉಪಾಧ್ಯಕ್ಷೆ ರೇಖಾಹುಲಿಯಪ್ಪಗೌಡ, ಸಿಡಿಎ ಮಾಜಿ ಅಧ್ಯಕ್ಷ ನಯಾಜ್, ಕೆಫೆಕ್ ಅಧ್ಯಕ್ಷ ಹರೀಶ್, ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಶಿವಾನಂದಸ್ವಾಮಿ, ಮಲ್ಲೇಶಸ್ವಾಮಿ, ತನೋಜ್ ಶವು ಮತ್ತಿತರರಿದ್ದರು.



### ವ್ಯವಸ್ಥೆ ಲೋಪದಿಂದ ನೀರಿನ ಸಮಸ್ಯೆ। ಸಮರ್ಪಕ ಪೈಪ್‌ಲೈನ್ ಅಳವಡಿಕೆ ಇಲ್ಲದೆ ಪರದಾಟ

# ಕಾಮ್ಲೆ ಗುಡ್ಡದಲ್ಲಿ ಬೇಸಿಗೆಗೂ ಮುನ್ನವೇ ನೀರಿನ ಹಾಹಾಕಾರ

▸▸ ರಮೇಶ್, ಕರುವಾನೆ

ದಿಗಂತ ವಿಶೇಷ

**ಶೃಂಗೇರಿ:** ಬೇಸಿಗೆಗೂ ಮುನ್ನವೇ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಪರಿಶಿಷ್ಟ ಪಂಗಡದ ಜನರೇ ವಾಸವಾಗಿರುವ ಕಾಮ್ಲೆ ಗುಡ್ಡದ ಪರಿಶಿಷ್ಟ ವರ್ಗದ ಜನರು ಕುಡಿಯುವ ನೀರಿಗೆ ಪರದಾಡುವಂತಾಗಿದೆ.

ಮೆಣಸೆ ಗ್ರಾಮ ಪಂಚಾಯಿತಿ ಮಸಿಗೆ ಗ್ರಾಮದ ಪರಿಶಿಷ್ಟ ವರ್ಗದವರೇ ಇರುವ ಇಲ್ಲಿ ವ್ಯವಸ್ಥೆ ಲೋಪದಿಂದ ನೀರಿನ ಸಮಸ್ಯೆ ಎದುರಾಗಿದೆ.

ಹೆಸರೇ ಹೇಳುವಂತೆ ಗುಡ್ಡದಲ್ಲಿರುವ ಹತ್ತು ಮನೆಗಳು ಸ್ವಾಭಾವಿಕವಾಗಿ ಗುಡ್ಡದಿಂದ ಬರುವ ನೀರನ್ನು ಬಳಸಿಕೊಳ್ಳಲಾಗುತ್ತದೆ. ಗ್ರಾಮ ಪಂಚಾಯಿತಿಯಿಂದ ಈ ಹಿಂದೆ ನೀರಿನ ಸಂಗ್ರಹಣೆಗಾಗಿ 10 ಸಾವಿರ ಲೀಟರ್ ಸಾಮಾರ್ಥ್ಯದ ಟ್ಯಾಂಕ್ ನಿರ್ಮಿಸಿದೆ. ಈ ಟ್ಯಾಂಕ್‌ನಿಂದ ಕೆಳಗಿರುವ ಹತ್ತು ಮನೆಗಳಿಗೆ ನೀರು ಪೂರೈಕೆಯಾಗುತ್ತಿದೆ. ಟ್ಯಾಂಕ್‌ನಿಂದ ಪೂರೈಕೆಯಾಗುತ್ತಿರುವ ನೀರಿಗೆ ಸಮರ್ಪಕ ಪೈಪ್‌ಲೈನ್ ವ್ಯವಸ್ಥೆ ಇಲ್ಲದೇ ಪ್ರತಿ ದಿನವೂ ನೀರಿಗಾಗಿ ಪರದಾಡಬೇಕಿದೆ.

**ಗ್ರಾವಿಟಿ ವಾಟರ್:** ಸಂಗ್ರಹಣಾ ಟ್ಯಾಂಕ್‌ಗೆ ಗುಡ್ಡದಿಂದ ಪೈಪ್ ಮೂಲಕ ಟ್ಯಾಂಕ್‌ಗೆ ಯಾವುದೇ ಖರ್ಚಿಲ್ಲದೇ ದಿನದ 24 ಗಂಟೆಯೂ ನೀರು ಬರುತ್ತಿರುತ್ತದೆ. ಅದೇ ರೀತಿ ಟ್ಯಾಂಕ್‌ನಿಂದ ಎಲ್ಲಾ ಮನೆಗೂ ಗ್ರಾವಿಟಿ ಮೂಲಕವೇ ನೀರು ಪೂರೈಕೆಯಾಗುತ್ತದೆ.

ಸಮೃದ್ಧವಾಗಿ ನೀರಿದ್ದರೂ ಏಪ್ರಿಲ್-ಮೇನಲ್ಲಿ ಮಳೆಯಾಗದಿದ್ದಲ್ಲಿ ನೀರಿನ ಪೂರೈಕೆ ಅಲ್ಪ ಮಟ್ಟದ ತೊಂದರೆಯಾಗುತ್ತದೆ. ನೀರು ಕಡಿಮೆಯಾಗುತ್ತಿದ್ದಂತೆ ಟ್ಯಾಂಕ್ ಬಳಿ ಇರುವ ಗೇಟ್ ವಾಲ್ ಬಂದ್ ಮಾಡಿ, ಸಂಜೆ ಮತ್ತು ಬೆಳಗ್ಗೆ ಮಾತ್ರ ನೀರು ಬಿಡುತ್ತಾರೆ. ಕುಡಿಯುವ ನೀರಿನೊಂದಿಗೆ ಮನೆಯ ಸುತ್ತ ಇರುವ ಕಾಫಿ, ಅಡಕೆ, ಹೂವಿನ ಗಿಡಗಳಿಗೂ ನೀರು ಬಳಸಲಾಗುತ್ತದೆ.

**ಪೂರೈಕೆಯಲ್ಲಿ ಎಡವಟ್ಟು:** ಟ್ಯಾಂಕ್‌ವರೆಗೆ ಬರುವ ನೀರನ್ನು ಟ್ಯಾಂಕ್‌ನಿಂದ ಹೊರಗಡೆ ಪಿವಿಸಿ ಪೈಪ್ ಅಳವಡಿಸಿ, ಅದಕ್ಕೆ ಹತ್ತು ಅರ್ಧ ಇಂಚಿನ ಪೈಪ್ ಜೋಡಿಸುವ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಎಲ್ಲಾ ಮನೆಯವರು ಸ್ವಂತ ಖರ್ಚಿನಲ್ಲಿ ಪೈಪ್ ಹಾಕಿಕೊಂಡು ನೀರು ಪಡೆದುಕೊಳ್ಳುತ್ತಿದ್ದಾರೆ.ಅರ್ಧ ಇಂಚಿನ ಕೃಷಿಗೆ ಬಳಸುವ ಡ್ರಿಪ್ ಪೈಪ್ ಹಾಕಿದ್ದು, ಇದು ರಸ್ತೆ ಬದಿ ಕಾಲುವೆಯಲ್ಲಿ ಆಯಾ ಮನೆಗೆ ಬರುತ್ತದೆ. ಸಾಮಾನ್ಯದ ಪೈಪ್ ಆಗಿದ್ದು, ರಸ್ತೆ ದಾಟುವಲ್ಲಿ ಮತ್ತು ದನ ಕರುಗಳು ತುಳಿದು ಪೈಪ್ ಒಡೆಯುವುದು ಸಾಮಾನ್ಯ. ಇದರಿಂದ ಅಲ್ಲಲ್ಲಿ ಒಡೆದಿರುವ ಪೈಪನ್ನು ಜಾಯಿಂಟ್ ಮಾಡಿದ್ದು, ಇದು ಆಗಾಗ್ಗೆ ತಪ್ಪಿ ಹೋಗುವುದರಿಂದ ನೀರು ಸಮರ್ಪಕವಾಗಿ ಬರುವುದಿಲ್ಲ. ಇದು ಪ್ರತಿ ದಿನದ ಗೋಳಾಗಿದ್ದು, ವ್ಯವಸ್ಥಿತ ಪೈಪ್ ಅಳವಡಿಸಿ, ಗೇಟ್ ವಾಲ್ವ್ ಮೂಲಕ ಎಲ್ಲರಿಗೂ ಸಮಾನಾಗಿ ನೀರು ಹರಿಯುವಂತೆ ಮಾಡಿ ಶಾಶ್ವತ ಪರಿಹಾರ ಕಂಡುಕೊಳ್ಳಬಹುದಾಗಿದೆ.

ನೀರಿನ ನಿರ್ವಹಣೆ

ನೀರಿನ ನಿರ್ವಹಣೆಯನ್ನು ಸ್ಥಳೀಯರೇ ಮಾಡುತ್ತಿದ್ದು, ವರ್ಷಕೊಮ್ಮೆ ಟ್ಯಾಂಕ್ ಶುಚಿ ಮಾಡುತ್ತಾರೆ. ಇದಾವುದಕ್ಕೂ ಗ್ರಾಮ ಪಂಚಾಯಿತಿ ಅನುದಾನ ನೀಡುತ್ತಿಲ್ಲ.

ಕಾಂಕ್ರೀಟ್ ರಸ್ತೆ ಅಗತ್ಯ

ಮುಖ್ಯ ರಸ್ತೆಯಿಂದ ಅರ್ಧ ಕಿಮೀ ಜಲ್ಲಿ ರಸ್ತೆ ಇದ್ದು, ಎರಡು ಕಡೆ ಮಾತ್ರ ಕಾಂಕ್ರೀಟ್ ರಸ್ತೆ ಮಾಡಲಾಗಿದೆ.ಕಾರ್ಮಿಕರು ವಾಸವಾಗಿರುವ ಇಲ್ಲಿಗೆ ಸಂಪೂರ್ಣ ಕಾಂಕ್ರೀಟಿಕರಣ ರಸ್ತೆ ನಿರ್ಮಾಣವಾಗಬೇಕಿದೆ.



ಶೃಂಗೇರಿ ತಾಲೂಕಿನ ಕಾಮ್ಲೆ ಗುಡ್ಡದ ನೀರಿನ ಟ್ಯಾಂಕ್.

> ಟ್ಯಾಂಕ್‌ನಿಂದ ಬರುವ ನೀರಿಗೆ ನಾವೇ ಪೈಪ್ ಹಾಕಿಕೊಂಡಿದ್ದು, ಅದು ಆಗಾಗ ಒಡೆದು ನೀರು ಸಮರ್ಪಕವಾಗಿ ಬರದೇ ತೊಂದರೆಯಾಗುತ್ತಿದೆ. ಬೆಳಗ್ಗೆ ನೀರು ಬರದಿದ್ದರೆ ಕೆಲಸಕ್ಕೆ ತೆರಳಲು ಅಡ್ಡಿಯಾಗುತ್ತದೆ. ಶಾಶ್ವತ ಭೂಗತ ಪೈಪ್ ಅಳವಡಿಸಿ, ಎಲ್ಲರಿಗೂ ಸಮಾನಾಗಿ ನೀರು ಹರಿಯುವಂತೆ ಮಾಡಬೇಕು.
> ■ ವಸಂತಿ ಕೃಷ್ಣ, ಕಾಮ್ಲೆಗುಡ್ಡ.

> ನೀರು ಕಡಿಮೆಯಾಗುತ್ತಿದ್ದಂತೆ ಬೆಳಗ್ಗೆ ಮತ್ತು ಸಂಜೆ ನೀರು ಬಿಡುತ್ತಿದ್ದು ಈಗಲೂ ದಿನವಿಡಿ ನೀರು ಪೂರೈಕೆಯಾಗುತ್ತಿದೆ. ಕಾಡಿನಿಂದ ಬರುವ ನೀರು ಸಮರ್ಪಕವಾಗಿ ತಲುಪಲು ಗೇಟ್ ವಾಲ್ವ್ ಅಳವಡಿಸಬೇಕು. ಡ್ರಿಪ್ ಪೈಪ್ ರಸ್ತೆಯನ್ನು ದಾಟಿದ್ದು, ವಾಹನ ಸಂಚಾರ, ಜಾನುವಾರುಗಳು ತುಳಿದು ಪೈಪ್ ಒಡೆದು ನೀರು ಹಾಳಾಗುತ್ತದೆ.
> ■ ಸೀತು, ಕಾಮ್ಲೆಗುಡ್ಡ.

## ಕಿರುಸುದ್ದಿ

### ರೈತರ ಮಕ್ಕಳಿಂದ ಅರ್ಜಿ ಆಹ್ವಾನ

• **ಶಿವಮೊಗ್ಗ:** 2026–27ನೇ ಸಾಲಿಗೆ ತೋಟಗಾರಿಕೆ ಇಲಾಖೆ ಅಧೀನದ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ರೈತರ ಮಕ್ಕಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹೊಸೂರು ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2/5/2026ರಿಂದ 28/02/2027 ರವರೆಗೆ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 13ರವರೆಗೆ ಅರ್ಜಿಗಳನ್ನು ತೋಟಗಾರಿಕೆ ಇಲಾಖೆಯ ವೆಬ್‌ಸೈಟ್ https://horticulturedir.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಜಿಲ್ಲೆಯ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ರಾಜ್ಯವಲಯ) ಇವರ ಕಚೇರಿಯಿಂದ ಅಥವಾ ಆಯಾ ತಾಲೂಕ ನಲ್ಲಿರುವ ತೋಟಗಾರಿಕೆ ಇಲಾಖೆಯ ಕಚೇರಿಯಿಂದ ಪಡೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಸಲ್ಲಿಸಲು ಏ.15 ಕೊನೆ ದಿನ. ಅಭ್ಯರ್ಥಿಯು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಅಭ್ಯರ್ಥಿಯ ತಂದೆ, ತಾಯಿ, ಪೋಷಕರ ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿ ನೀಡುವುದು ಕಡ್ಡಾಯ. ದೂ.ಸಂ:08182–222794, 9686950460 ನ್ನು ಸಂಪರ್ಕಿಸಬಹುದು.

### ಈಜಲು ಹೋಗಿ ನಾಪತ್ತೆಯಾಗಿದ್ದ ಬಾಲಕನ ಶವ ಪತ್ತೆ



• **ಶಿವಮೊಗ್ಗ:** ಸ್ನೇಹಿತರ ಜೊತೆ ನಾಲೆಯಲ್ಲಿ ಈಜಲು ಹೋಗಿ ನಾಪತ್ತೆಯಾಗಿದ್ದ ಹರೀಯ 13 ವರ್ಷದ ಬಾಲಕ ಶಂಕರ್ ಶವ ಪತ್ತೆಯಾಗಿದೆ. ಐದು ಜನ ಗೆಳೆಯರೊಂದಿಗೆ ಶಂಕರ್ ಶನಿವಾರ ನಾಲೆಗೆ ಈಜಲು ಹೋಗಿ ನಾಪತ್ತೆಯಾಗಿದ್ದ. ಪೊಲೀಸ್ ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಶೋಧ ನಡೆಸಿದ್ದರಾದರೂ ಪತ್ತೆಯಾಗಿರಲಿಲ್ಲ, ಭಾನುವಾರ ಪತ್ತೆಯಾರ್ [illegible]ಗೊಂಡಿದ್ದ ಶವ ಅನತಿ ದೂರದಲ್ಲಿ ಪತ್ತೆಯಾಗಿದೆ.

### ಇಂದು ಮತ್ತು ನಾಳೆ ಡಿವಿಎಸ್ ಕಾಲೇಜಿನಲ್ಲಿ ರಾಷ್ಟ್ರೀಯ ಸಮ್ಮೇಳನ

• **ಶಿವಮೊಗ್ಗ:** ಡಿವಿಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಭೌತಶಾಸ್ತ್ರ ವಿಭಾಗದ ವತಿಯಿಂದ ಮಾರ್ಚ್ 16 ಮತ್ತು 17ರಂದು ಎರಡು ದಿನದ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಮಾರ್ಚ್ 16ರಂದು ಬೆಳಗ್ಗೆ 10ಕ್ಕೆ ಅಂತರರಾಷ್ಟ್ರೀಯ ಸಂಶೋಧನೆ ಮತ್ತು ನಾವೀನ್ಯತೆ ವಿಷಯ ಕುರಿತು ಆಯೋಜಿಸಿರುವ ಎರಡು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಕುವೆಂಪು ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಉದ್ಘಾಟಿಸಲಿದ್ದಾರೆ. ದೇಶೀಯ ವಿದ್ಯಾಶಾಲಾ ಸಮಿತಿ ಅಧ್ಯಕ್ಷ ಕೆ.ಬಸಪ್ಪಗೌಡ ಅಧ್ಯಕ್ಷತೆ ವಹಿಸುವರು. ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಎಚ್.ಕೆ.ಶೆಟ್ಟಿ ಪ್ರಧಾನ ಭಾಷಣ ಮಾಡುವರು. ಐಐಟಿ ಧಾರವಾಡದ ಡೀನ್ ಡಾ. ಎಸ್.ಎಂ.ಶಿವಪ್ರಸಾದ್, ವಿಜ್ಞಾನಿ ಡಾ. ಸಿ.ವಿ.ಯೋಗೇಶ್ವರ, ಎಸ್‌ಡಿಆರ್‌ಸಿ ಮಾಜಿ ಗ್ರೂಪ್ ನಿರ್ದೇಶಕ ಎಚ್.ಡಿ. ಆನಂದ, ಸ್ಕೂಲ್ ಆಫ್ ಸೈನ್ಸಸ್‌ನ ಡಾ. ಎಸ್.ಆರ್.ರಮೇಶ್ ಸಂವಾದದಲ್ಲಿ ಭಾಗವಹಿಸಿ ಪಾಲ್ಗೊಳ್ಳುವರು. ಮಾರ್ಚ್ 17ರಂದು ಸಂಜೆ 5ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಕೆ.ಬಸಪ್ಪಗೌಡ ಅಧ್ಯಕ್ಷತೆ ವಹಿಸುವರು.

### ಎಚ್.ಡಿ. ದೇವೇಗೌಡರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿ

• **ಶಿವಮೊಗ್ಗ:** ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ನಾಡಿಗೆ ಹಾಗೂ ದೇಶಕ್ಕೆ ನೀಡಿದ ಅಪ್ರತಿಮ ಕೊಡುಗೆ ಪರಿಗಣಿಸಿ ಅವರಿಗೆ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕೆಂದು ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಸಾರ್ವಜನಿಕ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿ ಕೊಂಡಿರುವ ದೇವೇಗೌಡರು, ಕೃಷಿ, ನೀರಾವರಿ ಹಾಗೂ ಐಟಿ–ಬಿಟಿ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಇಂತಹ ಮಹಾನ್ ಚೇತನಕ್ಕೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವುದು ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆಯ ವಿಷಯ. ಸರ್ಕಾರ ಕೂಡಲೇ ಈ ಬಗ್ಗೆ ಸಕಾರಾತ್ಮಕ ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

### ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಕಲಾಸಿ ಸತೀಶ್ ಕಾಂಗ್ರೆಸ್ ಸೇರ್ಪಡೆ

• **ಹೊಸನಗರ:** ಹೊಸನಗರ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಕಾಲಸಿ ಸತೀಶ್‌ಬಿಜೆಪಿ ಸದಸ್ಯತ್ವಕ್ಕೆರಾಜೀನಾಮೆ ನೀಡಿ ಶಾಸಕ ಬೇಳೂರು ಗೋಪಾಲಕೃಷ್ಣರವರ ನಿವಾಸದಲ್ಲಿಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ತಮ್ಮ ಬೆಂಬಲಿಗರೊಂದಿಗೆ ಸೇರ್ಪಡೆಯಾದರು.

ಸುಮಾರು ಒಂದೂವರೆ ವರ್ಷದಿಂದ ಬಿಜೆಪಿಯಿಂದ ದೂರವಿದ್ದು ಪಕ್ಷದ ಸಿದ್ಧಾಂತಗಳು ಹಿಡಿಸದ ಹಿನ್ನೆಲೆಯಲ್ಲಿ ನಾನು ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ. ಬಿಜೆಪಿ ನನಗೆ ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಹಾಗೂ ನಾನು ಅಧ್ಯಕ್ಷರಾಗಿ ಆಯ್ಕೆಯಾಗುವ ಸಂದರ್ಭದಲ್ಲಿ ನನ್ನ ಜೊತೆಗಿದ್ದು ಕೆಲಸ ಮಾಡಿದೆ ಎಂದರು.





ಶಿವಮೊಗ್ಗ: ಸೀನಿಯರ್‌ಚೇಂಬರ್‌ನ ಅತ್ಯುತ್ತಮ ರಾಷ್ಟ್ರೀಯ ಡೈರೆಕ್ಟರ್ ಪ್ರಶಸ್ತಿಗೆ ಶಿವಮೊಗ್ಗದ ಪುಷ್ಪಾ ಶೆಟ್ಟಿ ಭಾಜನರಾಗಿದ್ದಾರೆ. ಅತ್ಯುತ್ತಮ ರಾಷ್ಟ್ರೀಯ ಡೈರೆಕ್ಟರ್ ಪಬ್ಲಿಕ್ ರಿಲೇಶನ್ ಮತ್ತು ಕಮ್ಯೂನಿಟಿ ವಿಭಾಗದಲ್ಲಿ ಈ ಪ್ರಶಸ್ತಿ ಲಭಿಸಿದೆ. ಬೆಂಗಳೂರಿನಲ್ಲಿ ನಡೆದ ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್‌ನ 2025–26 ರ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪುಷ್ಪಾಶೆಟ್ಟಿ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಭೂಮಿ ತಂಪಾಗಿಸಿದ ಮಳೆ

• **ಶಿವಮೊಗ್ಗ :** ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಭಾನುವಾರ ಮಳೆಯಾಗಿದ್ದು, ಬಿಸಿಲಿನಿಂದ ಬೇಯುತ್ತಿದ್ದ ಭೂಮಿ ಕೊಂಚ ತಂಪಾಗಿದೆ. ಮಧ್ಯಾಹ್ನದಿಂದಲೇ ಗ್ರಾಮಾಂತರ ಭಾಗದಲ್ಲಿ ಮಳೆಯಾಗಿದ್ದು, ಅಡಿಕೆ, ಬಾಳೆ, ತೆಂಗಿನ ತೋಟಗಳಿಗೆ ಸ್ವಲ್ಪ ಪ್ರಮಾಣದಲ್ಲಿ ತಂಪೆರೆದಂತಾಗಿದೆ. ಮಳೆಗಿಂತ ಗಾಳಿಯೇ ಕೆಲವು ಕಡೆಗಳಲ್ಲಿ ಹೆಚ್ಚಾಗಿ ಬೀಸಿದ ಪರಿಣಾಮ ಮಳೆಯಾಗಲಿಲ್ಲ. ಕೆಲವು ಕಡೆಗಳಲ್ಲಿ ಸಿಡಿನ ಆರ್ಭಟವೂ ಹೆಚ್ಚಾಗಿತ್ತು. ಹೋಳಿ ಹುಣ್ಣಿಮೆಗೆ ಮಳೆ ನಿರೀಕ್ಷಿಸಲಾಗಿತ್ತಾದರೂ ಆಗಿರಲಿಲ್ಲ. ಯುಗಾದಿಗೆ ಮುನ್ನವೇ ಹಲವು ಕಡೆಗಳಲ್ಲಿ ಮಳೆಯಾಗಿದೆ. ರೈತರ ಮುಖದಲ್ಲಿ ಆಶಾಭಾವನೆ ಮೂಡುವಂತಾಗಿದೆ.



ಶಿಕಾರಿಪುರ : ಪಟ್ಟಣದ ವಿಶ್ವ ಬಂಧು ವೀರಶೈವ ಲಿಂಗಾಯತ ಸೌಹಾರ್ದ ಸಹಕಾರ ನಿಯಮಿತ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ನಿಂಬೆಗೊಂದಿ ಗ್ರಾಮದ ಎಂ ಪರಮೇಶ್ವರಪ್ಪ ಹಾಗೂ ಉಪಾಧ್ಯಕ್ಷರಾಗಿ ಶಿರಾಳಕೊಪ್ಪ ಪಟ್ಟಣದ ಬಿಳಗಿ ಪ್ರಭುಲಿಂಗಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಇಂದಿರಾ ಕ್ಯಾಂಟೀನ್ ಲೋಕಾರ್ಪಣೆಗೊಳಿಸಿದ ಜಿಲ್ಲಾ ಉಸ್ತುವಾರಿ ಸಚಿವ ಮಧು
# ಹಸಿವುಮುಕ್ತ ಕರ್ನಾಟಕ ನಿರ್ಮಾಣದ ಗುರಿ

• **ಆನವಟ್ಟಿ :** ಬಡವರು ಮತ್ತು ಶ್ರಮಿಕ ವರ್ಗದವರು ಹಸಿವಿನಿಂದ ಇರಬಾರದು ಎಂಬ ಉದಾತ್ತ ಉದ್ದೇಶದಿಂದ ಸರ್ಕಾರ ಇಂದಿರಾ ಕ್ಯಾಂಟೀನ್ ಯೋಜನೆಗೆ ಮರುಜೀವ ನೀಡಿದೆ. ಈ ಮೂಲಕ ಹಸಿವು ಮುಕ್ತ ಕರ್ನಾಟಕ ನಿರ್ಮಾಣವೇ ಮುಖ್ಯ ಗುರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಆನವಟ್ಟಿಯಲ್ಲಿ ನೂತನವಾಗಿ ನಿರ್ಮಿಸಲಾದ ಇಂದಿರಾ ಕ್ಯಾಂಟೀನ್ ಭಾನುವಾರ ಲೋಕಾರ್ಪಣೆ ಮಾಡಿ ಮಾತನಾಡಿ, ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು 5 ಮತ್ತು 10 ರೂ.ಗಳ ಅತ್ಯಲ್ಪ ದರದಲ್ಲಿ ಗುಣಮಟ್ಟದ ಆಹಾರ ನೀಡುವ ಮೂಲಕ ಜನಸಾಮಾನ್ಯರ ಪರವಾಗಿ ನಿಂತಿದೆ. ಹಸಿದವರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಇದರಿಂದ ಅನುಕೂಲವಾಗಲಿದೆ. ಜಿಲ್ಲೆಯಲ್ಲಿ ಈಗಾಗಲೇ 16 ಇಂದಿರಾ ಕ್ಯಾಂಟೀನ್‌ಗಳ ಆರಂಭಕ್ಕೆ ಗುರಿ ಹೊಂದಲಾಗಿದೆ ಎಂದರು.



• **ಪಂಚ ಗ್ಯಾರಂಟಿಗಳ ಶಕ್ತಿ:** ರಾಜ್ಯದ ಜನತೆಗೆ ಕೇವಲ ಅಕ್ಕಿ ಮಾತ್ರವಲ್ಲದೆ, ಗೃಹಲಕ್ಷ್ಮೀ ಯೋಜನೆಯಡಿ 2,000 ರೂ. ಗೌರವಧನ ಹಾಗೂ ಉಚಿತ ವಿದ್ಯುತ್ ನೀಡುವ ಮೂಲಕ ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ. ಇದು ಸರ್ಕಾರದ ಕೊಡುಗೆಯಲ್ಲ, ಜನರ ಹಕ್ಕು ಎಂದರು.

• **ಪಂಪ್‌ಸೆಟ್ ಸಕ್ರಮ:** ರೈತರ ಹಿತದೃಷ್ಟಿಯಿಂದ ಬಾಕಿ ಇರುವ ಬೋರ್‌ವೆಲ್ ಪಂಪ್‌ಸೆಟ್‌ಗಳ ಸಕ್ರಮ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಇದ್ದರು.

## ಡಿಜಿಟಲ್ ಸ್ಟುಡಿಯೋ ಆರಂಭಿಸುವ ಉದ್ದೇಶ: ಮಧು ಬಂಗಾರಪ್ಪ ಹೇಳಿಕೆ

• **ಶಿವಮೊಗ್ಗ :** ವಿದ್ಯಾರ್ಥಿಗಳಲ್ಲಿನ ವೈಜ್ಞಾನಿಕ, ಶೈಕ್ಷಣಿಕ ಪ್ರತಿಭೆ ಅನಾವರಣ ಗೊಳಿಸಲು ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಡಿಜಿಟಲ್ ಸ್ಟುಡಿಯೋ ಆರಂಭಿಸುವ ಉದ್ದೇಶವಿದೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಜಿಪಂ ವತಿಯಿಂದ ಜಿಲ್ಲೆಯ ಗ್ರಾಪಂ ಗ್ರಂಥಾಲಯ ಮೇಲ್ವಿಚಾರಕರಿಗಾಗಿ ಮಲ್ಲೇನಹಳ್ಳಿಯ ಸನ್ನಿಧಿ ಸೆಂಟರ್ ಫಾರ್ ಪ್ಯಾಸ್ಟರಲ್ ರಿನೀವಲ್ ಚರ್ಚ್‌ನಲ್ಲಿ ಶನಿವಾರ ಏರ್ಪಡಿಸಿದ್ದ ನಾನು ವಿಜ್ಞಾನಿ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಈಗಾಗಲೇ ಡಿಜಿಟಲ್ ಸ್ಟುಡಿಯೋಕ್ಕಾಗಿ 15 ಲಕ್ಷ ರೂ. ಮೀಸಲಿಡಲಾಗಿದೆ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಸಣ್ಣ ಸಣ್ಣ ವಿಡಿಯೋ ತುಣುಕುಗಳ ಮೂಲಕ ಪ್ರದರ್ಶಿಸಬೇಕು. ಆ ವಿಡಿಯೋಗಳನ್ನು ಯೂಟ್ಯೂಬ್‌ನಲ್ಲಿ ಹಂಚಿಕೊಳ್ಳಲಾಗುವುದು. ಆಗ ವಿದ್ಯಾರ್ಥಿಗಳ ರೀಲ್ಸ್ ಗೀಳು ಸಹ ಕಡಿಮೆಯಾಗಲಿದ್ದು, ವಿನೂತನ ವೈಜ್ಞಾನಿಕ ಆವಿಷ್ಕಾರಗಳು, ಇತರೆ ವಿಷಯ ಕಲಿಕೆ ಕಡೆ ಹೆಚ್ಚಿನ ಗಮನ ಹರಿಯಲಿದೆ ಎಂದರು.

ಜಿಪಂ ಸಿಇಒ ಹೇಮಂತ್ ಎನ್. ಮಾತನಾಡಿ, ಈ ತರಬೇತಿ ಮೂಲಕ ಗ್ರಾಮೀಣ ವಿಜ್ಞಾನ ಕೇಂದ್ರಗಳನ್ನು ಕೌತುಕದ ವಿಜ್ಞಾನ ಕಲಿಕಾ ಕೇಂದ್ರಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಲಾಗಿದೆ. ಅರಿವು ಕೇಂದ್ರದ ಗ್ರಂಥಪಾಲಕರಿಗಾಗಿ ನಾನು ವಿಜ್ಞಾನಿ ಎಂಬ ವಿಜ್ಞಾನ ಮತ್ತು ಖಗೋಳಶಾಸ್ತ್ರ ಕಾರ್ಯಾಗಾರವನ್ನು ಯಶಸ್ವಿಯಾಗಿ ಪ್ರಾರಂಭಿಸುವ ಮೂಲಕ ವೈಜ್ಞಾನಿಕ ಮನೋಭಾವವನ್ನು ಬೆಳೆಸುವಲ್ಲಿ ಪ್ರವರ್ತಕ ಹೆಜ್ಜೆ ಇಡಲಾಗಿದೆ ಎಂದರು.

ಈ ಭವಿಷ್ಯದ ಉಪಕ್ರಮದ ಭಾಗವಾಗಿ, ಜಿಲ್ಲೆಯಾದ್ಯಂತ ವಿಜ್ಞಾನ ಕ್ಲಬ್‌ಗಳನ್ನು ಸ್ಥಾಪಿಸಲಾಗುವುದು. ಗ್ರಂಥಪಾಲಕರು ಹವ್ಯಾಸಿ ಖಗೋಳ ಶಾಸ್ತ್ರಜ್ಞರಾಗಿ ಹೊಸ ಪಾತ್ರ ವನ್ನು ವಹಿಸಿ ಕೊಳ್ಳುತ್ತಾರೆ, ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಸಮು ದಾಯಗಳು ಬ್ರಹ್ಮಾಂಡದ ಅದ್ಭುತ ಅನ್ವೇಷಿಸಲು, ವೈಜ್ಞಾನಿಕ ಕುತೂಹಲ ಬೆಳೆಸಲು ಮಾರ್ಗದರ್ಶನ ನೀಡುತ್ತಾರೆಂಬ ಭರವಸೆ ವ್ಯಕ್ತಪಡಿಸಿದರು.

ವಿಜ್ಞಾನಿಗಳು ಮಾತನಾಡಿ, ಟೆಲಿಸ್ಕೋಪ್‌ಗಳಿಗೆ ಬಹಳ ಬೇಡಿಕೆ ಇದೆ. ಗ್ರಂಥಪಾಲಕರೇ ಸಿದ್ದಪಡಿಸಿರುವ ಈ ಟೆಲಿಸ್ಕೋಪ್ ಮೂಲಕ ರಾತ್ರಿಯಲ್ಲಿ ನಕ್ಷತ್ರಗಳು, ಚಲಿಸುವ ಸ್ಯಾಟ್‌ಲೈಟ್‌ಗಳು, ಈಗ ಗುರು ಗ್ರಹವನ್ನು ಈ ಟೆಲಿಸ್ಕೋಪ್ ಮೂಲಕ ಹತ್ತಿರದಿಂದ ವೀಕ್ಷಿಸಬಹುದು. ಗುರುಗ್ರಹ 40 ಪಟ್ಟು ಹತ್ತಿರ ಕಾಣುತ್ತದೆ, ಪಶ್ಚಿಮ ಘಟ್ಟದಲ್ಲಿನ ಆಕಾಶ ಅದ್ಭುತವಾಗಿ ಕಾಣುತ್ತದೆ ಎಂದರು.

## ಸುರಕ್ಷತೆಗೆ ಹೆಚ್ಚಿನ ಗಮನಹರಿಸಿ



• **ಸಾಗರ :** ಶಾಲಾ ವಾಹನ ಚಾಲಕರು ಮಕ್ಕಳು, ವಾಹನ ಹಾಗೂ ತಮ್ಮ ಸುರಕ್ಷತೆ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ನಿಮ್ಮನ್ನು ನಂಬಿ ಪೋಷಕರು ಮಕ್ಕಳನ್ನು ನಿಮ್ಮ ವಾಹನದಲ್ಲಿ ಕಳಿಸಿರುತ್ತಾರೆ ಎಂದು ಶಾಸಕ ಹಾಗೂ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಗೋಪಾಲಕೃಷ್ಣ ಬೇಳೂರು ಸಲಹೆ ನೀಡಿದರು.

ಇಲ್ಲಿನ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣದಲ್ಲಿ ಓಮಿನಿ ಚಾಲಕರು ಮತ್ತು ಮಾಲೀಕರ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ಕ್ರೀಡಾಕೂಟದಲ್ಲಿ ಅವರು ಅಭಿನಂದನೆ ಸ್ವೀಕರಿಸಿದ ನಂತರ ಮಾತನಾಡಿ, ಪ್ರತಿಯೊಬ್ಬರು ವೈಯಕ್ತಿಕ, ವಾಹನ ವಿಮೆಯನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಲು ಕರೆ ನೀಡಿದರು.

ಇತ್ತೀಚಿನ ವರ್ಷಗಳಲ್ಲಿ ಪೋಷಕರು ತಮ್ಮ ಮಕ್ಕಳನ್ನು ಓಮಿನಿ, ಆಟೋ ಇನ್ನಿತರೆ ವಾಹನಗಳಲ್ಲಿ ಶಾಲೆಗೆ ಕಳಿಸುತ್ತಿದ್ದಾರೆ. ಮಕ್ಕಳು ನಿಗಧಿತ ಸಮಯಕ್ಕೆ ಶಾಲೆಗೆ ಹೋಗಬೇಕು ಎಂದು ಪೋಷಕರು ಎಲ್ಲ ರೀತಿಯ ಪ್ರಯತ್ನ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ನಿಮ್ಮ ಮೇಲೆ ಹೆಚ್ಚಿನ ಹೊಣೆ ಇರುತ್ತದೆ. ನೀವು ಕ್ಷಣಕಾಲ ಮೈಮರೆತರೆ ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ಹೇಳಿದರು.

ನಿಮ್ಮ ಮಕ್ಕಳು ಭವಿಷ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ನಿಮ್ಮ ಮಕ್ಕಳು ವೈದ್ಯ, ಇಂಜಿನಿಯರ್ ಸೇರಿ ಉನ್ನತ ಸ್ಥಾನಕ್ಕೆ ಹೋಗಬೇಕು. ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು. ನಿಮಗೆ ಏನಾದರೂ ಸಮಸ್ಯೆ ಆದರೆ ನಾನು ನಿಮ್ಮ ಜೊತೆಗೆ ಇರುತ್ತೇನೆ ಎಂದು ಭರವಸೆ ನೀಡಿದರು.

ಸಂಘದ ಅಧ್ಯಕ್ಷ ನಾಗರಾಜ್, ಕಾನೂನು ಸಲಹೆಗಾರ ವಿ.ಶಂಕರ್, ಸುರೇಶ್ ಪಿ., ಬಾಲು, ದಿನೇಶ್, ದೇವದಾಸ್ ಪ್ರಭು, ಶ್ರೀನಾಥ್ ಇನ್ನಿತರರು ಹಾಜರಿದ್ದರು.

## ಪತ್ರಕರ್ತ ಹೆಚ್.ಎಸ್. ನಾಗರಾಜ್‌ಗೆ ಸನ್ಮಾನ



• **ಹೊಸನಗರ:** ಸಾಹಿತ್ಯ ಕ್ಷೇತ್ರದಲ್ಲಿ ತಾಲೂಕಿಗೆ ಕೀರ್ತಿ ತಂದಿರುವ ನಗರ ನಿವಾಸಿ ಅಂಬ್ರಯ್ಯಮಠ, 35 ವರ್ಷ ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿರುವ ಹಾಗೂ ತಾಲೂಕು ಪತ್ರಕರ್ತರ ಸಂಘ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೆಚ್.ಎಸ್. ನಾಗರಾಜ್ ಹಾಗೂ ಸಹಕಾರಿ ಕ್ಷೇತ್ರದಲ್ಲಿ 35 ವರ್ಷಗಳ ಕಾಲ ಸೊಸೈಟಿಯ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿರುವ ಹಾಗೂ ಸಹಕಾರಿರತ್ನ ಪ್ರಶಸ್ತಿ ಪಡೆದಿರುವ ರಿಪ್ಪನ್ ಪೇಟೆಯ ಎಂ.ಎಂ. ಪರಮೇಶ್ ಅವರನ್ನು ಶಿವಮೊಗ್ಗದ ಸಾಹಿತ್ಯ ಭವನದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ 20ನೇ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಅಭಿನಂದನೆ: ಮೂವರು ಗಣ್ಯರ ಸನ್ಮಾನಕ್ಕೆ ಕೊಡಚಾದ್ರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ನಿಕಟ ಪೂರ್ವ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಾರ್ಷಲ್ ಶರಾಂ, ಕೋಟೆಗಾರ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶಶಿಧರ್‌ನಾಯ್ಕ್, ರಿಪ್ಪನ್‌ಪೇಟೆ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಬಿ. ಲಕ್ಷ್ಮಣಗೌಡ, ವರ್ತಕರ ಸಂಘದ ನಿಕಟಪೂರ್ವ ಅಧ್ಯಕ್ಷ ಶ್ರೀನಿವಾಸ್‌ಕಾಮತ್, ಪತ್ರ ಬರಹಗಾರರ ಸಂಘದ ಅಧ್ಯಕ್ಷ ಎನ್. ಶ್ರೀಧರ ಉಡುಪ, ಎನ್.ದತ್ತಾತ್ರೇಯ ಉಡುಪ, ವರ್ತಕರ ಸಂಘದ ಅಧ್ಯಕ ಪೂರ್ಣೇಶ್, ನಿಕಟ ಪೂರ್ವ ಅಧ್ಯಕ್ಷ ವಿಜೇಂದ್ರ ಶೇಟ್, ಬಿ.ಎಸ್. ಸುರೇಶ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಗರಕೊಡಿಗೆ ಗಣೇಶ್ ಮೂರ್ತಿ, ಪ್ರಧಾನ ಕಾರ್ಯದರ್ಶಿ ಕೆ.ಜಿ. ನಾಗೇಶ್ ಅಭಿನಂದಿಸಿದ್ದಾರೆ.



ಹೊಸನಗರ : ತಾಲೂಕಿನ ರಿಪ್ಪನ್ ಪೇಟೆ ಸಮೀಪದ ಬೆಳ್ಳೂರಿನಲ್ಲಿ ಭಾನುವಾರ ಬೀಸಿದ ಗಾಳಿಗೆ ರತ್ನಮ್ಮ ಮನೆಯ ಮೇಲೆ ಉರುಳಿದ ತೆಂಗಿನ ಮರ

## ರಸ್ತೆ ಪಕ್ಕದ ತರಕಾರಿ ಅಂಗಡಿಗಳಿಂದ ಸಂಚಾರಕ್ಕೆ ಅಡಚಣೆ

• **ಸಾಗರ :** ಇಲ್ಲಿನ ನಗರಸಭೆ ಎದುರಿನ ರಸ್ತೆ ಇಕ್ಕೆಲಗಳಲ್ಲಿ ತರಕಾರಿ ಮತ್ತಿತರೆ ಅಂಗಡಿಗಳನ್ನು ಹಾಕಿಕೊಂಡಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಪ್ರತಿದಿನ ಬೆಳಗ್ಗೆ 7ರಿಂದ ಮಧ್ಯಾಹ್ನ 1 ರವರೆಗೆ ಈ ರಸ್ತೆ ಕಿಷ್ಕಿಂದೆಯಾಗಿ ಬದಲಾಗುತ್ತಿದ್ದು, ಅನೇಕ ಅಪಘಾತಗಳು ಸಹ ಸಂಭವಿಸಿದೆ.

ನಗರಸಭೆ ಎದುರಿನ ಪೋಸ್ಟ್ ಆಫೀಸ್ ವೃತ್ತದಲ್ಲಿ ಕಳೆದ ಕೆಲವು ತಿಂಗಳುಗಳಿಂದ ತರಕಾರಿ, ಹಣ್ಣಿನ ಅಂಗಡಿಗಳನ್ನು ಹಾಕಲು ನಗರಸಭೆ ಅವಕಾಶ ಕಲ್ಪಿಸಿದೆ. ಸಾರ್ವಜನಿಕರು ರಸ್ತೆಯಲ್ಲಿಯೆ ತಮ್ಮ ವಾಹನ ನಿಲ್ಲಿಸಿ ತರಕಾರಿ ಖರೀದಿಗೆ ಗಂಟೆಗಟ್ಟಲೆ ತೆರಳುತ್ತಾರೆ. ಇದರಿಂದ ಮುಖ್ಯ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ, ಪಾದಾಚಾರಿಗಳಿಗೆ ತೀವ್ರ ತೊಂದರೆಯಾಗುತ್ತಿದೆ.



ಈ ರಸ್ತೆಯಲ್ಲಿಯೆ ಅನೇಕ ಶಾಲಾ ವಾಹನಗಳು ಸಂಚರಿಸುತ್ತಾ ಇರುತ್ತದೆ. ಕಾನ್ವೆಂಟ್, ಜ್ಯೂನಿಯರ್ ಕಾಲೇಜು ಸೇರಿ ಅನೇಕ ಶಾಲಾಕಾಲೇಜುಗಳಿಗೆ ಹೋಗುವವರು ಈ ರಸ್ತೆಯನ್ನೆ ಬಳಸಿಕೊಳ್ಳಬೇಕಾಗುತ್ತದೆ. ಆದರೆ ಈ ರಸ್ತೆಯಲ್ಲಿ ಓಡಾಡಲೆ ಹರಸಾಹಸ ಪಡುವ ಸ್ಥಿತಿ ಇದೆ. ಇಲ್ಲಿಗೆ ಸಮೀಪದಲ್ಲಿಯೆ ನಗರ ಪೊಲೀಸ್ ಠಾಣೆ ಇದೆ. ಠಾಣೆ ಎದುರಿನ ಜಯ ಚಾಮರಾಜೇಂದ್ರ ವೃತ್ತದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗಳು ನಿಧಾನಗತಿಯಲ್ಲಿ ಹೋಗುವ ಆಟೋ, ಬೈಕ್‌ಗಳ ಪೋಟೋವನ್ನು ಹಿಂದಿನಿಂದ ಹೊಡೆದು ಕಾನೂನಿನ ಇಕ್ಕಟ್ಟಿನಲ್ಲಿ ಸಿಲುಕಿಸಿ ದಂಡ ಕಟ್ಟುವಂತೆ ಮಾಡುತ್ತಿ ದ್ದಾರೆಯೆ ವಿನಃ ಸ್ವಲ್ಪ ದೂರದಲ್ಲಿ ಗುಂಪುಗೂಡಿ ವಾಹನ, ಜನ ಸಂಚಾರಕ್ಕೆ ತೊಂದರೆ ಕೊಡುತ್ತಿರುವ ಸ್ಥಳದ ಟ್ರಾಫಿಕ್ ಕ್ಲಿಯರ್ ಮಾಡಲು ಪ್ರಯತ್ನಿಸದೆ ಇರುವುದು ದುರದೃಷ್ಟಕರ ಸಂಗತಿ.

ಜನ ಮತ್ತು ವಾಹನ ಸಂಚಾರ ಸಾಧ್ಯವಿಲ್ಲ, ಗಮನಿಸಿ ಎಂದು ನಗರ ಠಾಣೆ ವೃತ್ತ ನಿರೀಕ್ಷಕರಿಗೆ ತಿಳಿಸಿದರೆ ನಗರಸಭೆಯವರು ಶುಲ್ಕ ವಸೂಲಿ ಮಾಡುತ್ತಾರೆ ಅವರು ನೋಡಿಕೊಳ್ಳಲಿ ಎಂದು ಉಡಾಫೆ ಉತ್ತರ ನೀಡುತ್ತಿದ್ದಾರೆ. ತಮ್ಮ ಕಚೇರಿ ಎದುರಿನ ರಸ್ತೆಯಲ್ಲಿ ಅವ್ಯವಸ್ಥೆ ಇದ್ದರೂ ನಗರಸಭೆ ಅಧಿಕಾರಿಗಳು ಮಾತ್ರ ಕಣ್ಣೆತ್ತಿಯೂ ನೋಡುವುದಿಲ್ಲ, ಸದ್ಯ ಸಾಗರ ನಗರ ಠಾಣೆ ಪೊಲೀಸರು ಹೆಲ್ಮೆಟ್ ಇಲ್ಲ ಎಂದು ದಂಡ ವಿಧಿಸುವುದಕ್ಕೆ ಮಾತ್ರ ಸೀಮಿತವಾಗಿದ್ದಾರೆಯೆ ಹೊರತು, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದ್ದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

## ಕೋಡೂರು ಅಗ್ನಿ ದುರಂತ: ಆರ್ಥಿಕ ಸಹಾಯ ನೀಡಿದ ಬೇಳೂರು

• **ರಿಪ್ಪನ್ ಪೇಟೆ:** ಇತ್ತೀಚೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸುಮಾರು 250ಕ್ಕೂ ಹೆಚ್ಚು ಅಡಿಕೆ ಮರಗಳು ಬೆಂಕಿಗೆ ಆಹುತಿಯಾದ ಘಟನೆ ನಡೆದಿರುವ ಕೋಡೂರು ಗ್ರಾಮ ಪಂಚಾಯಿತಿಯ ಕುಸುಗುಂಡಿ ಗ್ರಾಮಕ್ಕೆ ಸಾಗರ ವಿಧಾನಸಭಾ ಕ್ಷೇತ್ರದ ಶಾಸಕ ಬೇಲೂರು ಗೋಪಾಲಕೃಷ್ಣ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ದುರಂತದಲ್ಲಿ ನಷ್ಟ ಅನುಭವಿಸಿದ ರೈತ ಚಂದ್ರಶೇಖರ್ ಬಿನ್ ಬಾಬುರಾಯ್ ಆಚಾರ್ ಅವರ ತೋಟವನ್ನು ಪರಿಶೀಲಿಸಿದ ಶಾಸಕ ಬೇಳೂರು ಗೋಪಾಲಕೃಷ್ಣ, ರೈತನ ಕಷ್ಟ-ಸಂಕಷ್ಟಗಳನ್ನು ಆಲಿಸಿ ಧೈರ್ಯ ತುಂಬಿದರು. ಹಲವು ವರ್ಷಗಳ ಪರಿಶ್ರಮದಿಂದ ಬೆಳೆದ ಅಡಿಕೆ ತೋಟ ಬೆಂಕಿಗೆ ಆಹುತಿಯಾಗಿ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿರುವುದನ್ನು ಕಂಡು ವಿಷಾದ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ರೈತನಿಗೆ ತಮ್ಮ ವೈಯಕ್ತಿಕವಾಗಿ ಆರ್ಥಿಕ ಸಹಾಯವನ್ನು ನೀಡಿ ನೆರವಾದ ಅವರು, ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಘಟನೆಯ ಬಗ್ಗೆ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸ್ಥಳೀಯರು ಮೆಸ್ಕಾಂ ಇಲಾಖೆಯ ನಿರ್ಲಕ್ಷ್ಯದಿಂದ ಈ ಘಟನೆ ಸಂಭವಿಸಿದೆ ಎಂದು ಆರೋಪಿಸುತ್ತಿರುವ ಹಿನ್ನೆಲೆಯಲ್ಲಿ, ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಮೌಳಿ ಗೌಡ, ಶಾಸಕರ ಆಪ್ತ ಸಹಾಯಕ ಸಣ್ಣಕ್ಕಿ ಮಂಜು, ಅಧಿಕಾರಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು.

## ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷೆ ಉಮಾ ರೆಡ್ಡಿ
# ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಮ್ಮ ಮುಂದೆ ಇರುವ ಗಂಭೀರ ಸಮಸ್ಯೆ

• **ಶಿವಮೊಗ್ಗ :** ಜಾಗತಿಕವಾಗಿ ಗೊಬ್ಬರವಾಗುವ ಪ್ಲಾಸ್ಟಿಕ್ ಪರ್ಯಾಯ ಬಳಕೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷೆ ಉಮಾ ರೆಡ್ಡಿ ತಿಳಿಸಿದರು.

ಗಾಜನೂರಿನ ಸಮೀಪದಲ್ಲಿರುವ ಎಕೊವಿನ್ ನಿಯೋಧ್ಯಂ ನವೋದ್ಯಮದ ಮುಖ್ಯ ಪಾಲುದಾರರಾದ ಸುನೀತ ಗಣೇಶ ಅಂಗಡಿಯವರ ಜೈವಿಕ ಪ್ಲಾಸ್ಟಿಕ್ ಉತ್ಪಾದನಾ ತಯಾರಿಕಾ ಘಟಕಕ್ಕೆ ಭೇಟಿ ನೀಡಿ ಮಾತನಾಡಿದರು.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಮ್ಮ ಮುಂದೆ ಇರುವ ಗಂಭೀರ ಸಮಸ್ಯೆಯಾಗಿದೆ. ಮೆಕ್ಕೆಜೋಳವನ್ನು ಬಳಸಿಕೊಂಡು ಜೈವಿಕ ವಿಘಟನೀಯ ಪ್ಲಾಸ್ಟಿಕ್ ಉತ್ಪಾದನಾ ಘಟಕ ಆರಂಭ ಮಾಡಿರುವುದು ಸಂತಸದ ವಿಷಯ. ಇದು ಪ್ಲಾಸ್ಟಿಕ್‌ಗೆ ಆಹಾರ-ಸುರಕ್ಷಿತ ಪರ್ಯಾಯವನ್ನು ನೀಡುತ್ತದೆ. ನಮಗೆ ಪರ್ಯಾಯವಿಲ್ಲದಿದ್ದರೆ ಪ್ಲಾಸ್ಟಿಕ್ ಬಳಕೆಯನ್ನು ತಡೆಯಲು ಯಾವುದೇ ಮಾರ್ಗವಿಲ್ಲ, ದೊಡ್ಡ ಬ್ರ್ಯಾಂಡ್‌ಗಳು ಸೆಣಬು ಮತ್ತು ಬಟ್ಟೆ ಚೀಲಗಳನ್ನು ಖರೀದಿಸಬಹುದಾದರೂ, ಭಾರತೀಯ ಮಾರುಕಟ್ಟೆಯ ಬಹುಭಾಗವನ್ನು ಒಳಗೊಂಡಿರುವ ಮಧ್ಯಮ ಮತ್ತು ಸಣ್ಣ ವ್ಯವಹಾರಗಳು ಪ್ಲಾಸ್ಟಿಕ್ ಚೀಲಗಳನ್ನು ಬಳಸುತ್ತಲೇ ಇವೆ ಎಂದರು.



ಪ್ಲಾಸ್ಟಿಕ್ ಮಾಲಿನ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಜಲಚರಗಳು ಮತ್ತು ಪ್ರಾಣಿಗಳ ಮೇಲೆ ಪರಿಣಾಮ ಬೀರುವುದಕ್ಕೆ ಮಾತ್ರ ಸೀಮಿತವಾಗಿಲ್ಲ, ಇಂದು ಮೈಕ್ರೋಪ್ಲಾಸ್ಟಿಕ್ ನಮ್ಮ ರಕ್ತಪ್ರವಾಹವನ್ನು ತಲುಪಿದೆ. ಬಾಟಲಿ ನೀರಿನಲ್ಲಿ ಮೈಕ್ರೋ ಪ್ಲಾಸ್ಟಿಕ್‌ಗಳಿವೆ. ಇದನ್ನು ಪರಿಹರಿಸುವುದು ಒಂದು ಪ್ರಮುಖ ಮತ್ತು ತುರ್ತು ಸಮಸ್ಯೆಯಾಗಿದೆ ಎಂದರು.

ಎಫ್‌ಕೆಸಿಸಿಐ ಉಪಾಧ್ಯಕ್ಷ ಸಾಯಿ ರಾಮ್ ಪ್ರಸಾದ್ ಮಾತನಾಡಿ, ಶಿವಮೊಗ್ಗದಲ್ಲಿ ಇಂತಹ ತಂತ್ರಜ್ಞಾನ ಮತ್ತು ನಾವೀನ್ಯತೆ ಸಂಬಂಧಿತ ನವೋದ್ಯಮಗಳು ನಾವೀನ್ಯತೆಗೆ ಉತ್ತೇಜನ ನೀಡಲು ಅನುದಾನಗಳು ಮತ್ತು ಪ್ರೋತ್ಸಾಹಕಗಳ ಅವಶ್ಯಕತೆಯಿದೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ.ವಿಜಯಕುಮಾರ್ ಮಾತನಾಡಿ, ಮಹಿಳೆಯ ದೃಢಸಂಕಲ್ಪವು ಯಾವುದೇ ಸವಾಲನ್ನು ಜಯಿಸಬಹುದು.

> ನಾವು ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಕಡಿಮೆ ಮಾಡಿ ಬಯೋ ರಿಫಾರ್ಮ್ ಬ್ಯಾಗ್ ಬಳಸಿ ಪರಿಸರ ಮಾಲಿನ್ಯ ಕಡಿಮೆ ಮಾಡಬೇಕಿದೆ.
>
> ■ ಬಿ.ಗೋಪಿನಾಥ್, ಜಿಲ್ಲಾ ಕೈಗಾರಿಕಾ ಸಂಘದ ಅಧ್ಯಕ್ಷ

ಸಬಲೀಕರಣಗೊಂಡ ಮಹಿಳೆಯರು ಮಹಿಳೆಯರನ್ನು ಸಬಲೀಕರಣಗೊಳಿಸುತ್ತಾರೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ನಿರ್ದೇಶಕ ಗಣೇಶ ಅಂಗಡಿ ಮಾತನಾಡಿ, ಪ್ಲಾಸ್ಟಿಕ್ ಮುಕ್ತಗೊಳಿಸುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿ, ಶಿವಮೊಗ್ಗ ಜಿಲ್ಲೆಯನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ದೃಷ್ಟಿಕೋನದತ್ತ ಶ್ರಮಿಸುವುದನ್ನು ಮುಂದುವರಿಸುತ್ತೇನೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಕಾರ್ಯದರ್ಶಿ ಎ.ಎಂ.ಸುರೇಶ್, ಖಜಾಂಚಿ ಆರ್. ಮನೋಹರ್ ಅವರನ್ನು ಸನ್ಮಾನಿಸಲಾಯಿತು.

## ಗಾಜನೂರು ಗ್ರಾಮಸ್ಥರಿಂದ ದೂರು
# ವ್ಯಕ್ತಿಯೊಬ್ಬರಿಂದ ಜಾತಿ ಅಸ್ತ್ರ ಬಳಸಿ ದೌರ್ಜನ್ಯ

• **ಶಿವಮೊಗ್ಗ :** ಗಾಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಳೆದ 30–40 ವರ್ಷಗಳಿಂದ ಸರ್ಕಾರಿ ಜಮೀನು ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿರುವವರ ಮೇಲೆ ದಲಿತ ನಾಯಕನೆಂದು ಹೇಳಿಕೊಂಡ ವ್ಯಕ್ತಿಯೊಬ್ಬರು ಜಾತಿ ನಿಂದನೆ ಕೇಸು ದಾಖಲಿಸುತ್ತಾ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಗಾಜನೂರು ಗ್ರಾಮಸ್ಥರು ದೂರಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, ಗಣೇಶ್, ಹನುಮಂತ, ದೊಡ್ಡಿಕೆರೆ ನಂಜುಂಡಪ್ಪ, ಊರಲ್ಲಿ ಇಲ್ಲದವರನ್ನು ಕರೆದುಕೊಂಡು ಬಂದು ಜಮೀನಿನ ದಾಖಲೆ ಅವರ ಹೆಸರಿನಲ್ಲಿವೆ ಎಂದು ಸುಳ್ಳು ಹೇಳಿ ಬೆದರಿಸುತ್ತಾರೆ. ಪ್ರತಿಯಾಗಿ ಮಾತನಾಡಿದರೆ ಅಟ್ರಾಸಿಟಿ ಕೇಸು ಹಾಕಿ ಪೊಲೀಸ್ ಠಾಣೆಗೆ ಹೋಗುವಂತೆ ಮಾಡುತ್ತಿದ್ದಾರೆಂದರು.

ಇದುವರೆಗೂ ಗ್ರಾಮದಲ್ಲಿ ಇಂತಹ ಯಾವುದೇ ಗಲಾಟೆಗಳು ಇರಲಿಲ್ಲ, ಗಾಜನೂರು ಮುಳಕೆರೆ ಸರ್ವೇ ನಂಬರ್ 10 ರಲ್ಲಿ ಸುಮಾರು 200 ಎಕರೆ ಸರ್ಕಾರಿ ಗೋಮಾಳ ಭೂಮಿ ಇದ್ದು, ಅನೇಕರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಕೆಲವರು ಖಾತೆ ಪಡೆದಿದ್ದಾರೆ. ಇನ್ನು ಕೆಲವರು ಫಾರಂ ನಂಬರ್, 50, 53 ಹಾಗೂ 57 ರಲ್ಲಿ ಅರ್ಜಿ ನೀಡಿದ್ದಾರೆ. ಕಂದಾಯ ಇಲಾಖೆಯಲ್ಲಿ ಅರ್ಜಿಗಳು ಬಾಕಿ ಇವೆ ಎಂದರು.

ಅನೇಕರು ಅಡಿಕೆ ತೋಟವನ್ನು ಮಾಡಿಕೊಂಡಿದ್ದಾರೆ. ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಹೀಗಿದ್ದರೂ ಗ್ರಾಮದಲ್ಲಿ ಇಲ್ಲದ ವ್ಯಕ್ತಿಗಳನ್ನು ಕರೆತಂದು ದೌರ್ಜನ್ಯ ನಡೆಸಲಾಗುತ್ತದೆ. ಕೆಲವು ಕಡೆಗಳಲ್ಲಿ ದಲಿತ ಸಂಘಟನೆಯ ಬೋರ್ಡ್‌ಗಳನ್ನು ಹಾಗೂ ಅಂಬೇಡ್ಕರ್ ಭಾವಚಿತ್ರವನ್ನು ಅಳವಡಿಸಿ ಅಶಾಂತಿಗೆ ಸೃಷ್ಟಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು.

ಈ ಸಂಬಂಧ ತುಂಗಾನಗರ ಠಾಣೆಗೆ ದೂರು ನೀಡಲಾಗಿದೆ. ಅವರು ಯುಗಾದಿ ಹಬ್ಬದ ಬಳಿಕ ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಜಿಲ್ಲಾ ರಕ್ಷಣಾಧಿಕಾರಿಗಳ ಗಮನಕ್ಕೂ ತರಲಾಗಿದೆ. ಇದು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವುದಾಗಿ ಪೊಲೀಸರು ಹೇಳುತ್ತಾರೆ. ಗ್ರಾಮದಲ್ಲಿ ಅಶಾಂತಿ ಸೃಷ್ಟಿಸುತ್ತಿರುವ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕಿದೆ ಎಂದರು.

ಗಾಜನೂರು ಗ್ರಾಮದಲ್ಲಿ ಮೊದಲಿನಿಂದಲೂ ಎಲ್ಲಾ ಜಾತಿಯ ಜನರು ಅನ್ಯೋನ್ಯವಾಗಿದ್ದಾರೆ.ಯಾವುದೇ ಸಂದರ್ಭ ದಲ್ಲೂ ಜಾತಿ ಆಧಾರದಲ್ಲಿ ಜಗಳ ಮಾಡಿದ ದಾಖಲೆಯೇ ಇರಲಿಲ್ಲ, ಆದರೆ ಈಗ ಸರ್ಕಾರಿ ಜಮೀನು ಕಬಳಿಸಲು ದಲಿತ ಸಂಘಟನೆಯ ಮುಖಂಡರೊಬ್ಬರು ಜಾತಿ ಅಸ್ತ್ರವನ್ನು ಬಳಸಿಕೊಂಡು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ಉಮೇಶ್, ಸತೀಶ್, ಲೋಕೇಶ್, ಮಂಜುನಾಥ, ಕಾಂತರಾಜ, ವೆಂಕಟೇಶ್, ಜಯಮ್ಮ, ಶಿಲ್ಪಾ, ನಾಗರಾಜ್, ಮೋಹನ್, ಚೆನ್ನೇಶಪ್ಪ ಇದ್ದರು.

## ಕಿರುಸುದ್ದಿ

### ಹಾವು ಕಚ್ಚಿದ ವಿದ್ಯಾರ್ಥಿನಿಯನ್ನು ರಕ್ಷಿಸಿದ ಮುಖ್ಯಶಿಕ್ಷಕ

• **ಚಿತ್ರದುರ್ಗ:** ಹಾವುಕಚ್ಚಿದ ವಿದ್ಯಾರ್ಥಿನಿಯನ್ನು ಮುಖ್ಯಶಿಕ್ಷಕ ತನ್ನ ಬಾಯಿಂದಲೇ ವಿಷವನ್ನು ತೆಗೆದು ರಕ್ಷಿಸಿದ ಘಟನೆ ಚಿತ್ರದುರ್ಗ ತಾಲ್ಲೂಕಿನ ಹುಣಸೇಕಟ್ಟೆ ಗ್ರಾಮದಲ್ಲಿ ನಡೆದಿದೆ. ಶನಿವಾರ ಮಾರ್ನಿಂಗ್ ಕ್ಲಾಸ್ ಮುಗಿಯುತ್ತಿದ್ದಂತೆ ಮಕ್ಕಳೆಲ್ಲರೂ ಮನೆಗೆ ಹೊರಡುವ ಧಾವಂತದಲ್ಲಿದ್ದರು. ಅಷ್ಟರಲ್ಲೇ ಒಂದನೇ ತರಗತಿಯ ಸೃಷ್ಟಿ ಎಂಬ ಮಗುವಿಗೆ ಹಾವು ಕಚ್ಚಿದೆ. ಇದರಿಂದ ಗಾಭರಿಗೊಂಡ ವಿದ್ಯಾರ್ಥಿನಿ ಭಯದಿಂದ ಚೀರಾಡತೊಡಗಿದ್ದಾಳೆ. ಜೊತೆಗಿದ್ದ ಮಕ್ಕಳು ಸಹ ಗಾಭರಿಯಿಂದ ಕೂಗಾಡಿದ್ದಾರೆ. ಇದನ್ನು ಗಮನಿಸಿದ ಮುಖ್ಯ ಶಿಕ್ಷಕ ಟಿ.ಎಸ್.ರವಿಶಂಕರ್ ಕೂಡಲೇ ಮಗುವನ್ನು ಸಂತೈಸಿ, ಧೈರ್ಯ ಹೇಳಿ ಮಗುವಿನ ರಕ್ಷಣೆಗೆ ಮುಂದಾಗಿದ್ದಾರೆ. ಕೂಡಲೇ ಶಿಕ್ಷಕ ತನ್ನ ಬಾಯಿನಿಂದ ವಿಷವನ್ನು ತೆಗೆಯಲು ಮುಂದಾದರು. ವಿಷವನ್ನು ತೆಗೆದ ಬಳಿಕ ಕೂಡಲೇ ಅವರದ್ದೇ ದ್ವಿಚಕ್ರ ವಾಹನದಲ್ಲಿ ಮಗುವನ್ನು ಮತ್ತು ಮಗುವಿನ ತಂದೆಯನ್ನು ಕೂರಿಸಿಕೊಂಡು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಬಂದು ಮಗುವನ್ನು ಆಸ್ಪತ್ರೆಗೆ ದಾಖಲಿಸಿ, ತಾವೂ ದಾಖಲಾಗಿದ್ದಾರೆ. ಕೂಡಲೇ ಕಾರ್ಯಪ್ರವೃತ್ತರಾದ ವೈದ್ಯರ ತಂಡ ಶಿಕ್ಷಕ ಮತ್ತು ಮಗುವಿಗೆ ಚಿಕಿತ್ಸೆ ನೀಡಿದೆ. ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗ ನಗರದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಸ್ತುತ ಇಬ್ಬರೂ ಚಿಕಿತ್ಸೆ ಪಡೆಯುತ್ತಿದ್ದು ಆರೋಗ್ಯ ಸ್ಥಿರವಾಗಿದ್ದು, ಯಾವುದೇ ಪ್ರಾಣಾಪಾಯವಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

### ಸ್ಟಾರ್ ಆಫ್ ದಿ ಇಯರ್ ಅವಾರ್ಡ್ ಕಾರ್ಯಕ್ರಮ

• **ಚಿತ್ರದುರ್ಗ:** ಶೈಕ್ಷಣಿಕ ವರ್ಷದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಬಾಪೂಜಿ ಪಬ್ಲಿಕ್ ಸ್ಕೂಲ್‌ನ 1 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ಸ್ಟಾರ್ ಆಫ್ ದ ಈಯರ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಒಂದನೇ ತರಗತಿಯ ಸುಕೇತನ ಎಂ.ಎಸ್., ಎರಡನೇ ತರಗತಿಯ ಆದ್ಯ ಜಿ.ಎನ್., ಮೂರನೇ ತರಗತಿಯ ತನ್ಮಯಿ ನಾಯ್ಕ, ನಾಲ್ಕನೇ ತರಗತಿಯ ಗಮನ ಈ.ಆರ್., ಐದನೇ ತರಗತಿಯ ತನುಶ್ರೀ, ಆರನೇ ತರಗತಿಯ ಗೌತಮಿ, ಏಳನೇ ತರಗತಿಯ ಭೂಮಿಕಾ ಜಿ.ಎಸ್., ಎಂಟನೇ ತರಗತಿಯ ಸುಹಾಸ್ ಎನ್., ಒಂಬತ್ತನೇ ತರಗತಿಯ ಜೀವನ್‌ಕುಮಾರ್ ಬಿ.ಎ. ಇವರುಗಳಿಗೆ ಬಾಪೂಜಿ ಪಬ್ಲಿಕ್ ಸ್ಕೂಲ್‌ನಲ್ಲಿ ಶನಿವಾರ ಪ್ರಶಸ್ತಿಗಳನ್ನು ವಿತರಿಸಲಾಯಿತು. ಬಾಪೂಜಿ ಪಬ್ಲಿಕ್ ಸ್ಕೂಲ್‌ನ ನಿರ್ದೇಶಕ ಕೆ.ಎಂ.ಚೇತನ್, ವಿಶೇಷ ಆಡಳಿತಾಧಿಕಾರಿ ಹನುಮಂತರೆಡ್ಡಿ, ಉಪ ಪ್ರಾಂಶುಪಾಲರಾದ ಹೆಚ್.ಎಂ.ಶಿವಕುಮಾರ್, ಮುಖ್ಯೋಪಾಧ್ಯಾಯರು, ಬೋಧಕ ಮತ್ತು ಬೋಧಕೇತರ ವರ್ಗದವರು, ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ವಚನ ಕಲ್ಯಾಣ ನಾಟಕಕ್ಕೆ ಆಯ್ಕೆಗೆ ಅರ್ಜಿ ಆಹ್ವಾನ

• **ಚಿತ್ರದುರ್ಗ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಿದ್ಧಪಡಿಸಲಾಗುತ್ತಿರುವ 'ವಚನ ಕಲ್ಯಾಣ' ಎಂಬ 9 ಗಂಟೆಗಳ ಕಾಲಾವಧಿಯ ಅಹೋರಾತ್ರಿ ನಾಟಕ ಪ್ರದರ್ಶನಕ್ಕಾಗಿ ಪ್ರತಿಭಾವಂತ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾರ್ಚ್ 20 ಅರ್ಜಿ ಸಲ್ಲಿಸಲು ಕೊನೆಯ ದಿನ. ರಾಜ್ಯಾದ್ಯಂತ ಪ್ರದರ್ಶನಗೊಳ್ಳಲಿರುವ ಈ ಬೃಹತ್ ರಂಗ ಪ್ರಯೋಗದಲ್ಲಿ ಭಾಗವಹಿಸಲು ಆಸಕ್ತಿಯಿರುವ ಯುವಕ-ಯುವತಿಯರು ಹಾಗೂ ಅನುಭವಿ ರಂಗ ಕಲಾವಿದರು/ಗಾಯಕರು ಅರ್ಜಿ ಸಲ್ಲಿಸಬಹುದಾಗಿದೆ. ವಯೋಮಿತಿ 18 ರಿಂದ 40 ವರ್ಷಗಳು. ರಂಗಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಆದ್ಯತೆ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಮಾರ್ಚ್ 20 ರೊಳಗೆ ಸದಸ್ಯ ಕಾರ್ಯದರ್ಶಿಗಳು, ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಇಲ್ಲಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪುವಂತೆ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳ ಕಾಲ ಪೂರ್ಣಕಾಲಿಕವಾಗಿ ತರಬೇತಿ ಹಾಗೂ ಪ್ರದರ್ಶನಗಳಲ್ಲಿ ಭಾಗವಹಿಸುವುದು ಕಡ್ಡಾಯವಾಗಿದೆ. ಈ ಅವಧಿಯಲ್ಲಿ ಕಲಾವಿದರಿಗೆ ಮಾಸಿಕ ಗೌರವಧನ ನೀಡಲಾಗುವುದು ಹಾಗೂ ಊಟ-ವಸತಿ ವ್ಯವಸ್ಥೆಯನ್ನು ಇಲಾಖೆಯೇ ಕಲ್ಪಿಸಲಿದೆ. ಅರ್ಜಿ ನಮೂನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ನಾಟಕದ ನಿರ್ದೇಶಕ ಸಿ.ಬಸವಲಿಂಗಯ್ಯ (94485 38620) ಇವರನ್ನು ಸಂಪರ್ಕಿಸಬಹುದು.

### ಇಂದು ಗ್ರಾಹಕರ ದಿನಾಚರಣೆ

• **ಚಿತ್ರದುರ್ಗ:** ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನಾಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ, ಆಶ್ರಯದಲ್ಲಿ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಮಾ.16 ಸೋಮವಾರ, ಬೆಳಿಗ್ಗೆ 11 ಗಂಟೆಗೆ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಚಿಕ್ಕಜಾಜೂರು ಸಮೀಪದ ಹನುಮನಕಟ್ಟೆ ಗ್ರಾಮದ ಕೆಂಚಾಂಬಿಕಾ ದೇವಿಯ ಸಿಡಿ ಉತ್ಸವ ಶನಿವಾರ ಸಂಜೆ ನೆರವೇರಿತು. ಮಕ್ಕಳನ್ನು ಸಿಡಿ ಏರಿದ ಭಕ್ತರು ದೇವರಿಗೆ ಭಕ್ತಿ ಸಮರ್ಪಿಸಿದರು. ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಅರಸನಗಟ್ಟ, ಕೇಶವಪುರ, ಹನುಮನಕಟ್ಟೆ ಸುತ್ತಮುತ್ತಲ ಗ್ರಾಮದವರು ಭಾಗವಹಿಸಿದ್ದರು. ಹೆಣ್ಣುಮಕ್ಕಳು ಬಾಯಿಗೆ ಬೀಗ ಹಾಕಿ ಭಕ್ತಿ ಸಮರ್ಪಿಸಿದರು. ಭಾನುವಾರ ಬೆಳಿಗ್ಗೆ ದೇವರಿಗೆ ವಿಶೇಷ ಪೂಜೆ ಹಾಗೂ ಓಕುಳಿ ಆಚರಿಸಲಾಯಿತು.

## ಆರೋಗ್ಯ ವಿಚಾರಿಸಿದ ಶಾಸಕ

• **ಚಿತ್ರದುರ್ಗ:** ತುರುವನೂರು ಹೋಬಳಿಯ ಹುಣಸೇಕಟ್ಟೆ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಗೆ ಶನಿವಾರ ಹಾವು ಕಚ್ಚಿ ಆಸ್ಪತ್ರೆಗೆ ದಾಖಲಾಗಿದ್ದ ಹಿನ್ನೆಲೆಯಲ್ಲಿ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಭಾನುವಾರ ಚಿತ್ರದುರ್ಗ ನಗರದ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ವಿದ್ಯಾರ್ಥಿನಿ ಹಾಗೂ ಮುಖ್ಯಶಿಕ್ಷಕರ ಆರೋಗ್ಯ ವಿಚಾರಿಸಿದರು. ಚಿತ್ರದುರ್ಗ ತಾಲ್ಲೂಕಿನ ತುರುವನೂರು ಹೋಬಳಿಯ ಹುಣಸೇಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದನೇ ತರಗತಿಯ ಸೃಷ್ಟಿಗೌಡ ಎಂಬ ವಿದ್ಯಾರ್ಥಿಗೆ ನಾಗರ ಹಾವು ಕಚ್ಚಿತ್ತು. ಆ ವಿದ್ಯಾರ್ಥಿನಿಯನ್ನು ರಕ್ಷಿಸಿ ಸಮಯ ಪ್ರಜ್ಞೆ ಮೆರೆದ ಮುಖ್ಯಶಿಕ್ಷಕ ರವಿಶಂಕರ್ ತತ್‌ಕ್ಷಣ ಪ್ರಥಮ ಚಿಕಿತ್ಸೆ ನೀಡಿ, ವಿದ್ಯಾರ್ಥಿನಿಯ ಜೀವ ಉಳಿಸಲು ಶ್ರಮಿಸಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಟಿ.ರಘುಮೂರ್ತಿ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಜಿ.ಟಿ.ಬಾಬುರೆಡ್ಡಿ, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಹಿರಿಯೂರಿನ ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ಲೇಸ್ಮೆಂಟ್ ಸೆಲ್ ಹಾಗೂ ಪಿ.ಎಂ.ಉಷಾ ಯೋಜನೆ ಸಾಫ್ಟ್‌ಕಾಂಪೊನೆಂಟ್ ಕಾರ್ಯಕ್ರಮದ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಉದ್ಯೋಗ ಮೇಳ ಕಾರ್ಯಕ್ರಮವನ್ನು ಪ್ರಾಂಶುಪಾಲ ಡಾ.ಡಿ.ಧರಣೇಂದ್ರಯ್ಯ ಉದ್ಘಾಟಿಸಿದರು. ಬೆಂಗಳೂರಿನ ಮಾನವ ಅಭಿವೃದ್ಧಿ ಮ್ಯಾನೇಜರ್ ಎ.ಮನ್ಮಥ, ಪಿಎಂ ಉಷಾ ವಿಭಾಗದ ಸಂಚಾಲಕಿ ಡಾ.ಎ.ದೇವಿಕಾ ಇದ್ದರು.

24ರಂದು ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ | ಇಮ್ಮಡಿ ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ

# ಒಳ ಮೀಸಲಾತಿಗೆ ವಿರೋಧ

• **ಚಿತ್ರದುರ್ಗ:** ಒಳ ಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ ಮಾ.24 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಬೃಹತ್ ಹೋರಾಟ ನಡೆಸಲಾಗುವುದು. ಇದರಲ್ಲಿ ಜನರು ಸಾಗರೋಪಾದಿಯಲ್ಲಿ ಸೇರುವಂತೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರಸ್ವಾಮಿ ಕರೆ ನೀಡಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ರಾಜ್ಯ ಸಮಿತಿ, ಒಳ ಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ ಹಳೆ ನಿಯಮದಂತೆ ನೇಮಕಾತಿಗೆ ಸರ್ಕಾರವನ್ನು ಒತ್ತಾಯಿಸಲು ಮಾ.24 ರಂದು ನಡೆಯುವ ಪ್ರತಿಭಟನೆಗೆ ಸಂಬಂಧಿಸಿದಂತೆ ಭೋವಿ ಗುರುಪೀಠದಲ್ಲಿ ಭಾನುವಾರ ನಡೆದ ವಿಭಾಗೀಯ ಮಟ್ಟದ ಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ನಾಗಮೋಹನ್‌ದಾಸ್ ಆಯೋಗ ಸಂಗ್ರಹಿಸಿರುವ ದತ್ತಾಂಶ ಒಂದು ಸಮಾಜಕ್ಕೆ ಪೂರ್ವಾಗ್ರಹ ಪೀಡಿತವಾಗಿದೆ ಎಂದು ಹಲವಾರು ಬಾರಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಭೋವಿ, ಲಂಬಾಣಿ, ಕೊರಮ, ಕೊರಚ ಜನಾಂಗ ಮುಂದುವರಿದಿದೆ ಎಂದು ನಾಗಮೋಹನ್‌ದಾಸ್ ಆಯೋಗ ಹೇಳಿಲ್ಲ, ಸಂಗ್ರಹಿಸಿರುವ ದತ್ತಾಂಶಕ್ಕೂ ಸರ್ಕಾರಕ್ಕೆ ನೀಡಿರುವ ವರದಿಗೂ ವ್ಯತ್ಯಾಸವಿದೆ. ಅಲೆಮಾರಿ ಸಮುದಾಯಗಳಿಗೆ ಪರಿಶಿಷ್ಟ ಜಾತಿಯ ಸೂಕ್ಷ್ಮ ವಲಯಗಳಿಗೆ ನ್ಯಾಯ ಸಿಗಬೇಕು ಎಂದರು.

ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಸರ್ಕಾರ ಗ್ಯಾರೆಂಟಿ ಯೋಜನೆಗಳಿಗೆ ಬಳಸದೆ ನಮ್ಮ ಸಮುದಾಯದ ಅಭಿವೃದ್ದಿಗೆ ಮೀಸಲಿಡಬೇಕೆಂದು ಹೋರಾಟದಲ್ಲಿ ಒತ್ತಾಯಿಸಲಾಗುವುದು. ಜನಸಂಖ್ಯೆಗೆ ಅನುಗುಣವಾಗಿ ಭೋವಿ ಅಭಿವೃದ್ದಿ ನಿಗಮ ಹಾಗೂ ಬಂಜಾರ ಅಭಿವೃದ್ದಿ ನಿಗಮಗಳಿಗೆ ಹಣ ಮಂಜೂರು ಮಾಡಲಿ. ಸಮಾಜದ ಬಗ್ಗೆ ಕಾಳಜಿಯಿರುವವರು ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಜನರನ್ನು ಎಚ್ಚರಿಸುವ ಮೂಲಕ ಕುಟುಂಬ ಬಂಧು-ಬಳಗದವರ ಮನವೊಲಿಸಿ ಪ್ರತಿಭಟನೆಗೆ ಕರೆ ತನ್ನಿ. ಇಲ್ಲವಾದಲ್ಲಿ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆಂದು ಎಚ್ಚರಿಸಿದರು.



ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಒಳ ಮೀಸಲಾತಿಗಾಗಿ ಹಲವಾರು ವರ್ಷಗಳಿಂದಲೂ ಚಳುವಳಿ, ಪ್ರತಿಭಟನೆಗಳು ನಡೆಯುತ್ತಿವೆ. ಶಾಸಕರು, ಮಂತ್ರಿಗಳ ಮನೆ, ವಿಧಾನಸೌಧಕ್ಕೂ ಮುತ್ತಿಗೆ ಹಾಕಿದ್ದೇವೆ ಎಂದರು.

ಭೋವಿ ಅಭಿವೃದ್ದಿ ನಿಗಮದ ಅಧ್ಯಕ್ಷ ನೇರ್ಲಗುಂಟೆ ರಾಮಪ್ಪ ಮಾತನಾಡಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ನಡೆಯುವ ಬೃಹತ್ ಹೋರಾಟದಲ್ಲಿ ಎಲ್ಲರೂ ಪಾಲ್ಗೊಂಡು ಸರ್ಕಾರಕ್ಕೆ ಬುದ್ದಿ ಕಲಿಸಬೇಕಿದೆ. ಕೆಲವು ಮಂತ್ರಿಗಳು ಶಾಸಕರು ನಮ್ಮ ಪರವಾಗಿದ್ದಾರೆ. ಹೋರಾಟಕ್ಕೆ ಸಂಬಂಧಿಸಿದಂತೆ ಎಲ್ಲಾ ಕಡೆ ಮಾಹಿತಿ ಕೊಡಲಾಗಿದೆ ಎಂದರು.

ಬಂಜಾರ ಅಭಿವೃದ್ದಿ ನಿಗಮದ ಅಧ್ಯಕ್ಷ ಜಯದೇವಾನಾಯ್ಕ, ಭೋವಿ ಸಮಾಜದ ರಾಜ್ಯಾಧ್ಯಕ್ಷ ಆನಂದ್, ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಕೊರಮ ಸಮಾಜದ ಅಧ್ಯಕ್ಷ ಕೃಷ್ಣಪ್ಪ, ಬಂಜಾರ ಸಮಾಜದ ಜಿಲ್ಲಾಧ್ಯಕ್ಷ ನಾಗೇಂದ್ರನಾಯ್ಕ, ಜಿ.ಪಂ. ಮಾಜಿ ಸದಸ್ಯ ರಾಜಾನಾಯ್ಕ, ನಿವೃತ್ತ ನ್ಯಾಯಾಧೀಶರಾದ ವೀರಭದ್ರಪ್ಪ, ರಾಘವೇಂದ್ರನಾಯ್ಕ, ಸಿಂಡಿಕೇಟ್ ಸದಸ್ಯ ದಾವಣಗೆರೆಯ ದ್ಯಾಮಣ್ಣ, ಮಂಜುಳ ಬಿ.ಜಯದೇವ, ಆದರ್ಶ ಯಲ್ಲಪ್ಪ, ಭೋವಿ ಸಮಾಜದ ಮೋಹನ್, ಹನುಮಂತಪ್ಪ ಗೋಡೆಮನೆ, ಡಿ.ತಿಮ್ಮಣ್ಣ, ಬಂಜಾರ ಸಮಾಜದ ಸುರೇಶ್‌ನಾಯ್ಕ, ಪ್ರಕಾಶ್ ರಾಮನಾಯ್ಕ, ವೀರಭದ್ರಪ್ಪ, ತುಳಸಿ ರಮೇಶ್, ಗೀತ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಹೊಸಪೇಟೆ, ಹಾವೇರಿ ಜಿಲ್ಲೆಗಳಿಂದ ಭೋವಿ, ಲಂಬಾಣಿ, ಕೊರಮ, ಕೊರಚ, ಅಲೆಮಾರಿ ಜನಾಂಗದ ಮುಖಂಡರು ಭಾಗವಹಿಸಿದ್ದರು.

> **ಭೋವಿ, ಬಂಜಾರರನ್ನು ಮೀಸಲಾತಿಯಿಂದ ಹೊರಗಿಡುವ ಹುನ್ನಾರ ನಡೆಯುತ್ತಿರುವುದನ್ನು ವಿರೋಧಿಸಿ ಮಾ.24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರಕ್ಕೆ ಶಕ್ತಿ ಪ್ರದರ್ಶಿಸಬೇಕು.**
>
> ■ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ

ಚಿತ್ರದುರ್ಗಕ್ಕೆ ಆಗಮಿಸಿದ ಪಾದಯಾತ್ರೆ

# ಒಳಮೀಸಲಾತಿ ನೀಡಿ



• **ಚಿತ್ರದುರ್ಗ:** ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿ ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಆದಿಜಾಂಬವ ಮಠದ ಷಡಾಕ್ಷರಿಮುನಿ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಲಾಗುತ್ತಿದೆ. ಹರಿಹರದಲ್ಲಿರುವ ಪ್ರೊ.ಬಿ.ಕೃಷ್ಣಪ್ಪ ಅವರ ಮುಕ್ತಿ ಸ್ಥಳದಿಂದ ಮಾ.11 ರಂದು ಆರಂಭವಾಗಿರುವ ಪಾದಯಾತ್ರೆ ಭಾನುವಾರ ಚಿತ್ರದುರ್ಗ ನಗರಕ್ಕೆ ಆಗಮಿಸಿತು. ನಗರದ ಅಂಬೇಡ್ಕರ್ ವೃತ್ತದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಬಹಿರಂಗ ಸಭೆ ನಡೆಸಲಾಯಿತು.

ಷಡಾಕ್ಷರಮುನಿ ಸ್ವಾಮೀಜಿ ಮಾತನಾಡಿ, ಒಳ ಮೀಸಲಾತಿ ಹೋರಾಟ ಕಳೆದ 35 ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ. ಕಳೆದ ಅನೇಕ ವರ್ಷಗಳಿಂದ ಮಾದಿಗ ಸಮುದಾಯ ಅನ್ಯಾಯಕ್ಕೆ ಒಳಗಾಗಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯವಾಗಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು.

ಆದರೆ ಕೆಲವು ಸಮುದಾಯಗಳು ಕೇಳದಿದ್ದರೂ ಮೀಸಲಾತಿ ನೀಡಲಾಗಿದೆ. ಮಾದಿಗ ಸಮುದಾಯಕ್ಕೆ ಅನ್ನ ನೀಡುವ ಬದಲು ಈ ಸರ್ಕಾರ ತಟ್ಟೆಯನ್ನು ಕಸಿದುಕೊಂಡಿದೆ. ಈ ನಿಟ್ಟಿನಲ್ಲಿ ಒಳ ಮೀಸಲಾತಿ ನೀಡಬೇಕು. ಇದರಿಂದ ಮಾದಿಗ ಸಮುದಾಯದ ನೌಕರರಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಪಾದಯಾತ್ರೆ ನಡೆಸಲಾಗುತ್ತಿದೆ. ಪಾದಯಾತ್ರೆ ಬೆಂಗಳೂರು ತಲುಪಿದ ನಂತರ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಾಗುವುದು. ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ಮದಿಗ ಸಮುದಾಯಕ್ಕೆ ನ್ಯಾಯ ನೀಡಬೇಕು. ತಪ್ಪಿದಲ್ಲಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಾಗುವುದು ಎಂದು ಎಚ್ಚರಿಸಿದರು.

ಬಿಜೆಪಿ ಯುವ ಮುಖಂಡ ಮೋಹನ್‌ಕುಮಾರ್, ಜಿ.ಪಂ. ಮಾಜಿ ಸದಸ್ಯ ಪ್ರಕಾಶ್‌ಮೂರ್ತಿ ನಿವೃತ್ತ ಅಧಿಕಾರಿ ಎಂ.ರೇವಣಸಿದ್ದಪ್ಪ, ಕೆಂಚಪ್ಪ, ಜಿ.ಪಂ. ಮಾಜಿ ಸದಸ್ಯ ನರಸಿಂಹರಾಜ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ಮಹಿಳೆಯರು, ಸಮಾಜದ ಮುಖಂಡರು ಹಾಜರಿದ್ದರು.

## ಬಾಪೂಜಿ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

• **ಚಿತ್ರದುರ್ಗ:** ನಗರದ ಓಳೆಕೆರೇನಹಳ್ಳಿಯಲ್ಲಿರುವ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಅಧ್ಯಕ್ಷರು ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಡಾ.ಕೆ.ಎಂ.ವೀರೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈದಿದ್ದು, ಮನೆಯಲ್ಲಿ ಮಗಳಾಗಿ, ತಾಯಿಯಾಗಿ, ಪತ್ನಿಯಾಗಿ, ಸ್ನೇಹಿತೆಯಾಗಿ ಅಷ್ಟೇ ಅಲ್ಲದೇ ಎಲ್ಲಾ ಉದ್ಯೋಗ ಕ್ಷೇತ್ರಗಳಲ್ಲಿ ಇಂದು ಮಹಿಳೆಯರು ತಮ್ಮ ಪ್ರಾಬಲ್ಯ ಸಾಧಿಸಿದ್ದಾರೆ ಎಂದರು.

ಒಂದು ಕಾಲದಲ್ಲಿ ಕೇವಲ ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆ ಇಂದು ಬಾಹ್ಯಾಕಾಶಕ್ಕೂ ಅಂತರಿಕ್ಷಕ್ಕೂ, ವಿಜ್ಞಾನದಲ್ಲೂ ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸುವಲ್ಲಿ ಮಹಿಳೆಯರು ಒಂದು ಹೆಜ್ಜೆ ಮುಂದಿದ್ದಾರೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಂ.ಆರ್.ಜಯಲಕ್ಷ್ಮಿ, ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮುಸಲ್ಮಾನರು ರಾಜ್ಯ ರಾಜಕೀಯದಲ್ಲಿ ಸಕ್ರಿಯವಾಗಬೇಕು

• **ಚಳ್ಳಕೆರೆ:** ಅಲ್ಪಸಂಖ್ಯಾತ ಸಮುದಾಯವು ಎಲ್ಲ ಸಮುದಾಯಗಳೊಂದಿಗೆ ಬೆರೆತು ರಾಜ್ಯ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದುಲ್ ಮುಸ್ಲಿಮೀನ್ ಸಂಘಟನೆಯ ತಾಲೂಕು ಜಾಮಿಯಾ ಮಸೀದಿ ನೂತನ ಅಧ್ಯಕ್ಷ ಯಾಕೂಬ್ ಅಲಿ ಹೇಳಿದರು. ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಪಕ್ಷದ ಸಂಘಟನೆ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಸ್ಲಿಂ ಸಮುದಾಯ ಸೇರಿದಂತೆ ಅಲ್ಪಸಂಖ್ಯಾತರು ರಾಜ್ಯ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅಗತ್ಯವಾಗಿದೆ. ರಾಜ್ಯ ರಾಜಕಾರಣದಲ್ಲಿ ಅಲ್ಪಸಂಖ್ಯಾತರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಮರ್ಪಕ ಸ್ಥಾನಮಾನ ಸಿಗದೆ ಇರುವುದು ವಿಪರ್ಯಾಸ. ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಸಮುದಾಯವು ತನ್ನದೇ ಆದ ರಾಜಕೀಯ ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕಾಗಿದೆ ಎಂದರು.



ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಪ್ರತಿನಿಧಿತ್ವವನ್ನು ಹೆಚ್ಚಿಸುವ ಉದ್ದೇಶದಿಂದ ಪಕ್ಷವನ್ನು ಬಲವರ್ಧನೆ ಮಾಡುವ ಜೊತೆಗೆ ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ಸ್ಪರ್ಧಿಸಲು ಸಿದ್ಧತೆ ನಡೆಸಲಾಗುತ್ತಿದೆ. ಅಲ್ಪಸಂಖ್ಯಾತರು ಕೂಡ ರಾಜ್ಯ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿ ಎಲ್ಲ ಸಮುದಾಯಗಳ ಹಿತಕ್ಕಾಗಿ ಕೆಲಸ ಮಾಡುವ ಸಂಕಲ್ಪ ಹೊಂದಿದ್ದಾರೆ ಎಂದು ಹೇಳಿದರು. ಬಶೀರ, ಭಾಷಾ, ಅಬ್ದುಲ್, ರೆಹಮಾನ, ಮಹಮ್ಮದ್ ಅಲಿ, ದಾದಾಪೀರ, ಹಸಿದ್ ಸೈದ್ ಉಪಸ್ಥಿತರಿದ್ದರು.



ಹಿರಿಯೂರು ನಗರದ ವಾಣಿವಿಲಾಸ ವಿದ್ಯಾಸಂಸ್ಥೆಯಲ್ಲಿ ಧಾರ್ಮಿಕ ಹಬ್ಬಗಳ ಸಾಮರಸ್ಯದ ಬಗ್ಗೆ ತಿಳುವಳಿಕೆ ಮೂಡಿಸುವ ನಿಟ್ಟಿನಲ್ಲಿ ಧಾರ್ಮಿಕ ಹಬ್ಬಗಳ ಆಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆಗಳಲ್ಲಿ ಕಂಗೊಳಿಸಿದರು.

## ಮಕ್ಕಳಿಗೆ ಚಂದ್ರವಳ್ಳಿಯಲ್ಲಿ ಪರಿಸರ ಶಿಬಿರ

• **ಚಿತ್ರದುರ್ಗ:** ಎಸ್‌ಆರ್‌ಎಸ್ ವಿದ್ಯಾಸಂಸ್ಥೆ, ಶ್ರೀ ವಾಸವಿ ವಿದ್ಯಾಸಂಸ್ಥೆ ಹಾಗೂ ವಿದ್ಯಾ ವಿಕಾಸ ಶಾಲೆಯ ಸ್ಕೌಟ್ ಅಂಡ್ ಗೈಡ್ಸ್ ಮಕ್ಕಳಿಗೆ ಚಂದ್ರವಳ್ಳಿಯಲ್ಲಿ ಪರಿಸರಕ್ಕೆ ಸಂಬಂಧಪಟ್ಟಂತಹ ಶಿಬಿರ ನಡೆಸಲಾಯಿತು.

ಈ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಪರಿಸರವಾದಿ ಮಿಠಾಯಿ ಆರ್. ಮುರುಗೇಶ್ ಹಾಗೂ ಭೂಮಿಗೀತ ಸಂಸ್ಥೆಯ ರಮೇಶಣ್ಣ ಅವರಿಂದ ಮಕ್ಕಳಿಗೆ ಗುಹಾನ್ವೇಷಣೆ, ಪಕ್ಷಿ ವೀಕ್ಷಣೆ, ಹೆಜ್ಜೆ ದಾರಿ ಹುಡುಕುವುದು ಹಾಗೂ ಕಾಡಿನಲ್ಲಿ ಚಾರಣ ಮಾಡಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಗೆ ಪರಿಸರದ ಬಗ್ಗೆ ಹಾಗೂ ಪ್ರಾಣಿ ಪಕ್ಷಿಗಳ ಬಗ್ಗೆ ಮಾಹಿತಿ ನೀಡಲಾಯಿತು. ಮಕ್ಕಳು ಸಂತೋಷದಿಂದ ಶಿಬಿರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ಶಿಬಿರದ ಆಯೋಜಕರಾದ ಕರಾಟೆ ಶಿಕ್ಷಕರಾದ ಸ್ವಾಮಿ, ಶೇಖರ್, ಲಿಂಗರಾಜ್, ಸುರೇಶ್, ದೇವರಾಜ್ ಪ್ರಸಾದ್, ರವಿಕುಮಾರ್ ಉಪಸ್ಥಿತರಿದ್ದರು.



ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಟಿ.ರಘುಮೂರ್ತಿ ಹೇಳಿಕೆ

# ಸಾಧನೆಗೆ ಮಹಿಳೆಯಲ್ಲಿ ಅಚಲವಾದ ಶಕ್ತಿ ಇರಬೇಕು

• **ಚಿತ್ರದುರ್ಗ:** ಮಹಿಳೆಯರು ಸಾಧನೆ ಮಾಡಲು ಸೌಲಭ್ಯಗಳು, ಹಣವಿದ್ದರೆ ಸಾಲದು. ಅಚಲವಾದ ಇಚ್ಛಾಶಕ್ತಿ ಇರಬೇಕು ಎಂದು ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಟಿ.ರಘುಮೂರ್ತಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮಿಷನ್ ಶಕ್ತಿ ಹಾಗೂ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ನಗರದ ಜಿಲ್ಲಾ ವಾಲ್ಮೀಕಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚಿತ್ರದುರ್ಗ ಇತಿಹಾಸದಲ್ಲಿ ಒನಕೆ ಓಬವ್ವ ಸಾಮಾನ್ಯ ಮಹಿಳೆಯಾಗಿದ್ದರೂ ಅಸಾಮಾನ್ಯ ಇಚ್ಛಾಶಕ್ತಿಯಿಂದ ಇತಿಹಾಸ ನಿರ್ಮಿಸಿದರು ಎಂದರು.

ಮಹಿಳೆಗೆ ಶಿಕ್ಷಣ ದೊರೆತಾಗ ಕುಟುಂಬದ ಶಕ್ತಿ ವೃದ್ಧಿಯಾಗುತ್ತದೆ. ಸೊಸೆಯಾದವರು ಅತ್ತೆ-ಮಾವಂದಿರನ್ನು ಹೆತ್ತ ತಂದೆ-ತಾಯಿಯಂತೆ ಗೌರವಿಸಿದರೆ ಕುಟುಂಬ ಹಾಗೂ ಸಮಾಜದಲ್ಲಿ ನೆಮ್ಮದಿ ನೆಲೆಸುತ್ತದೆ. ಮಾನವೀಯ ಮೌಲ್ಯಗಳ ಜೊತೆಗೆ ಶಿಕ್ಷಣ ಪಡೆದಾಗ ಮಹಿಳಾ ಸಬಲೀಕರಣಕ್ಕೆ ನಿಜವಾದ ಅರ್ಥ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.



ನಮ್ಮ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆ, ಗೃಹಲಕ್ಷ್ಮೀ ಯೋಜನೆ ಮತ್ತು ಗೃಹಜ್ಯೋತಿ ಯೋಜನೆಗಳ ಮೂಲಕ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ನೀಡಲಾಗಿದೆ. ಈ ಯೋಜನೆಗಳ ಫಲಾನುಭವಿಗಳು ಮಹಿಳೆಯರೇ ಆಗಿರುವುದರಿಂದ ಕುಟುಂಬದಲ್ಲಿ ಅವರ ಪಾತ್ರ ಹಿರಿದಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ ಮಾತನಾಡಿ, ಜಿಲ್ಲೆಯ ಶೇ.100ರಷ್ಟು ಮಹಿಳೆಯರಿಗೆ ಗ್ಯಾರಂಟಿ ಯೋಜನೆಗಳ ಲಾಭ ತಲುಪುತ್ತಿರುವುದು ಸಂತಸದ ವಿಷಯ. ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬ ಬಡವರಿಗೂ ತಲುಪಿಸುವ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ನಿಸ್ವಾರ್ಥ ಸೇವೆ ಶ್ಲಾಘನೀಯ ಎಂದರು.

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಸ್ತ್ರೀ ಈ ಜಗತ್ತಿನ ಅತ್ಯಂತ ಅದ್ಭುತವಾದ ಸೃಷ್ಟಿ. ಮತ್ತೊಂದು ಜೀವನಕ್ಕೆ ಜೀವ ನೀಡುವ ಏಕೈಕ ಮತ್ತು ಅದ್ಭುತ ಶಕ್ತಿ ಪ್ರಕೃತಿಯಲ್ಲಿ ಮಹಿಳೆಗೆ ಮಾತ್ರ ಇದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು, ಆದಿ ಜಾಂಬವ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿ.ಎಸ್.ಮಂಜುನಾಥ್, ಕೆಡಿಪಿ ಸದಸ್ಯರಾದ ಸುನಂದಾ, ಸಂತೋಷ್, ಜಿಲ್ಲಾ ಗ್ಯಾರಂಟಿ ಯೋಜನೆ ಸದಸ್ಯೆ ಇಂದಿರಾ, ಕೆ.ಹೆಚ್. ವಿಜಯಕುಮಾರ್, ಡಿ.ಮಂಜುನಾಥ್ ಇದ್ದರು.

ಮಹಿಳಾ ದಿನಾಚರಣೆ ಕಾರ್ಯಕ್ರಮ | ರೆಡ್‌ಕ್ರಾಸ್ ಸಭಾಪತಿ ಗಾಯತ್ರಿ

# ಪ್ರತಿಯೊಬ್ಬ ಮಹಿಳೆಯಲ್ಲೂ ಶಕ್ತಿ ಇದೆ

• **ಹಿರಿಯೂರು:** ಸಮಾಜದ ಪ್ರತಿ ಮಹಿಳೆಯಲ್ಲೂ ಒಂದು ಶಕ್ತಿ ಇದೆ, ಮಹಿಳೆಯರಲ್ಲಿ ನಾವು ಸಾಧಿಸಬೇಕೆಂಬ ಛಲವಿದ್ದರೆ ಪುರುಷರಿಗೆ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಬಹುದಾಗಿದೆ, ಈ ನಿಟ್ಟಿನಲ್ಲಿ ಮಹಿಳೆಯರು ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ಪಡೆಯಲು ಮುಂದಾಗಬೇಕು ಎಂಬುದಾಗಿ ಜಿಲ್ಲಾ ರೆಡ್‌ಕ್ರಾಸ್ ಸಭಾಪತಿ ಗಾಯತ್ರಿ ಶಿವರಾಂ ಹೇಳಿದರು.

ನಗರದ ರೋಟರಿ ಸಭಾಭವನದಲ್ಲಿ ರೋಟರಿ ಸಂಸ್ಥೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಸರ್ವೋದಯ, ಬ್ರಹ್ಮಜ್ಞಾನ ಸಮಾಜ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಅರಣ್ಯ ಇಲಾಖೆ ರೇಂಜರ್ ನಮಿತಾ ಅಭಿನಂದನ್ ಮಾತನಾಡಿ, ಮಹಿಳಾ ದಿನಾಚರಣೆಯು ನಾಮಕಾವಸ್ಥೆಯಲ್ಲ, ಅದು ಅತ್ಯಂತ ಮಹತ್ವಪೂರ್ಣವಾದದ್ದು ಎಂದು ಅಭಿಪ್ರಾಯಪಟ್ಟರು.

ಇಂದಿನ ದಿನಗಳಲ್ಲಿ ಕುಟುಂಬದಲ್ಲಿ ಪುರುಷನೊಬ್ಬನೇ ದುಡಿಮೆ ಮಾಡಿದರೆ ಕುಟುಂಬ ನಡೆಸಲು ಆಗುವುದಿಲ್ಲ, ಈ ಹಿನ್ನಲೆಯಲ್ಲಿ ಮಹಿಳೆಯಾದವರು ಸಹಾ ಗಂಡನೊಂದಿಗೆ ಕೈ ಜೋಡಿಸಿದರೆ ಕುಟುಂಬ ಸರಿಯಾಗಿ ಸಾಗಲು ಅನುಕೂಲವಾಗುತ್ತದೆ.

ಜ್ಞಾನದೀಪ ವಿದ್ಯಾಮಂದಿರ ಕಾರ್ಯದರ್ಶಿ ನಾಗರತ್ನ ಬದರೀನಾಥ್ ಮಾತನಾಡಿ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ತುಂಬಾ ದೊಡ್ಡದಿದೆ. ಮನೆಯಲ್ಲಿ ಇರುವವರನೆಲ್ಲಾ ಸಭಾಳಿಸಿ ಅವರಿಗೆ ಬೇಕು ಬೇಡಗಳನ್ನು ಪೂರ್ಣಗೊಳಿಸುವ ಮೂಲಕ ಎಲ್ಲರನ್ನು ಸಮನಾಗಿ ನೋಡಿಕೊಳ್ಳುವ ಗುಣ ಮಹಿಳೆಯರಲ್ಲಿ ಇದೆ ಎಂದು ಹೇಳಿದರು.



ಇಂದಿನ ದಿನಗಳಲ್ಲಿ ಪುರುಷನಷ್ಟೇ ಮಹಿಳೆಯು ಸಹಾ ದುಡಿಮೆ ಮಾಡುತ್ತಿದ್ದಾಳೆ. ಅವರು ಸಹಾ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವಂತೆ ಪುರುಷನಿಗೆ ಪೈಪೋಟಿ ನೀಡುತ್ತಿದ್ದಾಳೆ ಎಂದರು.

ನಿವೃತ್ತ ಶಿಕ್ಷಕಿ ಪ್ರೇಮರಾಣಿ ರೆಡ್‌ಕ್ರಾಸ್ ಚೇರ್ಮನ್ ಹೆಚ್.ಎಸ್.ಸುಂದರ್ ರಾಜ್, ವೈಸ್‌ಚೇರ್ಮನ್ ನಿವೃತ್ತ ಪ್ರಾಂಶುಪಾಲ ಬಿ.ಕೆ.ನಾಗಣ್ಣ, ರೋಟರಿ ಅಧ್ಯಕ್ಷ ಕೆ.ಎ.ವರುಣ್, ಸರ್ವೋದಯ ಬ್ರಹ್ಮಜ್ಞಾನ ಸಮಾಜ ಅಧ್ಯಕ್ಷ ಎಲ್. ಆನಂದಶೆಟ್ಟಿ, ಯುತ್‌ರೆಡ್‌ಕ್ರಾಸ್ ಶಶಿಕಲಾ ರವಿಶಂಕರ್, ಹೆಚ್.ಎಸ್.ಪ್ರಶಾಂತ್ ಸೇರಿದಂತೆ ವಿವಿಧ ಸೇವಾಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕಿರುಸುದ್ದಿ

### ಸರ್ಕಾರಿ ನೌಕರರ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ

**ದಾವಣಗೆರೆ:** 2025-26ನೇ ಸಾಲಿನ ಸರ್ಕಾರಿ ನೌಕರರ ಅಖಿಲ ಭಾರತ ನಾಗರಿಕ ಸೇವಾ ವಾಲಿಬಾಲ್ ಸ್ಪರ್ಧೆಗೆ ಚನ್ನಗಿರಿ ತಾಲೂಕು ಅಗ್ನಿ ಶಾಮಕ ಇಲಾಖೆಯ ಸಿಬ್ಬಂದಿ ಕೆ.ಎಸ್. ಗಜೇಂದ್ರ ಆಯ್ಕೆಯಾಗಿದ್ದಾರೆ. ಮಾ.20ರಿಂದ 25ರವರೆಗೆ ದೆಹಲಿಯ ಪಿತಾಂಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ಇವರು ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ. ಶಿವಮೊಗ್ಗದಲ್ಲಿ ಇತ್ತೀಚೆಗೆ ನಡೆದ 2024-25ನೇ ಸಾಲಿನ ರಾಜ್ಯ ಮಟ್ಟದ ಸರ್ಕಾರಿ ನೌಕರರ ವಾಲಿಬಾಲ್ ಕ್ರೀಡಾಕೂಟದಲ್ಲಿ ದಾವಣಗೆರೆ ಜಿಲ್ಲಾ ತಂಡವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆಯುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



### ಅಂತಾರರಾಷ್ಟ್ರೀಯ ಮಹಿಳಾ ದಿನಾಚರಣೆ ಇಂದು

**ದಾವಣಗೆರೆ:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 16ರಂದು ಬೆಳಗ್ಗೆ 11 ಗಂಟೆಗೆ ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಜಾನಪದ ಕಲಾವಿದೆ ಡಾ. ಮಂಜಮ್ಮ ಜೋಗತಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಚುಸಾಪ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ, ಕಾಲೇಜಿನ ನಿರ್ದೇಶಕ ಡಾ.ಎಂ ಸೋಮಶೇಖರಪ್ಪ ಉಪಸ್ಥಿತರಿರುವರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಪಿ. ಬಸವನಗೌಡ ಅಧ್ಯಕ್ಷತೆ ವಹಿಸುವರು.

### ಇಂದು ಮಹಿಳಾ ನೌಕರರಿಗೆ ಸ್ಪರ್ಧೆ

**ದಾವಣಗೆರೆ:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಜಿಲ್ಲೆಯ ಮಹಿಳಾ ಸರ್ಕಾರಿ ನೌಕರರಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಮಾ.16ರಂದು ನಗರದ ಸರ್ಕಾರಿ ನೌಕರರ ಸಮುದಾಯದ ಭವನದಲ್ಲಿ ಏರ್ಪಡಿಸಲಾಗಿದೆ. ಬೆಳಗ್ಗೆ 10 ಗಂಟೆಯಿಂದ 3ರವರೆಗೆ ಲಿಂಬು ಮತ್ತು ಚಮಚ, ಸಂಗೀತ ಕುರ್ಚಿ, ಬಕೆಟ್‌ನಲ್ಲಿ ಚೆಂಡು, ಹಗ್ಗ ಜಗ್ಗಾಟದಂತಹ ಕ್ರೀಡೆಗಳನ್ನು ನಡೆಸಲಾಗುವುದು. ಮಧ್ಯಾಹ್ನ 3 ಗಂಟೆಗೆ ನಂತರ ಡಾ. ಪ್ರಭಾ ಮಲ್ಲಿಕಾರ್ಜುನ್ ಸಮಾರಂಭ ಉದ್ಘಾಟಿಸಿ, ವಿಜೇತರಿಗೆ ಬಹುಮಾನ ವಿತರಿಸುವರು. ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಭಾಗವಹಿಸುವರು.

### ಮಾ.23ಕ್ಕೆ ಡಾಕ್-ಅದಾಲತ್

**ದಾವಣಗೆರೆ:** ದಾವಣಗೆರೆ ಅಂಚೆ ವಿಭಾಗೀಯ ಡಾಕ್-ಅದಾಲತ್ ಮಾರ್ಚ್ 23ರಂದು ಮಧ್ಯಾಹ್ನ 4 ಗಂಟೆಗೆ ನಗರದ ಮಂಡಿಪೇಟೆ ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿಯಲ್ಲಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನಡೆಯಲಿದೆ. ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮಾರ್ಚ್ 23 ಅಥವಾ ಅದಕ್ಕಿಂತ ಮುಂಚಿತವಾಗಿ ಅಂಚೆ ಅಧೀಕ್ಷಕರ ಕಚೇರಿಗೆ ಮುಂದಿನ ಕ್ರಮಕ್ಕಾಗಿ ತಲುಪಿಸುವಂತೆ ಇಲಾಖೆ ಪ್ರಕಟಣೆ ತಿಳಿಸಿದೆ.

### ಇಂದು ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ

**ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಉಕ್ಕಡಗಾತ್ರಿ ಶ್ರೀಕ್ಷೇತ್ರದಲ್ಲಿ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರವನ್ನು ಮಾ.16ರಂದು ಶ್ರೀಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಮಿಟಿ ಹಾಗೂ ಹರಪನಹಳ್ಳಿಯ ಜನನಿ ಯೋಗ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸ್ಪತ್ರೆಯ ನಿರ್ದೇಶಕ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ.ರಾಜೇಶ್ ಪಾದೇಕಲ್ ನೇತೃತ್ವದಲ್ಲಿ ತಜ್ಞ ವೈದ್ಯರು ಉಚಿತ ವೈದ್ಯಕೀಯ ಸಮಾಲೋಚನೆ ನಡೆಸುವರು.




ದಾವಣಗೆರೆ ನಗರದ ರೋಟರಿ ಬಾಲಭವನದಲ್ಲಿ ಭಾನುವಾರ ಎಐಯುಟಿಯುಸಿ ಕಾರ್ಮಿಕ ಸಂಘಟನೆಯಲ್ಲಿ ಕಾರ್ಗಿಲ್ ವರ್ಕರ್ಸ್ ಯೂನಿಯನ್ ಸಂಯೋಜನೆಗೊಂಡ ಪ್ರಯುಕ್ತ ಅಭಿನಂದನಾ ಕಾರ್ಯಕ್ರಮ ನಡೆಯಿತು. ಹರಿಹರ ಮಾಜಿ ಶಾಸಕ ಎಸ್. ರಾಮಪ್ಪ, ಮರಾಠ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮರಿಯೋಜಿರಾವ್, ರೈತ ಸಂಘದ ಮುಖಂಡರಾದ ಹೊನ್ನೂರು ಮುನಿಯಪ್ಪ, ಬುಳ್ಳಾಪುರದ ಹನುಮಂತಪ್ಪ, ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಹರಿಹರ ತಾಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕುಕ್ಕುವಾಡ ಉಪಸ್ಥಿತರಿದ್ದರು.

### ಗೆಲುವಿನ ನಾಗಾಲೋಟ ತಡೆಗೆ ಕಮಲ ಲೆಕ್ಕ | ಮತ್ತೆ ಕ್ಷೇತ್ರ ವಶದ ವಿಶ್ವಾಸದಲ್ಲಿ ಕೈ

## ದಕ್ಷಿಣ ಟಿಕೆಟ್ ಗಿಟ್ಟಿಸುವತ್ತ ಆಕಾಂಕ್ಷಿಗಳ ಚಿತ್ತ

**ದಾವಣಗೆರೆ:** ಈಗಾಗಲೇ ಕಳೆದೆರಡು ತಿಂಗಳಿನಿಂದಲೇ ರಾಜಕೀಯ ವಲಯದಲ್ಲಿ ದಾವಣಗೆರೆ ದಕ್ಷಿಣ ಉಪಚುನಾವಣೆಗೆ ಸಂಬಂಧಿಸಿದಂತೆ ಸಾಕಷ್ಟು ತೆರೆಮರೆಯ ಬೆಳವಣಿಗೆಗಳು ನಡೆಯುತ್ತಿದ್ದು, ಇದೀಗ ಚುನಾವಣೆ ದಿನಾಂಕ ಘೋಷಣೆಯೊಂದಿಗೆ ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಿಕೊಳ್ಳುವತ್ತ ತಮ್ಮ ಚಿತ್ತ ಹರಿಸಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ಈವರೆಗೆ ಪ್ರತಿನಿಧಿಸುತ್ತಿದ್ದ ಕಾಂಗ್ರೆಸ್ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪನವರು ನಿಧನರಾದ ಕಾರಣ ತೆರವಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಏ.9ರಂದು ಉಪಚುನಾವಣೆ ನಡೆಯಲಿದೆ.

**ಹೊಸ ಇತಿಹಾಸ ಸೃಷ್ಟಿಯ ವಿಶ್ವಾಸದಲ್ಲಿ ಕಮಲ:** ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ಕಾಂಗ್ರೆಸ್ ನಿರಂತರವಾಗಿ ಪ್ರತಿನಿಧಿಸುತ್ತಿದ್ದರೂ, ಕ್ಷೇತ್ರದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆ. ರಸ್ತೆ, ಚರಂಡಿ, ಒಳಚರಂಡಿ, ಸ್ವಚ್ಛತೆ ಸೇರಿದಂತೆ ಮೂಲಸೌಲಭ್ಯಗಳ ಕೊರತೆಯಿಂದಾಗಿ ಅನೇಕ ಕೊಳಗೇರಿಗಳು ನಿರ್ಮಾಣವಾಗಿವೆ. ಅಲ್ಪಸಂಖ್ಯಾತರನ್ನು ಓಟ್ ಬ್ಯಾಂಕ್ ಮಾಡಿಕೊಂಡಿರುವ ಕಾಂಗ್ರೆಸ್, ಕ್ಷೇತ್ರದ ಅಭಿವೃದ್ಧಿ ಕಡೆಗೆ ಮಾತ್ರ ಗಮನ ಹರಿಸಿಲ್ಲ. ಹೀಗಾಗಿ ಕ್ಷೇತ್ರದ ಮತದಾರರು ಬದಲಾವಣೆ ಬಯಸಿದ್ದು, ಈ ಬಾರಿಯ ಉಪಚುನಾವಣೆಯಲ್ಲಿ ಕಮಲ ಅರಳಿಸುವ ಮೂಲಕ ಹೊಸ ಇತಿಹಾಸಕ್ಕೆ ನಾಂದಿ ಹಾಡಲಿದ್ದಾರೆ ಎಂಬುದು ಬಿಜೆಪಿ ಮುಖಂಡರ ವಿಶ್ವಾಸವಾಗಿದೆ.

**ಪಾರಂಪರಿಕ ಓಟ್ ಬ್ಯಾಂಕ್, ಅನುಕಂಪದತ್ತ ಕೈ ಚಿತ್ತ:** ದಕ್ಷಿಣ ಕ್ಷೇತ್ರವು ಕೋಮು ಸೂಕ್ಷ್ಮ ಪ್ರದೇಶವಾಗಿದ್ದು, ಕ್ಷೇತ್ರದಲ್ಲಿ ಅಭಿವೃದ್ಧಿ ಜೊತೆಗೆ ಸಾಮರಸ್ಯ, ಶಾಂತಿ ಅಗತ್ಯವಾಗಿದೆ. ಬಿಜೆಪಿ ಗೆಲುವು ಸಾಧಿಸಿದರೆ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರು ಭಯದ ವಾತಾವರಣದಲ್ಲಿ ಬದುಕಬೇಕಾಗುತ್ತದೆ. ಹೀಗಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಬೇಕಿದೆ. ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಸಮುದಾಯಗಳು ಕಾಂಗ್ರೆಸ್ಸಿನ ಪಾರಂಪರಿಕ ಓಟ್ ಬ್ಯಾಂಕ್ ಆಗಿದ್ದು, ಶಾಸಕ ಶಾಮನೂರು ಶಿವಶಂಕರಪ್ಪನವರ ನಿಧನದ ಅನುಕಂಪವೂ ಪಕ್ಷಕ್ಕೆ ವರದಾನವಾಗಲಿದೆ ಎಂಬ ಲೆಕ್ಕಾಚಾರ ಕಾಂಗ್ರೆಸ್ ನಾಯಕರದ್ದಾಗಿದೆ.

### ಚುನಾವಣಾ ದಿನಾಂಕ ಘೋಷಣೆ ಹೊತ್ತಲ್ಲಿ ಒಗ್ಗಟ್ಟು ಪ್ರದರ್ಶನ | ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಒಕ್ಕೊರಲ ಘೋಷಣೆ

# ದಾವಣಗೆರೆ ದಕ್ಷಿಣ ಗೆಲುವೇ ನಮ್ಮ ಗುರಿ






**ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ದಿನಾಂಕ ಘೋಷಣೆಯಾದ ದಿನವೇ ಬಿಜೆಪಿ ಪಕ್ಷದ ಟಿಕೆಟ್ ಆಕಾಂಕ್ಷಿಗಳೆಲ್ಲರೂ ಒಗ್ಗಟ್ಟಿನ ಮಂತ್ರ ಜಪಿಸುವ ಮೂಲಕ ಎಲ್ಲ ಗೊಂದಲ, ಒಳಬೇಗುದಿಗೆ ತೆರೆ ಎಳೆದಿದ್ದಾರೆ. ತಮ್ಮ ಪೈಕಿ ಯಾರಿಗೇ ಟಿಕೆಟ್ ನೀಡಿದರೂ ಕೂಡ ಬಿಜೆಪಿ ಗೆಲುವೇ ನಮ್ಮ ಗುರಿ ಎಂದು ಒಕ್ಕೊರಲಿನಿಂದ ಸಾರಿದ್ದಾರೆ.

ನಗರದಲ್ಲಿ ಭಾನುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು, ಕಾಂಗ್ರೆಸ್ ವಶದಲ್ಲಿರುವ ದಾವಣಗೆರೆ ದಕ್ಷಿಣದಲ್ಲಿ ಈ ಬಾರಿ ಕಮಲ ಅರಳಲೇಬೇಕೆಂಬ ಪಣ ತೊಟ್ಟು ಬಣ ರಾಜಕೀಯಕ್ಕೆ ಇತಿಶ್ರೀ ಹಾಡಿದ್ದೇವೆ. ನಾವೆಲ್ಲರೂ ಒಗ್ಗಟ್ಟಾಗಿದ್ದು, ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಲು ಶ್ರಮಿಸಲಿದ್ದೇವೆ. ನಮ್ಮಲ್ಲಿ ಯಾರಿಗೇ ಟಿಕೆಟ್ ನೀಡಿದರೂ, ಪಕ್ಷದ ಸಾಮಾನ್ಯ ಕಾರ್ಯಕರ್ತನೊಬ್ಬನನ್ನು ಕಣಕ್ಕಿಳಿಸಿದರೂ ಬಿಜೆಪಿ ಗೆಲುವಿಗಾಗಿ ಕೆಲಸ ಮಾಡುತ್ತೇವೆ ಎಂದು ಘೋಷಿಸಿದರು.

ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಎಲ್ಲಾ ಆಕಾಂಕ್ಷಿಗಳ ಹೆಸರನ್ನು ರಾಜ್ಯ, ರಾಷ್ಟ್ರೀಯ ನಾಯಕರು ಪಡೆದಿದ್ದಾರೆ. ಇಲ್ಲಿವರೆಗೆ ದಾವಣಗೆರೆ ಜಿಲ್ಲೆಯಲ್ಲಿ ಹಿಂದೆ ಏನಾಗಿತ್ತೋ ಅದೆಲ್ಲವನ್ನೂ ಮರೆತು, ಪಕ್ಷವನ್ನು ಮತ್ತೆ ಗಟ್ಟಿಗೊಳಿಸುವತ್ತ ಸಂಕಲ್ಪ ಮಾಡಿದ್ದೇವೆ. ಯಾವುದೇ ಸಣ್ಣಪುಟ್ಟ ವ್ಯತ್ಯಾಸವೂ ಬರದಂತೆ ಕೆಲಸ ಮಾಡುತ್ತೇವೆ. ಈಗ ಮತ್ತೆ ಒಟ್ಟಾಗಿದ್ದೇವೆ, ಒಂದಾಗಿಯೇ ಇರುತ್ತೇವೆ. ಕಾಂಗ್ರೆಸ್ಸಿನಿಂದ ಉಪ ಚುನಾವಣೆಗೆ ಯಾರೇ ಅಭ್ಯರ್ಥಿಯಾದರೂ ಬಿಜೆಪಿ, ಕಮಲದ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ ಮಾತನಾಡಿ, ನಮ್ಮ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವವಿದ್ದು, ಸಾಮಾನ್ಯ ಕಾರ್ಯಕರ್ತರಿಗೂ ಇಲ್ಲಿ ಶಕ್ತಿ ಇದೆ. ಉಪ ಚುನಾವಣೆಯ ಕೆಲಸವನ್ನು ನಾವೆಲ್ಲರೂ ಒಂದಾಗಿ ಮಾಡಲಿದ್ದೇವೆ. ನಮ್ಮಲ್ಲಿ ಯಾರಿಗೇ ಟಿಕೆಟ್ ಕೊಟ್ಟರೂ ಬಿಜೆಪಿ ಗೆಲುವೇ ಮುಖ್ಯ. ನಾವ್ಯಾರೂ ಶಾಸಕ, ಮಂತ್ರಿಯಾಗಲು ಪಕ್ಷಕ್ಕೆ ಬಂದವರಲ್ಲ, ರಾಷ್ಟ್ರಭಕ್ತಿಯ ಹಿನ್ನೆಲೆಯಿಂದ ಪಕ್ಷಕ್ಕೆ ಬಂದವರು. ನಾವು ಪಕ್ಷಕ್ಕಾಗಿ ಏನು ಬೇಕಾದರೂ ತ್ಯಾಗ ಮಾಡಲು ಸಿದ್ಧವಿರುವಂತಹ ಕಾರ್ಯಕರ್ತರು. ದಾವಣಗೆರೆ ದಕ್ಷಿಣದಲ್ಲಿ ಮೊದಲ ಬಾರಿಗೆ ಬಿಜೆಪಿ ಗೆಲ್ಲಿಸುವುದೇ ನಮ್ಮೆಲ್ಲರ ಗುರಿಯಾಗಿದೆ ಎಂದು ಹೇಳಿದರು.

ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಟಿ. ಶ್ರೀನಿವಾಸ ದಾಸಕರಿಯಪ್ಪ ಮಾತನಾಡಿ, ಕಾಂಗ್ರೆಸ್ಸಿನ ದುರಾಡಳಿತದ ವಿರುದ್ಧದ ನಮ್ಮ ಹೋರಾಟ ಇರುತ್ತದೆ. ಇಂದಿಗೂ ದಕ್ಷಿಣ ಕ್ಷೇತ್ರದಲ್ಲಿ ಸರಿಯಾದ ಚರಂಡಿ, ಒಳ ಚರಂಡಿ, ರಸ್ತೆಗಳಿಲ್ಲ, ಹಳೆ ಭಾಗದ ಅನೇಕ ಪ್ರದೇಶಗಳು ಕೊಳಗೇರಿಗಳಂತಿವೆ. ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಈ ಸಲ ಬದಲಾವಣೆಗೆ ಮುನ್ನುಡಿಯನ್ನು ಬರೆಯಲಿದ್ದೇವೆ. ಈಗಾಗಲೇ ಉಪ ಚುನಾವಣೆಯ ಕುಸ್ತಿ ಅಖಾಡಕ್ಕೆ ನಾವು ಚಡ್ಡಿ ಹಾಕಿಕೊಂಡು ಸಿದ್ಧರಾಗಿದ್ದು, ಎದುರಾಳಿ ಪಕ್ಷದಿಂದ ಯಾರೇ ಪೈಲ್ವಾನರು ಕಣಕ್ಕಿಳಿದಿರೂ ಬಿಜೆಪಿ ಗೆಲುವೇ ನಮ್ಮೆಲ್ಲರ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಬಿ.ಜಿ. ಅಜಯ ಕುಮಾರ ಮಾತನಾಡಿ, ನಮ್ಮೆಲ್ಲಾ ಮುಖಂಡರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬಿಜೆಪಿ ಟಿಕೆಟ್ ನೀಡುವಂತೆ ವರಿಷ್ಠರಿಗೆ ಮನವಿ ಮಾಡಿದ್ದೇವೆ. ಸದ್ಯ ನಾನೂ ಸೇರಿದಂತೆ ಪಕ್ಷದ ಹಿರಿಯ ಮುಖಂಡರಾದ ಯಶವಂತರಾವ್ ಜಾಧವ್, ಶ್ರೀನಿವಾಸ ದಾಸಕರಿಯಪ್ಪ, ರಾಜನಹಳ್ಳಿ ಶಿವಕುಮಾರ, ಎಂ.ಪಿ. ಕೃಷ್ಣಮೂರ್ತಿ ಪವಾರ್, ದೇವರಮನಿ ಶಿವಕುಮಾರ, ಹೆಚ್.ಸಿ. ಜಯಮ್ಮ, ಬಿ.ಎಂ. ಸತೀಶ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಿದ್ದೇವೆ. ನಮ್ಮಲ್ಲಿ ಯಾರಿಗೇ ಆಗಲೀ ಅಥವಾ ಪಕ್ಷದ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿದರೂ ಸಹ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಸಂಕಲ್ಪ ಮಾಡಿದ್ದೇವೆ. ನಮ್ಮ ಅಭ್ಯರ್ಥಿ ಪರವಾಗಿ ತನು, ಮನ, ಧನದ ಸಹಕಾರ ನೀಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಧೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ, ಮುಖಂಡರಾದ ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ, ಗುರು ಸೋಗಿ, ಪೈಲ್ವಾನ ಹನುಮಂತ, ಶಿವಾನಂದ, ಎಂ.ಹೆಚ್. ಶ್ರೀನಿವಾಸ, ಮಲ್ಲಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

> ಸ್ವಾಭಿಮಾನಿ ಬಳಗದ ಜಿ.ಬಿ. ವಿನಯಕುಮಾರ ನಮಗೆ ಶತ್ರುವಲ್ಲ, ಅವರು ಕೂಡ ನಮ್ಮ ಸ್ನೇಹವಲಯದಲ್ಲಿಯೇ ಇದ್ದಾರೆ. ಅವರಿಗೆ ಮಾತ್ರವಲ್ಲದೆ, ಯಾರಿಗೇ ಟಿಕೆಟ್ ಕೊಟ್ಟರೂ ನಾವು ಪಕ್ಷದ ಗೆಲುವಿಗಾಗಿ ಕೆಲಸ ಮಾಡುತ್ತೇವೆ. ಆದರೆ, ದಶಕಗಳ ಕಾಲ ಪಕ್ಷಕ್ಕಾಗಿ ದುಡಿದವರಿಗೆ ಟಿಕೆಟ್ ಸಿಗಬೇಕೆಂಬುದು ನಮ್ಮ ಆಗ್ರಹ.
>
> ■ ಬಿ.ಜೆ. ಅಜಯಕುಮಾರ

> ಕಾಂಗ್ರೆಸ್ಸಿನಿಂದ ಯಾರು ಅಭ್ಯರ್ಥಿಯಾಗಲಿದ್ದಾರೆ ಎಂಬುದು ನಮಗೆ ಮುಖ್ಯವಲ್ಲ. ನಮ್ಮ ಬಿಜೆಪಿಯಿಂದ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿದರೂ, ಬರಲಿರುವ ಉಪ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿಕೊಳ್ಳುತ್ತೇವೆ. ನಮ್ಮಲ್ಲಿ ಯಾವುದೇ ಬಣ, ಗುಂಪುಗಳಿಲ್ಲ, ಇರುವುದೊಂದೇ ಗುಂಪು, ಅದು ಬಿಜೆಪಿ.
>
> ■ ಯಶವಂತರಾವ್ ಜಾಧವ್

## ನ್ಯಾಮತಿಯಲ್ಲಿ ಮಹಿಳಾ ದಿನಾಚರಣೆ: ಸನ್ಮಾನ

**ನ್ಯಾಮತಿ:** ಪಟ್ಟಣದ ಸರಕಾರಿ ಬಾಲಕಿಯರ ಪ್ರೌಢ ಶಾಲೆಯ ಆವರಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ. ತಾಲೂಕು ಆರೋಗ್ಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಮಹಿಳಾ ದಿನಾಚರಣೆಯ ನಿಮಿತ್ತ ಸರಕಾರಿ ವಿವಿಧ ಇಲಾಖೆಯ ಮಹಿಳಾ ನೌಕರರಿಗೆ ವಿವಿಧ ಆಟೋಟಗಳನ್ನು ಏರ್ಪಡಿಸಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧಕರ ಪ್ರಶಸ್ತಿ ಪಡೆದ ಸಾಧಕರಿಗೆ ಸನ್ಮಾನವನ್ನು ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ರೂಪ್ಲ ನಾಯ್ಕ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಕರ್ನಾಟಕ ರಾಜ್ಯ ನೌಕರರ ರಾಜ್ಯ ಪರಿಷತ್ ಸದಸ್ಯರಾದ ಕೆ.ವಿ. ಬಸವರಾಜ್. ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಎನ್. ಜ್ಞಾನೇಶ್, ತಾಲೂಕು ಶಿಕ್ಷಕರ ಸಂಘದ ಗೌರವಾಧ್ಯಕ್ಷ ಬಿ. ಸಿದ್ದಪ್ಪ,



ನ್ಯಾಮತಿ ತಾಲೂಕು ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷೆ ಎಸ್. ಸರ್ವಮಂಗಳ, ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷೆ ಸುಧಾ, ಶಿಕ್ಷಕರ ಸಂಘದ ನಿರ್ದೇಶಕರುಗಳಾದ ಪ್ರಭು, ಕೆ. ಪುಟ್ಟಪ್ಪ, ಶಿಕ್ಷಕರ ಸಂಘದ ಕಾರ್ಯದರ್ಶಿ ಅನ್ನಪೂರ್ಣಮ್ಮ, ಖಜಾಂಚಿ ಎಸ್.ಎಚ್. ಸುರೇಶ್, ಆರೋಗ್ಯ ಇಲಾಖೆ ಡಾ. ಲಿಂಗರಾಜೇಂದ್ರಪ್ಪ, ಡಾ.ಶಿಲ್ಪ ಅಜಯ್, ಚಂದ್ರಶೇಖರ್, ಲೋಕೇಶ್ವರಪ್ಪ, ಪ್ರಗತಿಪರ ರೈತ ಮಹಿಳೆ ಇಂದ್ರಮ್ಮ, ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಸರಸ್ವತಿ, ಶಿಲ್ಪ, ದಳವಾಯಪ್ಪ ಹಾಗೂ ಆಟೋಟಗಳಲ್ಲಿ ಗೆದ್ದ ವಿವಿಧ ಇಲಾಖೆಯ ಮಹಿಳಾ ನೌಕರರಿಗೆ ಸನ್ಮಾನ ಮಾಡಲಾಯಿತು.

## ಕೃಷಿ ಪತ್ತಿನ ಸಹಕಾರಿಗೆ ಅಧ್ಯಕ್ಷರಾಗಿ ಬಸವರಾಜ್

**ನ್ಯಾಮತಿ:** ತಾಲೂಕಿನ ಚೀಲೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಡಿ.ಎಸ್. ಬಸವರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಾಗರಾಜಪ್ಪ ತಿಳಿಸಿದ್ದಾರೆ.

ಶುಕ್ರವಾರ ನಡೆದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಡಿ.ಎಸ್. ಬಸವರಾಜಪ್ಪ ಹೊರತುಪಡಿಸಿ ಇತರರು ನಾಮಪತ್ರ ಸಲ್ಲಿಸದ ಕಾರಣ ಇವರ ಆಯ್ಕೆಯನ್ನು ಘೋಷಿಸಲಾಯಿತು.

ಸಂಘದ ಉಪಾಧ್ಯಕ್ಷೆ ಪುಷ್ಪಾವತಿ ಮಲ್ಲಿಕಾರ್ಜುನ್ ನಿರ್ಗಮಿತ ಅಧ್ಯಕ್ಷ ಡಿ.ಎನ್. ರವಿಕುಮಾರ್, ನಿರ್ದೇಶಕರಾದ ಎಲ್. ಸತೀಶ್, ಅಂಗಡೇರ ಕರಿಬಸಪ್ಪ, ಡಿ.ಜಿ. ವಿಶ್ವನಾಥ್, ಎಚ್. ಬಸವರಾಜಪ್ಪ, ರವಿ, ಕುಮಾರನಾಯ್ಕ, ನಾಗರಾಜಪ್ಪ, ಚಿಕ್ಕಿನಳ್ಳೇರ ರಮೇಶ್, ಗ್ರಾಮದ ಮುಖಂಡರಾದ ಪುರವಂತರ ಪರಮೇಶ್ವರಪ್ಪ, ಡಿ.ಜಿ. ರಾಜಪ್ಪ, ಕೆ. ಹಾಲೇಶಪ್ಪ, ಗಿರೀಶಕುಮಾರ್, ಮಂಜುನಾಥ್, ಮಲ್ಲೇಶಪ್ಪ, ಮಾಯಪ್ಪ ಸೇರಿದಂತೆ ಇತರರು ಇದ್ದರು.



## ಮಾನವನ ಜೀವನದಲ್ಲಿ ಆಧ್ಯಾತ್ಮ ಮುಖ್ಯ: ನಿರ್ಭಯಾನಂದಶ್ರೀ

**ಬಸವಾಪಟ್ಟಣ:** ಸಮೀಪದ ಪುಣ್ಯಸ್ಥಳದಲ್ಲಿ ಶ್ರೀ ರಾಘವೇಂದ್ರ ಕೃಪಾಶ್ರಮದ ಸಭಾಮಂಟಪದಲ್ಲಿ ಯತಿಗಳೊಂದಿಗೆ ಕ್ಷೇತ್ರ ದರ್ಶನ ಕಾರ್ಯಕ್ರಮ ನಡೆಯಿತು.

ಗದಗ-ವಿಜಯಪುರ ರಾಮಕೃಷ್ಣ ಆಶ್ರಮದ ಶ್ರೀನಿರ್ಭಯಾನಂದ ಸ್ವಾಮೀಜಿ ಆಧ್ಯಾತ್ಮಿಕ ಉಪನ್ಯಾಸ ನೀಡಿ, ಮಾನವನ ಜೀವನದಲ್ಲಿ ಆಧ್ಯಾತ್ಮ ಅತ್ಯಂತ ಪ್ರಮುಖ ವಾಗಿದೆ ಎಂದು ತಿಳಿಸಿದರು.

ಧ್ಯಾನ, ಭಕ್ತಿ ಮತ್ತು ನಿಸ್ವಾರ್ಥ ಸೇವೆ ಮೂಲಕ ಮಾನವನು ತನ್ನ ಜೀವನವನ್ನು ಶ್ರೇಷ್ಠವಾಗಿಸಿಕೊಳ್ಳಬಹುದು. ಮನಸ್ಸಿನ ಶುದ್ಧತೆ, ಸತ್ಯನಿಷ್ಠೆ ಮತ್ತು ದೇವರ ಮೇಲೆ ಪ್ರೀತಿ ಇವು ಆಧ್ಯಾತ್ಮಿಕ ಜೀವನದ ಮೂಲ ತತ್ವಗಳಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲೆ ಚೊಕ್ಕಾಡಿ ರಾಮಕೃಷ್ಣಾಶ್ರಮದ ಶ್ರೀಸ್ವಾಮಿ ದತ್ತಪಾದಾನಂದಜಿ ಮಹಾರಾಜ್, ಧಾರವಾಡ ಶ್ರೀರಾಮಕೃಷ್ಣಾಶ್ರಮದ ವಿಜಯಾನಂದ ಸರಸ್ವತಿ



ಸ್ವಾಮೀಜಿ, ರಾಣೆಬೆನ್ನೂರು ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಪ್ರಕಾಶಾನಂದ ಜಿ ಮಹಾರಾಜ್, ಹೊಸಪೇಟೆ ರಾಮಕೃಷ್ಣಾಶ್ರಮದ ಸ್ವಾಮಿ ಸುಮೇಧಾನಂದ ಜಿ ಮಹಾರಾಜ್, ಬೆಂಗಳೂರು ರಾಮಕೃಷ್ಣ ಆಶ್ರಮದ ಸ್ವಾಮಿ ಅಭಯಾನಂದ ಜಿ ಮಹಾರಾಜ್, ಹರಿಹರ ರಾಮಕೃಷ್ಣ ಆಶ್ರಮದ ಸ್ವಾಮಿ ಆತ್ಮದ ದೀಪಾನಂದ ಜಿ ಮಹಾರಾಜ್, ಗದಗ ಹೊಲಕೋಟೆಯ ರಾಮಕೃಷ್ಣಾಶ್ರಮದ ಸ್ವಾಮಿ ಶಿವಪ್ರಿಯಾನಂದ ಜಿ ಮಹಾರಾಜ್ ಹಾಗೂ ರಾಘವೇಂದ್ರ ಕೃಪಾಶ್ರಮದ ಸುಧಾಕರ್ ಪಾಲ್ಗೊಂಡಿದ್ದರು.

## ಕ್ಯಾಂಪಸ್ ಸೆಲೆಕ್ಷನ್ ಮೂಲಕ ಉದ್ಯೋಗ ಪಡೆಯುವುದು ಸಾಧನೆ: ಸಿದ್ದೇಶ್ವರ

**ದಾವಣಗೆರೆ:** ಇಂದಿನ ಕಾಲಘಟ್ಟದಲ್ಲಿ ಕ್ಯಾಂಪಸ್ ಸೆಲೆಕ್ಷನ್ ಮೂಲಕ ಉದ್ಯೋಗ ಪಡೆಯುವುದು ಕೂಡ ಒಂದು ಸಾಧನೆಯಾಗಿದೆ. ಆದರೂ, ವಿದ್ಯಾರ್ಥಿಗಳು ತಮ್ಮ ಸ್ವಂತ ಕಾಲ ಮೇಲೆ ನಿಂತು ಹತ್ತಾರು ಜನಕ್ಕೆ ಉದ್ಯೋಗ ನೀಡುವಂತಾಗಬೇಕು. ಆಗ ಮಾತ್ರ ಕಲಿತ ಶಿಕ್ಷಣಕ್ಕೆ ಸಾರ್ಥಕತೆ ದೊರೆಯುತ್ತದೆ ಎಂದು ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ.ಸಿದ್ದೇಶ್ವರ ಅಭಿಪ್ರಾಯಪಟ್ಟರು.

ನಗರದ ಜಿಎಂಐಟಿ ಕಾಲೇಜಿನ ಜಿ.ಎಂ. ಹಾಲಮ್ಮ ಆಡಿಟೋರಿಯಂ ನಲ್ಲಿ ಶನಿವಾರ ಜಿ.ಎಂ ತಾಂತ್ರಿಕ ಮಹಾವಿದ್ಯಾಲಯದ ಬೆಳ್ಳಿ ಹಬ್ಬದ ಅಂಗವಾಗಿ ಆಯೋಜಿಸಿದ್ದ 21ನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಉದ್ಯೋಗಾಕಾಂಕ್ಷಿಗಳಾಗದೆ, ಸಮಾಜಕ್ಕೆ ಉದ್ಯೋಗ ನೀಡುವ ಶಕ್ತಿಯಾಗಿ ಬೆಳೆಯಬೇಕು. ಕೇಂದ್ರ ಸರ್ಕಾರದ ಸ್ಟಾರ್ಟ್ ಅಪ್ ಯೋಜನೆಗಳು ಮತ್ತು ಬ್ಯಾಂಕ್‌ಗಳು ನೀಡುವ



ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯಗಳನ್ನು ಬಳಸಿಕೊಂಡು ಸ್ವಂತ ಉದ್ಯಮ ಸ್ಥಾಪಿಸಬೇಕು. ಈ ಮೂಲಕ ದೇಶದ ಆರ್ಥಿಕತೆಗೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಜಿ.ಎಂ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಆರ್. ಶಂಕಪಾಲ್ ಮಾತನಾಡಿ, ಭಾರತವು 2047ರ ವೇಳೆಗೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಎಂಜಿನಿಯರ್ ಗಳ ಪಾತ್ರ ದೊಡ್ಡದಿದೆ. ನಿಮ್ಮ ರೆಸ್ಯೂಮ್‌ಗಿಂತ ರೆಪ್ಯುಟೇಷನ್ ಮುಖ್ಯ. ಪದವಿ ದಿನವು ಕೇವಲ ಒಂದು ಪ್ರಮಾಣಪತ್ರವನ್ನು ಪಡೆಯುವ ಸಮಾರಂಭವಲ್ಲ, ಇದು ವಿದ್ಯಾರ್ಥಿಗಳ ಕಠಿಣ ಪರಿಶ್ರಮ ಮತ್ತು ಬೌದ್ಧಿಕ ಬೆಳವಣಿಗೆಯ ಸಂಕೇತವಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗಾಯಿತ್ರಿ ಸಿದ್ದೇಶ್ವರ್, ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ. ಲಿಂಗರಾಜು, ಆಡಳಿತ ಮಂಡಳಿಯ ಸದಸ್ಯ ಡಾ.ಕೆ. ದಿವಾನಂದ್, ಕುಲಸಚಿವ ಡಾ. ಸುನೀಲ್ ಕುಮಾರ್ ಉಪಸ್ಥಿತರಿದ್ದರು. ಡಾ.ಜೆ. ಪ್ರವೀಣ್ ಸ್ವಾಗತಿಸಿದರು. ಡಾ.ಕೆ. ಆಶಾ ಅತಿಥಿಗಳನ್ನು ಪರಿಚಯಿಸಿದರು. ಗಣೇಶ್ ಜಿ.ಟಿಲ್ವೆ, ಎನ್.ಎಲ್. ಅನುಷಾ ಕಾರ್ಯಕ್ರಮ ನಿರೂಪಿಸಿದರು.

### ಹಿರಿಯ ಸಾಹಿತಿ ಕೆ.ಪಿ. ದೇವೇಂದ್ರಯ್ಯ

## ಕಿರಿಯದರಲ್ಲಿ ಹಿರಿದರ್ಥ ಕೊಡುವ ಚುಟುಕು ಸಾಹಿತ್ಯ

**ಹೊನ್ನಾಳಿ:** ಕಿರಿಯದರಲ್ಲಿ ಹಿರಿದರ್ಥ ಕೊಡುವ ಪದ ಸಾಹಿತ್ಯವೇ ಚುಟುಕು ಸಾಹಿತ್ಯ ಎಂದು ಹಿರಿಯ ಸಾಹಿತಿ ದೇವೇಂದ್ರಯ್ಯ ಹೇಳಿದರು.

ಭಾನುವಾರ ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ತಾಲೂಕು ಚುಟುಕು ಸಾಹಿತ್ಯ ಪರಿಷತ್ ಘಟಕ ಹಮ್ಮಿಕೊಂಡಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ, ಪುಸ್ತಕ ಬಿಡುಗಡೆ ಹಾಗೂ ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪತ್ರ ವಿತರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಯಾರು ಕಣ್ಣೀರಿನ ಹಿಂದೆ ಹೋಗುತ್ತಾರೋ ಅವರು ಕವಿ ಎಂದು ವಾಲ್ಮೀಕಿ ಹೇಳಿದ್ದಾರೆ. ಯಾವುದೇ ಸಾಹಿತ್ಯವಾಗಲಿ ಅದನ್ನು ಓದುವಾಗ ಅರ್ಥ ಸ್ಫುರಿಸುವಂತಿರಬೇಕು. ಸಾಹಿತ್ಯದಲ್ಲಿ ಶೀಲ, ಅಶ್ಲೀಲ ಬಂದೇ ಬರುತ್ತದೆ. ಕಾವ್ಯ ತಾನೇ ಹುಟ್ಟುವುದಿಲ್ಲ ಅದನ್ನು ಹಡೆಯ ಬೇಕು. ತಲೆ ಕೆಟ್ಟಾಗಲೇ ಕಲೆ ಹುಟ್ಟುವುದು ಎನ್ನುವುದು ಹಿರಿಯ ಕವಿಗಳ ಅಭಿಮತ, ಕೆಲವರಿಗೆ ಇದ್ದಕ್ಕಿದ್ದಂತೆ ಹೊಳೆಯುವುದೇ ಕವಿತೆ ಎಂದು ಹೇಳಿದರು.



ಸಾಹಿತಿ ಸಂಗನಾಳಮಠ ಅವರು ಮಾತನಾಡಿ, ಚುಟುಕು ಇತರರಿಗೆ ಚುರುಕು ಮುಟ್ಟಿಸುವಂತಿರಬೇಕು. ಇತ್ತೀಚೆಗೆ ನಿಧನ ಹೊಂದಿದ ಜಿಲ್ಲಾ ಚುಸಾಪ ಅಧ್ಯಕ್ಷ ರಾಜಶೇಖರ್ ಗುಂಡಗಟ್ಟಿ ಅವರು ಬಹಳ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದರು. ಅವರ ಅವಧಿಯಲ್ಲಿ ಜಿಲ್ಲೆ ಮತ್ತು ಹೊರ ಜಿಲ್ಲೆಗಳಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು ಎಂದು ಸ್ಮರಿಸಿದರು.

ಸಾಹಿತಿ ಡಾ. ನಾ. ಕೊಟ್ರೇಶ್ ಉತ್ತಂಗಿ ಅವರು ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿದರು. ನಿಕಟಪೂರ್ವ ಅಧ್ಯಕ್ಷ ಎನ್.ಕೆ. ಆಂಜನೇಯ ಅವರು ನೂತನ ಅಧ್ಯಕ್ಷ ನಾರಾಯಣಸ್ವಾಮಿ ಅವರಿಗೆ ಅಧಿಕಾರ ಹಸ್ತಾಂತರಿಸಿ ಮಾತನಾಡಿದರು.

ಜಿಲ್ಲಾ ಚುಸಾಪ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ತೆಲಿಗೆ, ತಾಲೂಕು ಅಧ್ಯಕ್ಷ ನಾರಾಯಣ ಸ್ವಾಮಿ, ದಾರಿದೀಪ ಕೃತಿ ರಚನೆಕಾರ ಕೆ. ಸಿದ್ದಪ್ಪ ಹಾಲಿವಾಣ, ಕಾರ್ಯದರ್ಶಿ ಯೋಗೇಶ್ ಪಾಟೀಲ್, ನ್ಯಾಮತಿಯ ಡಿ.ಎಂ. ಹಾಲಾರಾಧ್ಯ, ಎಸ್‌ಜೆವಿಪಿ ಬಿಇಡಿ ಕಾಲೇಜಿನ ಡಾ. ಮಮತಾ, ಕಲಾವಿದ ಪ್ರೇಂಕುಮಾರ್ ಬಂಡಿಗಡಿ ಮಾತನಾಡಿದರು. ದಾವಣಗೆರೆಯ ಓಂಕಾರಯ್ಯ ತವನಿಧಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕವಿಗೋಷ್ಠಿಯನ್ನು ಉಪ ನ್ಯಾಸಕ ಮಾ.ಬ. ನಾಗರಾಜ್ ಕುಂದೂರು ನಿರೂಪಿಸಿದರು. ಸಮಾರಂಭದಲ್ಲಿ ಜಿಲ್ಲಾ ಚುಸಾಪ ಗೌರವಾಧ್ಯಕ್ಷ ಶಿವಯೋಗಿ ಹಿರೇಮಠ, ಸ್ಫೂರ್ತಿ ಪ್ರಕಾಶನದ ಅಧ್ಯಕ್ಷ ಎಂ. ಬಸವರಾಜ್, ಇದ್ದರು.

### ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ಆರ್.ಎಲ್. ಉಮಾಶಂಕರ್

## ದೇಶಕ್ಕೆ ಒಳ್ಳೆಯ ಪ್ರಜೆ ನೀಡುವುದು ಸಮಾಜಸೇವೆ

**ದಾವಣಗೆರೆ:** ಮಕ್ಕಳಿಗೆ ಆಸ್ತಿ ಮಾಡುವ ಜೊತೆಗೆ ಉತ್ತಮ ಗುಣ, ನಡತೆಗಳನ್ನು ಕಲಿಸಬೇಕು. ದೇಶಕ್ಕೆ ಒಳ್ಳೆಯ ಪ್ರಜೆಗಳನ್ನು ನೀಡುವುದು ಕೂಡ ಅತಿದೊಡ್ಡ ಸಮಾಜಸೇವೆ ಎಂದು ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ಆರ್.ಎಲ್.ಉಮಾಶಂಕರ್ ಅಭಿಪ್ರಾಯಪಟ್ಟರು.

ನಗರದ ಎ.ವಿ.ಕೆ ಮಹಿಳಾ ಕಾಲೇಜಿನಲ್ಲಿ ಭಾನುವಾರ ಹಳೆಯ ವಿದ್ಯಾರ್ಥಿಗಳ ಸಮ್ಮಿಲನದ ಅಂಗವಾಗಿ ಏರ್ಪಡಿಸಿದ್ದ ಗುರು ವಂದನೆ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಕಾಲಘಟ್ಟದಲ್ಲಿ ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವುದು ಪೋಷಕರಿಗೆ ಸವಾಲಿನ ಕೆಲಸವಾಗಿದೆ.



ಸ್ಮಾರ್ಟ್ ಫೋನ್, ಇಂಟರ್ನೆಟ್ ಪ್ರಭಾವದಿಂದ ಮಕ್ಕಳು ಅನೇಕ ವಿಷಯಗಳನ್ನು ಮುಂಚೆಯೇ ತಿಳಿದುಕೊಳ್ಳುತ್ತಾರೆ. ಬದಲಾಗುತ್ತಿರುವ ಜಗತ್ತಿನಲ್ಲಿ ನಮ್ಮ ಪೂರ್ವಜರು ಹಾಕಿಕೊಟ್ಟ ಸಂಸ್ಕಾರಗಳನ್ನು ಉಳಿಸಿಕೊಂಡು ಹೋಗುವುದು ಅತ್ಯಂತ ಮುಖ್ಯವಾಗಿದೆ. ಸುಸಂಸ್ಕೃತ ಸಮಾಜದ ನಿರ್ಮಾಣವು ಮನೆಯ ಅಂಗಳದಿಂದಲೇ ಆರಂಭವಾಗಬೇಕು ಎಂದರು.

ಕುಟುಂಬ, ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಸುಸಂಸ್ಕಾರದ ಬೀಜಗಳು ತಾಯಿಯಿಂದಲೇ ಮೊಳೆಯುತ್ತವೆ. ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಮಹಿಳೆಯರು ಮನೆಯಿಂದ ಹೊರಗೆ ಕೆಲಸ ಮಾಡುವ ಅಗತ್ಯತೆ ಉಂಟಾಗಿದೆ. ಆದರೂ ಮನೆಗೆ ಸಂಸ್ಕಾರ, ಮೌಲ್ಯಗಳನ್ನು ನೀಡುವ ಹೊಣೆಗಾರಿಕೆಯಿಂದ ಮಹಿಳೆಯರು ವಿಮುಖರಾಗಬಾರದು. ದಾನ ಪರಂಪರೆ ಹಿನ್ನೆಲೆಯಲ್ಲಿ ವ್ಯಾಪಾರದಲ್ಲಿ ಗಳಿಸುವ ಲಾಭದ ಒಂದು ಭಾಗವನ್ನು ಸಮಾಜಸೇವೆಗೆ ಮೀಸಲಿಡಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಪ್ರೊ. ಕಮಲಾ ಸೊಪ್ಪಿನ್ ವಹಿಸಿದ್ದರು. ಡಾ. ಸುನಿತಾ ಉಮಾಶಂಕರ್, ನಿವೃತ್ತ ಪ್ರಾಂಶುಪಾಲೆ ಪ್ರೊ. ಶಕುಂತಲಾ, ಹಳೆಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷೆ ಶ್ವೇತಾ ಆರ್. ಗಾಂಧಿ, ಸಹ ಸಂಚಾಲಕಿ ಡಾ.ಎನ್. ವೀಣಾ, ಐಕ್ಯೂಎಸಿ ಸಹ ಸಂಚಾಲಕ ಡಾ.ಬಿ.ಜೆ. ರುದ್ರೇಶ್ ಸೇರಿದಂತೆ ಕಾಲೇಜಿನ ಅಧ್ಯಾಪಕರು, ಹಳೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಂಪಾದಕೀಯ

### ಕೋಲ್ಕೊತ್ತಾ ರ್‍ಯಾಲಿ ಸಂದೇಶ ನೀಡಿದೆ

ಕೋಲ್ಕೊತ್ತಾದ ಬ್ರಿಗೇಡ್ ಪರೇಡ್ ಮೈದಾನ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದೆ. ಪ್ರಧಾನಿ ಪ್ರವಾಸದ ಭಾಗ ಮತ್ತು ಬಿಜೆಪಿಯ ರ್‍ಯಾಲಿಯ ಕಾರಣಕ್ಕಲ್ಲದೆ ಪ.ಬಂಗಾಳದ ಪ್ರತಿ ಪ್ರಜೆಯೂ ಅಂದು ಮೂಗಿನ ಮೇಲೆ ಬೆರಳಿಟ್ಟು ಅದನ್ನು ಗಮನಿಸಿದೆ. ಪ. ಬಂಗಾಳದಲ್ಲಿ ಐತಿಹಾಸಿಕ ಮಹತ್ವವಿರುವ ಬ್ರಿಗೇಡ್ ಪರೇಡ್ ಮೈದಾನ ಬ್ರಿಟಿಷ್ ಕಾಲದಿಂದಲೇ ರಾಜ್ಯದ ಹೆಗ್ಗುರುತು. ವಿಶಾಲ ಮೈದಾನದ ಸಮೀಪದಲ್ಲೇ ಸಾಮ್ರಾಜ್ಯಶಾಹಿಯ ಕುರುಹಾದ ವಿಕ್ಟೋರಿಯಾ ಭವನ ತನ್ನ ಕಥೆಯನ್ನು ಹೇಳುತ್ತದೆ. ಅಂಥ ಬ್ರಿಗೇಡ್ ಮೈದಾನ ಮೊನ್ನೆ ಮೊಟ್ಟಮೊದಲ ಬಾರಿಗೆ ತುಂಬಿತ್ತು. ಇದುವರೆಗೆ ಕಾಂಗ್ರೆಸಿಗರು, ಕಮ್ಯುನಿಸ್ಟರು ಮತ್ತು ತೃಣಮೂಲ ಹಲವು ಬಾರಿ ಆ ಮೈದಾನದಲ್ಲಿ ರ್‍ಯಾಲಿ ನಡೆಸಿ ಮೈದಾನ ತುಂಬಿಸಲು ಪ್ರಯತ್ನಿಸಿದರೂ ಇದುವರೆಗೂ ಯಶಸ್ಸು ಕಂಡಿರಲಿಲ್ಲ. ಸುಮಾರು ಐದು ಲಕ್ಷ ಜನ ನೆರೆಯಬಹುದಾದ ಮೈದಾನ ಅಂದು ಹೊಸ ರಾಜಕೀಯ ವ್ಯಾಖ್ಯಾನವನ್ನೂ ನಿರ್ಮಿಸಿತು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ದೌರ್ಜನ್ಯ, ಕೇಂದ್ರವನ್ನು ಲೆಕ್ಕಿಸದಿರುವ ಅದರ ದುಂಡಾವರ್ತನೆಗಳ ತರುವಾಯವೂ ಜನ ಬಿಜೆಪಿಯ ರ್‍ಯಾಲಿಯನ್ನು ಬೆಂಬಲಿಸಿದ್ದರೆಂದರೆ ಬಂಗಾಳ ಬದಲಾಗುತ್ತಿದೆ ಎಂದೇ ಅರ್ಥ.



ರ್‍ಯಾಲಿಗೆ ಡಾರ್ಜಲಿಂಗ್‌ನ ಕೊನೆಯ ಹಳ್ಳಿಯಿಂದ ಪರಗಣ ಜಿಲ್ಲೆಗಳ ಕೊನೆಯ ಹಳ್ಳಿಯವರೆಗೆ, ಕೂಚ್ ಬಿಹಾರಿನ ಪೂರ್ವದಿಂದ ಪುರುಲಿಯಾದ ಪಶ್ಚಿಮ ತುದಿಯವರೆಗೆ ಪ್ರವಾಹದಂತೆ ಜನರು ಆಗಮಿಸಿದ್ದರು. ಕೆಲವು ಜಿಲ್ಲೆಗಳಿಂದ ಕೋಲ್ಕೊತ್ತಾಕ್ಕೆ ರೈಲು ಪ್ರಯಾಣದ ಅವಧಿಯೇ 20 ಗಂಟೆಗಳಿಗೂ ಹೆಚ್ಚು. ಅಂಥ ಸುದೀರ್ಘ ಪ್ರಯಾಣದಲ್ಲಿ ಸ್ವಂತ ಊಟ ಮತ್ತು ವಸತಿಯ ವ್ಯವಸ್ಥೆಯೊಂದಿಗೆ ಜನರು ಮೋದಿಯವರ ಮಾತನ್ನು ಆಲಿಸಲು ಬಂದಿದ್ದರೆಂದರೆ ಅವರು ವಾಸ್ತವದಿಂದ ಹೊರಗೆ ಬರಲು ತಹತಹಿಸುತ್ತಿದ್ದಾರೆಂದೇ ಅರ್ಥ. ಒಂದು ಕಾಲದಲ್ಲಿ ಇದೇ ಜನರು ಕಾಂಗ್ರೆಸನ್ನು ನಂಬಿ ಗೆಲ್ಲಿಸಿದ್ದರು. ಅನಂತರ ಕಮ್ಯುನಿಸ್ಟರ ಘೋಷಣೆಗಳಿಗೆ ಮರುಳಾಗಿ ಕಾಮ್ರೆಡ್‌ಗಳಿಂದ ಆಳಿಸಿಕೊಂಡಿದ್ದರು. ಕಮ್ಯುನಿಸ್ಟರ ಅರಾಜಕತೆಯನ್ನು ದೂರ ಮಾಡುವ ನೆಪದಲ್ಲಿ ಮಮತಾ ಬ್ಯಾನರ್ಜಿ ರಾಜ್ಯಾದ್ಯಂತ ಚಳವಳಿಯನ್ನು ನಡೆಸಿ ಅಧಿಕಾರಕ್ಕೆ ಬಂದರು. ಆದರೆ ಬಂಗಾಳಕ್ಕೆ ಸಿಕ್ಕಿದ್ದು ಕಮ್ಯುನಿಸ್ಟರಿಗಿಂತ ಹೆಚ್ಚಿನ ದುರಾಡಳಿತ. ಇಂದು ತೃಣಮೂಲ ಕಾಂಗ್ರೆಸ್‌ನ ಪಾಪದ ಕೊಡ ತುಂಬಿದೆ. ಅದಕ್ಕೆ ಸಾಕ್ಷಿ ಕೋಲ್ಕೊತ್ತಾದ ಈ ರ್‍ಯಾಲಿ. ಒಂದು ಮೈದಾನದಲ್ಲಿ ಐದು ಲಕ್ಷದಷ್ಟು ಹೆಚ್ಚು ಸೇರುವುದೊಂದು ಸಾಹಸವಾದರೆ, ಆ ಬೃಹತ್ ಸಂಖ್ಯೆಯನ್ನು ಭಾಷಣದವರೆಗೆ ಶಾಂತಿಯುತವಾಗಿ, ಶಿಸ್ತಿನಿಂದ ಕೂರಿಸುವುದು ಇನ್ನೊಂದು ಸಾಹಸ. ಮೋದಿಯವರ ಭಾಷಣವಿದ್ದುದು ಅಪರಾಹ್ನ. ಮುಂಜಾನೆಯಿಂದಲೇ ಮೈದಾನದತ್ತ ಆಗಮಿಸುತ್ತಿದ್ದ ಜನಸಾಗರ ಮಧ್ಯಾಹ್ನದ ಹೊತ್ತಿಗೆ ತುಂಬಿತ್ತೆಂದರೆ ಪಶ್ಚಿಮ ಬಂಗಾಳ ಏನನ್ನು ನಿರೀಕ್ಷಿಸುತ್ತಿದೆ ಎನ್ನುವುದನ್ನು ನಾವು ಅಂದಾಜಿಸಬಹುದು.

ಮೋದಿಯವರು ಸಹಜವಾಗಿಯೇ ಆಕ್ರಮಣಕಾರಿಯಾಗಿ ಮಾತುಗಳನ್ನಾಡಿದರು. ನೊಂದ ಬಂಗಾಳಕ್ಕೆ ಅದರ ಅವಶ್ಯಕತೆ ಇತ್ತು. ಮುಂದಿನ ದಿನಗಳಲ್ಲಿ ಅದರ ಫಲವನ್ನು ಪ.ಬಂಗಾಳದಲ್ಲಿ ಕಾಣಬಹುದು ಎಂಬುದನ್ನು ಕಾರ್ಯಕ್ರಮ ಹೇಳುತ್ತಿತ್ತು.

# ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ಥಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬುದು ಸಾವರ್ಕರ್ ದೃಷ್ಟಿಕೋನವಾಗಿತ್ತು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಜಾಗತಿಕ ಮಟ್ಟದಲ್ಲಿ ಯುದ್ಧೋನ್ಮಾದ ಹೆಚ್ಚಾಗಿ ಅಮೆರಿಕ, ಇಸ್ರೇಲ್ ಜಂಟಿ ದಾಳಿಯಿಂದ ಇರಾನ್ ಎಂಬ ತೈಲ ಸಂಪದ್ಭರಿತ ರಾಷ್ಟ್ರ ಸ್ಮಶಾನಸದೃಶವಾಗಿರುವುದು, ಇರಾನ್ ಕೂಡ ಅಮೆರಿಕ, ಇಸ್ರೇಲ್ ನೆಲೆಗಳನ್ನು ಧ್ವಂಸಗೊಳಿಸುತ್ತಿರುವುದು, ತತ್ಪರಿಣಾಮವಾಗಿ ಜಾಗತಿಕವಾಗಿ ತೈಲ ಬೆಲೆಯೇರಿಕೆ, ಅಡುಗೆ ಅನಿಲಕ್ಕೆ ತತ್ವಾರ- ಇತ್ಯಾದಿ ಗಂಭೀರ ಸಮಸ್ಯೆ ಉದ್ಭವಿಸಿರುವುದು ವರ್ತಮಾನದ ವಿದ್ಯಮಾನಗಳು.

ಈಗಿನ ಯುದ್ಧದ ಹಿನ್ನೆಲೆಯಲ್ಲಿ, ಹಿಂದೆ ಎರಡನೇ ಜಾಗತಿಕ ಸಮರ ನಡೆದಾಗ ಭಾರತದ ಪರಿಸ್ಥಿತಿ ಹೇಗಿತ್ತು? ಆಗ ವೀರ ಸಾವರ್ಕರ್, ಆ ಯುದ್ಧದಲ್ಲಿ ಪಾರತಂತ್ರ್ಯದಲ್ಲಿ ನರಳುತ್ತಿದ್ದ ಭಾರತದ ನಿಲುವು ಹೇಗಿರಬೇಕೆಂಬುದನ್ನು ತಮ್ಮ ಭಾಷಣ, ಬರೆಹಗಳಲ್ಲಿ ಸೂಚಿಸಿದ್ದರು? ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶ ನಾಯಕರ ನಿಲುವು ಹೇಗಿರಬೇಕೆಂದು ಹೇಳಿದ್ದರು? ಮುಂತಾದ ಕುತೂಹಲಕರ ಸಂಗತಿಗಳತ್ತ ಒಮ್ಮೆ ಗಮನಹರಿಸುವ ಪ್ರಯತ್ನ ಉದ್ದೇಶ ಈ ಲೇಖನದ್ದು.

ಸಾವರ್ಕರ್ ಅಂಡಮಾನ್ ಸೆರೆಯಿಂದ ಬಿಡುಗಡೆಯಾಗಿ ಭಾರತಕ್ಕೆ ಬಂದ ಬಳಿಕ ಹಿಂದು ಮಹಾಸಭಾ ಸ್ಥಾಪಿಸಿ, ಅಖಿಲ ಹಿಂದುಸ್ಥಾನದ ಹೋರಾಟದಲ್ಲಿ ಪಾಲ್ಗೊಂಡಿದ್ದರು. 1940ರಲ್ಲಿ ಮಧುರೈಯಲ್ಲಿ ನಡೆದ ಹಿಂದು ಮಹಾಸಭಾದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಿ ದೀರ್ಘ ಭಾಷಣ ಮಾಡಿದ ಸಾವರ್ಕರ್, ಆಗ ನಡೆಯುತ್ತಿದ್ದ ವಿಶ್ವಯುದ್ಧದ ಬಗ್ಗೆಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ಸಾವರ್ಕರ್ ಮಾತುಗಳಲ್ಲೇ ಅದನ್ನು ಕೇಳಿ:

'ಎರಡನೇ ವಿಶ್ವಯುದ್ಧಕ್ಕೆ ಯಾವುದೇ ಘನ ಉದ್ದೇಶವಿಲ್ಲ, ಯಾವ ನೈತಿಕ ಕಾರಣವೂ ಇಲ್ಲ. ಯುದ್ಧನಿರತ ಇಂಗ್ಲೆಂಡ್, ಅಮೆರಿಕಾ, ರಷ್ಯಾ, ಜಪಾನ್, ಜರ್ಮನಿ, ಫ್ರಾನ್ಸ್, ಇಟಲಿ ಇತ್ಯಾದಿ ದೇಶಗಳಿಗೆ ಯಾವುದೇ ಉದಾತ್ತ ಉದ್ದೇಶವೂ ಇಲ್ಲ, ಎಲ್ಲರೂ ಸ್ವಾರ್ಥಿಗಳೇ. ಎಲ್ಲರೂ ಕಳ್ಳರೇ. ಕಳ್ಳನ ನಡೆಯನ್ನು ಕಳ್ಳನೇ ಬಲ್ಲ.... ಯುದ್ಧದ ಕುರಿತಂತೆ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವುಗಳು ಭಿನ್ನವಾಗಿವೆ. ಕಾಂಗ್ರೆಸ್ ಇಂಗ್ಲೆಂಡ್, ಅಮೆರಿಕಗಳ ಉದಾತ್ತ ನೀತಿಯನ್ನು ಸಮರ್ಥಿಸುತ್ತಿದೆ. ಕಾಂಗ್ರೆಸ್‌ನ ಸ್ವಯಂಘೋಷಿತ ನೇತಾರ ಸರ್ವಾಧಿಕಾರಿ ಗಾಂಧೀಜಿಯವರು ಅದರ ಪ್ರಬಲ ಸಮರ್ಥಕರಾಗಿದ್ದಾರೆ. ಗಾಂಧೀಜಿ ಪ್ರಕಾರ, 'ಯುದ್ಧದ ಸಂದರ್ಭದಲ್ಲಿ ಸ್ವಾತಂತ್ರ್ಯದ ಬೇಡಿಕೆ ಇಡುವುದು ಸರಿಯಲ್ಲ. ಈ ಸಂದರ್ಭದಲ್ಲಿ ಇಂಗ್ಲೆಂಡ್, ಫ್ರಾನ್ಸ್‌ಗಳ ರಕ್ಷಣೆಯೇ ಮುಖ್ಯ. ಪ್ರಜಾತಂತ್ರದ ರಕ್ಷಣೆಗಾಗಿ ನಾವು ಈಗ ಯಾವುದೇ ಷರತ್ತಿಲ್ಲದೆ ಆ ದೇಶಗಳ ಪರವಾಗಿ ನಿಲ್ಲಬೇಕು. ಅವರಿಗೆ ಸಹಾಯ ಮಾಡಬೇಕು. ಅದಕ್ಕಾಗಿ ಭಾರತೀಯರು ಸಿದ್ಧರಾಗಿರಬೇಕು' ನೆಹರೂ ಹೇಳುವಂತೆ, 'ಫ್ರಾನ್ಸ್, ಇಂಗ್ಲೆಂಡ್‌ಗಳಿಗೆ ಪ್ರಜಾತಂತ್ರದ ಉಳಿವಿಗಾಗಿ ಸಹಾಯ ಮಾಡಲು ನಾವು ತಯಾರಾಗಿರಬೇಕು. ಏಕೆಂದರೆ ಆ ದೇಶಗಳ ಮೇಲೆ ಸಾಮ್ರಾಜ್ಯವಾದಿ ಜರ್ಮನಿ ಆಕ್ರಮಣ ಮಾಡಿದೆ'

ಆದರೆ ಯುದ್ಧದ ಕುರಿತಂತೆ ಹಿಂದು ಮಹಾಸಭಾದ ನಿಲುವು ತೀರಾ ಭಿನ್ನವಾಗಿದೆ. ನಮ್ಮ ಪ್ರಕಾರ, ಯುದ್ಧನಿರತ ಯುರೋಪಿನ ದೇಶಗಳಿಗೆ ಯಾವುದೇ ಘನವಾದ ಉದ್ದೇಶವಿಲ್ಲ, ಪ್ರಜಾತಂತ್ರ ಸ್ಥಾಪನೆ ಅಥವಾ ತತ್ವ ಸಿದ್ಧಾಂತಗಳ ಪ್ರತಿಷ್ಠಾಪನೆ ಇತ್ಯಾದಿ ಯಾವ ಉದಾತ್ತ ಕಾರಣವೂ ಅದರಲ್ಲಿಲ್ಲ. ಯುದ್ಧ ನಡೆಯುತ್ತಿರುವುದು ಕೇವಲ ಸ್ವಾರ್ಥಕ್ಕಾಗಿ, ಪ್ರತಿಷ್ಠೆಗಾಗಿ. ಅಷ್ಟೆ. ತಮಾಷೆಯೆಂದರೆ ಇಂಗ್ಲೆಂಡ್‌ನ ಚರ್ಚಿಲ್ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ಗೆ ಹೇಳಿದ- ಪೋಲೆಂಡ್ ಅನ್ನು ಬಿಟ್ಟುಬಿಡು ಎಂದು. ಆಗ ಹಿಟ್ಲರ್ ಹೇಳಿದ್ದು - ಸರಿ, ನಾನು ಪೋಲೆಂಡ್ ಅನ್ನು ಬಿಡುವೆ. ಆದರೆ ನೀವು (ಇಂಗ್ಲೆಂಡ್) ಹಿಂದುಸ್ಥಾನವನ್ನು ಬಿಡುವಿರಾ? ಅದಕ್ಕೇ ಹೇಳುವುದು- ಕಳ್ಳನೇ ಕಳ್ಳನ ನಡೆಯನ್ನು ಬಲ್ಲ, ಏಕೆಂದರೆ ಎಲ್ಲರೂ ಕಳ್ಳರೇ ಆಗಿದ್ದಾರೆ!

ತಮ್ಮ ತಮ್ಮ ಸಾಮ್ರಾಜ್ಯಗಳ ರಕ್ಷಣೆ, ವಸಾಹತುಗಳು ವಿಸ್ತರಣೆ ಮತ್ತು ಅದರ ಸ್ಥಿರತೆಗಾಗಿ ಯುರೋಪಿನ ದೇಶಗಳು ಯುದ್ಧದಲ್ಲಿ ನಿರತವಾಗಿವೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ರಷ್ಯಾ, ಚೀನಾ ಇತ್ಯಾದಿ ಎಲ್ಲ ದೇಶಗಳೂ ಸಾಮ್ರಾಜ್ಯವಾದಿ ದೇಶಗಳೇ. ಆದರೆ ಆ ದೇಶಗಳು ಬಳಸುವುದು ಮಾತ್ರ ಪ್ರಜಾತಂತ್ರದ ರಕ್ಷಣೆ ಎಂಬ ಘೋಷಣೆ. ಇಂತಹ ಸಾಮ್ರಾಜ್ಯಶಾಹಿ ದೇಶಗಳ ಕಪಿಮುಷ್ಟಿಯಲ್ಲಿ ಸಿಲುಕಿದ ಏಷ್ಯಾ, ಆಫ್ರಿಕಾ, ಯುರೋಪಿನ ಹಲವಾರು ದೇಶಗಳು ದಾಸ್ಯದಲ್ಲಿ ನರಳಿ ನರಳಿ ಸಾಯುತ್ತಿವೆ....



ಎರಡನೇ ವಿಶ್ವಯುದ್ಧ ಹಿನ್ನೆಲೆಯಲ್ಲಿ ವಿಭಿನ್ನ, ವಿಚಿತ್ರ ವಾದ(ಇಸಂ) ಕೇಳಿಬರುತ್ತಿದೆ. ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ವಸಾಹತುಶಾಹಿ, ನಾಝಿಸಂ, ಫ್ಯಾಸಿಸಂ, ಸೋಶಿಯಲಿಸಂ ಇತ್ಯಾದಿ ಎಲ್ಲವೂ ಒಂದೇ ಚೀಲದೊಳಗಿರುವ ಬೇರೆ ಬೇರೆ ಪದಗಳು. ಇವರೆಲ್ಲರ ಉದ್ದೇಶ ಒಂದೇ- ತಮ್ಮ ತಮ್ಮ ಸಾಮ್ರಾಜ್ಯದ (ವಸಾಹತು) ಹಿತರಕ್ಷಣೆ ಹಾಗೂ ವಿಸ್ತರಣೆ. ಅದಕ್ಕಾಗಿ ಕತ್ತಿಯ ಬಲಪ್ರಯೋಗ ಮತ್ತು ಅದರ ಬಲದಿಂದ ಗೆಲ್ಲುವ ಪ್ರಯತ್ನ. ಜಿಸ್‌ಕೀ ಲಾಠೀ ಉಸ್‌ಕೀ ಭೈಂಸ್(ಲಾಠಿ ಉಳ್ಳವನದ್ದೇ ಕೋಣ). ಹಾಗಾಗಿ ಯುದ್ಧನಿರತ ದೇಶಗಳ ಮೂಲ ಉದ್ದೇಶವನ್ನೇ ಅರ್ಥ ಮಾಡಿಕೊಳ್ಳದೆ ಕೇವಲ ಆಕರ್ಷಕ ಘೋಷಣೆಗೆ ಮರುಳಾಗಿ ಬೆಂಬಲ, ಸಮರ್ಥನೆ ನೀಡುವುದು ಮೂರ್ಖತನವಷ್ಟೇ ಅಲ್ಲ, ಆತ್ಮಹತ್ಯಾಕಾರಕವೂ ಹೌದು.

ಹಿಟ್ಲರ್‌ನನ್ನು ರಾಕ್ಷಸ, ನಾಝೀವಾದಿ, ಸರ್ವಾಧಿಕಾರಿ, ಕ್ರೂರಿ ಹಾಗೂ ಚರ್ಚಿಲ್‌ನನ್ನು ಪ್ರಜಾತಂತ್ರವಾದಿ, ದೇವದೂತ ಎಂಬಂತೆ ಬಣ್ಣಿಸುವುದು ಎರಡೂ ಮೂರ್ಖತನವೇ. ಇಬ್ಬರೂ ಒಂದೇ. ಜರ್ಮನಿಗೆ ನಾಝಿಸಂ, ರಷ್ಯಾಕ್ಕೆ ಬೋಲ್ಶೇಯಿಸಂ, ಇಟಲಿಗೆ ಫ್ಯಾಸಿಸಂ ಲಾಭದಾಯಕವೇ. ಪ್ರಜಾತಂತ್ರ ಸ್ಥಾಪನೆಗಾಗಿ ಇಂಗ್ಲೆಂಡ್ ತೆತ್ತ ಬೆಲೆ ಎಷ್ಟು ಎಂಬುದು ನಮಗೆ ತಿಳಿದೇ ಇದೆ.

ರಾಜನೀತಿಯಲ್ಲಿ ವಾಸ್ತವಿಕ ಕಾರ್ಯನೀತಿ, ಪದ್ಧತಿ ಹೇಗಿರಬೇಕು, ಅದು ಹೇಗೆ ವ್ಯಾವಹಾರಿಕವಾಗಿರಬೇಕು ಎಂಬುದು ಚಿಂತನಾರ್ಹ ಸಂಗತಿ. ರಾಜನೀತಿ ಶಾಸ್ತ್ರ ಮತ್ತು ವಿಶ್ವದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸಿದ್ಧಾಂತವಿದೆ. ಹಾಗೆಯೇ ಜಗತ್ತಿನ ಎಲ್ಲ ಜನರಿಗೆ ಎಲ್ಲ ಕಾಲಕ್ಕೂ ಉಪಯುಕ್ತವಾದ ಘಟನಾವಳಿ ಇಲ್ಲವೇ ಸಮಾಜ ರಚನಾ ಪದ್ಧತಿ (ಸಾಮಾಜಿಕ ವ್ಯವಸ್ಥೆ)ಗಳು ಶಾಶ್ವತವಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಪ್ರಜಾತಾಂತ್ರಿಕ ಮೌಲ್ಯಗಳು, ವೈಯಕ್ತಿಕ ಸ್ವಾತಂತ್ರ್ಯ ಇತ್ಯಾದಿ ವಿಷಯಗಳಲ್ಲಿ ಆಂಗ್ಲರಿಗಿರುವ ನಂಬಿಕೆ, ಬದ್ಧತೆಗಳನ್ನು ಸರಿಗಟ್ಟುವವರು ಜಗತ್ತಿನಲ್ಲಿ ಯಾರೂ ಇಲ್ಲ, ನಿಜ. ಆದರೆ ಯುದ್ಧ ಪ್ರಾರಂಭವಾಗುತ್ತಿದ್ದಂತೆಯೇ ಅವರು ತಮ್ಮ ಸಂವಿಧಾನ, ಪ್ರಜಾತಾಂತ್ರಿಕ ಮೌಲ್ಯ ಆದಿಗಳನ್ನು ಬದಿಗಿಟ್ಟು ಯುದ್ಧತಂತ್ರವನ್ನಷ್ಟೇ ಅನುಸರಿಸುವುದು ಯಾಕೆ? ಜರ್ಮನಿಯಲ್ಲಾದರೋ ಹಿಟ್ಲರನ ಮಾತೇ ಕಾನೂನು. ಇಂಗ್ಲೆಂಡ್‌ನ ಚರ್ಚಿಲ್‌ನದ್ದೂ ಅದೇ ರೀತಿ. ಜರ್ಮನಿ ಸಾಮ್ರಾಜ್ಯವಾದಿ ದೇಶ. ಹಿಟ್ಲರ್‌ನದು ನಾಝೀವಾದ. ಅವರದ್ದು ಆಕ್ರಮಕ ನೀತಿ. ಆದ್ದರಿಂದ ಜರ್ಮನ್ ವಿರುದ್ಧ ಭಾರತೀಯರು ಹೋರಾಡಲೇಬೇಕು, ಅದು ಭಾರತೀಯರ ಕರ್ತವ್ಯವೆಂದೋ ಅಥವಾ ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್‌ಗಳು ಪ್ರಜಾತಂತ್ರದ ಸಮರ್ಥಕರು, ಹಾಗಾಗಿ ಅವರನ್ನು ಬೆಂಬಲಿಸಬೇಕೆಂದೋ ಹೇಳುವುದು ಸರಿಯಲ್ಲ, ಏಕೆಂದರೆ ಹಾಗೆ ಹೇಳುವುದರಲ್ಲಿ ಯಾವುದೇ ಸತ್ಯವಿಲ್ಲ.

ಹಾಗಾಗಿ ಯುದ್ಧದ ಈ ಸಂದರ್ಭದಲ್ಲಿ ಯಾವ ದೇಶ ಹಿಂದುಸ್ಥಾನದ ಹಿತ ರಕ್ಷಿಸಬಲ್ಲುದೋ ಅದೇ ನಮ್ಮ ಮಿತ್ರದೇಶ. ಅದೇ ನಮ್ಮ ವಾಸ್ತವಿಕ, ವ್ಯಾವಹಾರಿಕ ಮತ್ತು ರಾಜನೈತಿಕ ಕಾರ್ಯನೀತಿಯಾಗಬೇಕು. ಅವರು (ಆ ದೇಶಗಳು) ಯಾವ ವಾದ(ಇಸಂ)ಕ್ಕೆ ಸೇರಿದ್ದರೂ ಸರಿಯೇ, ನಮ್ಮ ಹಿತರಕ್ಷಕ ದೇಶವೇ ನಮ್ಮ ಮಿತ್ರ.

ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತಿತರ ದೇಶಗಳು ಪರಸ್ಪರ ಯುದ್ಧ ಮಾಡಿರುವ ನಿದರ್ಶನಗಳಿವೆ. ಉದಾಹರಣೆಗೆ-ಇಂಗ್ಲೆಂಡ್ ವಿರುದ್ಧ ಅಮೆರಿಕಾ, ಇಂಗ್ಲೆಂಡ್ ವಿರುದ್ಧ ಫ್ರಾನ್ಸ್, ಜರ್ಮನಿ ವಿರುದ್ಧ ಫ್ರಾನ್ಸ್ ಇತ್ಯಾದಿ. ಅಮೆರಿಕನ್ನರು ತಮ್ಮ ಸ್ವಾತಂತ್ರ್ಯಕ್ಕಾಗಿ ಬ್ರಿಟನ್ ವಿರುದ್ಧವೇ ಹೋರಾಡಿದ್ದಾರೆ. ಈ ಎಲ್ಲ ಯುದ್ಧಗಳಿಗೆ ಮೂಲ ಕಾರಣ- ಸಾಮ್ರಾಜ್ಯ ವಿಸ್ತರಣೆ. ಇನ್ನು ನಾಝಿಗಳು ಮತ್ತು ಬೋಲ್ಶೆವಿಕರು ಕಟ್ಟರ್ ಶತ್ರುಗಳು. ಆದರೆ ಪೋಲೆಂಡ್ ಪ್ರಶ್ನೆ ಬಂದಾಗ ಇಬ್ಬರೂ ಒಂದಾದರು. ಒಂದು ಕಾಲಘಟ್ಟದಲ್ಲಿ ಪರಸ್ಪರ ಕತ್ತಿ ಹಿಡಿದು ಯುದ್ಧ ಮಾಡಿದ್ದವರು. ಇಂದು ಅನಿವಾರ್ಯವಾಗಿ ಮಿತ್ರರಾಗಿದ್ದಾರೆ. ಕಾಲಕ್ಕೆ ತಕ್ಕಂತೆ ಕೋಲ ಕಟ್ಟುವವರಂತೆ, ಅಷ್ಟೇ. ಇದು ಸಮಯಸಾಧಕ ನೀತಿ. ಅನುಕೂಲಸಿಂಧು ಶಾಸ್ತ್ರ. ಒಂದು ಕಾಲದ ಮಿತ್ರರು ಇದೀಗ ಶತ್ರುಗಳಾಗಿದ್ದಾರೆ. ಶತ್ರು ಪಕ್ಷದಲ್ಲಿದ್ದವರು ಮಿತ್ರರಾಗಿದ್ದಾರೆ. ಇದಕ್ಕೆ ಯಾವ ನೈತಿಕ ಆಧಾರವೂ ಇಲ್ಲ.

ಶತ್ರು ಇನ್ನೊಂದು ದೇಶದೊಂದಿಗೆ ಯುದ್ಧ ನಿರತನಾಗಿರುವಾಗ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸಶಸ್ತ್ರ ಕ್ರಾಂತಿ ಮಾಡುವುದು ಗುಲಾಮೀ ದೇಶದ ಜನರ ಪ್ರಮುಖ ದಾರಿಯಾಗಿದೆ ಎಂದು ಸಾಕ್ರಟೀಸ್ ಹೇಳಿದ್ದಾನೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ನಮ್ಮನ್ನು ನಿಃಶಸ್ತ್ರರನ್ನಾಗಿ ಮಾಡಲಾಗಿದೆ.... ಅಹಿಂಸಾವಾದ ಮಾರ್ಗ ನೈತಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದಲೂ ತ್ಯಾಜ್ಯವೇ ಸರಿ. ಯುದ್ಧನೀತಿ ಶಾಸ್ತ್ರದಲ್ಲಿ ವ್ಯಾವಹಾರಿಕ ದೃಷ್ಟಿಕೋನಕ್ಕೇ ಮಹತ್ವ. ವ್ಯಾವಹಾರಿಕ ದೃಷ್ಟಿಕೋನವೇ ನೀತಿಶಾಸ್ತ್ರದ ಆಧಾರ. ಮಾನದಂಡ. ನೀತಿ-ಅನೀತಿ, ನ್ಯಾಯ-ಅನ್ಯಾಯ. ಒಳಿತು- ಕೆಡುಕು, ಸದ್ಗುಣ-ದುರ್ಗುಣ ಇತ್ಯಾದಿಗಳಿಗೆ ವ್ಯವಹಾರವೇ ಆಧಾರ. ಅದನ್ನು ವ್ಯಾವಹಾರಿಕ ಮಾನದಂಡದಿಂದ ನಿರ್ಧರಿಸಬೇಕು ಎನ್ನುತ್ತಾರೆ ನೀತಿಶಾಸ್ತ್ರಜ್ಞರು. ಮಾನವ ಬದುಕಿಗೆ ಉಪಯುಕ್ತವಾದ ಆಚಾರ-ವಿಚಾರಗಳೆಲ್ಲ ನೀತಿಸಮ್ಮತವಾದವುಗಳೇ. ಅಹಿಂಸಾವಾದ ವ್ಯವಹಾರ ಯೋಗ್ಯವಲ್ಲ...''

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ಥಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬುದು ಸಾವರ್ಕರ್ ದೃಷ್ಟಿಕೋನವಾಗಿತ್ತು. ವರ್ತಮಾನದ ಅಮೆರಿಕಾ-ಇರಾನ್ ಯುದ್ಧದಲ್ಲೂ ಅಷ್ಟೆ. ಆ ದೇಶಗಳು ಎಷ್ಟಾದರೂ ಬಡಿದಾಡಿಕೊಳ್ಳಲಿ. ಆದರೆ ಅದರಿಂದ ಭಾರತಕ್ಕೆ, ಇಲ್ಲಿನ ಜನಜೀವನಕ್ಕೆ ತೊಂದರೆ ಆಗುತ್ತದೆ ಎಂದಾದರೆ ಭಾರತ ಸರಕಾರವು ಅಮೆರಿಕ, ಇಸ್ರೇಲ್ ಮತ್ತು ಇರಾನ್ - ಈ ಎಲ್ಲ ದೇಶಗಳ ಮೇಲೆ ಒತ್ತಡ ಹೇರಿ ಯುದ್ಧ ಸ್ಥಗಿತಕ್ಕೆ ಆದ್ಯತೆ ನೀಡಬೇಕಾಗಿದೆ. ಅಂತಿಮವಾಗಿ ನಮಗೆ ನಮ್ಮ ದೇಶದ ಹಿತವೇ ಮುಖ್ಯವಾಗಬೇಕಾಗಿದೆ.

(ಆಧಾರ: Hindu Rashtra Darshan by Veer Sarvarkar, ಪ್ರಕಾಶಕರು: ಪ್ರಭಾತ್ ಪ್ರಕಾಶನ, ನವದೆಹಲಿ)


# ಹರೆಯದವರ ಒತ್ತಡಗಳು

ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗಬೇಕು.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ರಾಮು ಈಗ ಎರಡನೇ ಪಿಯುಸಿಯಲ್ಲಿ ಓದುತ್ತಿದ್ದಾನೆ. ಒಂಭತ್ತನೇ ತರಗತಿಯಲ್ಲಿ ಒಳ್ಳೆಯ ಅಂಕ ಗಳಿಸಿದ್ದ ರಾಮುವಿಗೆ ಹತ್ತನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಇದರಿಂದ ಅವನು ಮನೆಯವರಿಂದ ಹಲವಾರು ಟೀಕೆ ಟಿಪ್ಪಣಿಗಳನ್ನು ಎದುರಿಸಬೇಕಾಗಿ ಬಂತು. ನೀನು ಸರಿಯಾಗಿ ಓದಲಿಲ್ಲ, ಆಟ ಆಟ ಅಂತ ಟೈಮು ಕಳೆದೆ. ಅದಕ್ಕಾಗಿ ನಿನಗೆ ಕಡಿಮೆ ಅಂಕಗಳು ಬಂದವು ಎಂದು ಅಪ್ಪ ಹೇಳಿದರೆ, ಅಮ್ಮ ನೋಡು ನಿನ್ನ ಅಕ್ಕ ಚೆನ್ನಾಗಿ ಓದಿ ಹತ್ತನೇ ತರಗತಿಯಲ್ಲಿ ತೊಂಭತ್ತು ಪರ್ಸೆಂಟ್ ತಗೊಂಡಿದ್ಲು, ಈಗ ನೋಡು, ನಿನಗೆ ನಾವು ಏನು ಮಾಡ್ಬೇಕೂ ಅಂತಾ ಗೊತ್ತಾಗ್ತಿಲ್ಲ. ಅದೂ ಅಲ್ದೇ ನೋಡೋರ ಮುಂದೆ ತಲೆ ತಗ್ಗಿಸಬೇಕು ಎಂಬ ಟೀಕೆ. ಅವೆಲ್ಲವನ್ನೂ ಸಹಿಸಿಕೊಂಡ ರಾಮುವಿಗೆ ಮೊದಲನೇ ಪಿಯುಸಿಯಲ್ಲಿ ಒಳ್ಳೆಯ ಅಂಕಗಳು ಬಂದರೂ, ಅಕ್ಕನಿಗಿಂತ ಕಡಿಮೆಯಾಗಿತ್ತು. ಹೇಗಾದರೂ ಮಾಡಿ ಎರಡನೇ ಪಿಯುಸಿಯಲ್ಲಿ ಒಳ್ಳೆಯ ಅಂಕ ಪಡೆದು ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕೆಂಬ ಹಂಬಲ ರಾಮುವಿಗೆ. ಅದಕ್ಕಾಗಿ ಆಟವಾಡುವುದನ್ನು ಬಿಟ್ಟ, ಕಾಲೇಜಿನ ಯಾವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ನೇಹಿತರೊಂದಿಗೆ ಬೆರೆಯುತ್ತಿರಲಿಲ್ಲ. ದಿನದ ಇಪ್ಪತ್ನಾಲ್ಕು ಗಂಟೇನೂ ಓದು ಓದು ಓದು. ಆದರೂ ಕೊನೆಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬರಲಿಲ್ಲ.



ಹರೆಯದವರಲ್ಲಿ ಒತ್ತಡ ತರುವ ಮುಖ್ಯವಾದ ಅಂಶವೆಂದರೆ ಪಾಠ ಮತ್ತು ಪರೀಕ್ಷೆ. ಪೋಷಕರು, ಉಪಾಧ್ಯಾಯರು, ಸ್ನೇಹಿತರು ಅಥವಾ ಸಂಬಂಧಿಕರೇ ಆಗಲಿ ಎಲ್ಲರ ಗಮನವೂ ತಮ್ಮ ಮಗ/ಮಗಳು ಎಷ್ಟು ಅಂಕ ಗಳಿಸುತ್ತಾರೆಂಬುದು. ಇದಕ್ಕೆ ಅವರು ಮಾಡುವ ಟೀಕೆ ಟಿಪ್ಪಣಿಗಳು. ಕೆಲವು ವಿದ್ಯಾರ್ಥಿಗಳು ಒತ್ತಡವನ್ನು ತಡೆಯಲಾರದೇ ಖಿನ್ನತೆಗೆ ಒಳಗಾಗುತ್ತಾರೆ. ಕೆಲವರು ರಾಮುವಿನ ಹಾಗೆ, ಪಠ್ಯೇತರ ಚಟುವಟಿಕೆಗಳನ್ನು ಬಿಟ್ಟು, ಬೇರೆ ಪ್ರಪಂಚವೇ ಇಲ್ಲವೆಂಬಂತೆ ಓದುವುದರಲ್ಲಿ ಮಗ್ನರಾಗುತ್ತಾರೆ. ಇದರಿಂದ ಅವರ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಲಿಕೆಯಲ್ಲಿ ಉತ್ತಮವಾಗಲು ಸಾಧ್ಯವಿಲ್ಲ. ಇಂಗ್ಲೀಷಿನ "All study no play makes jack a dull boy" ಅಂದರೆ, ಜಾಣನೂ ಓದಿನಲ್ಲಿ ಮಗ್ನನಾಗಿ ಮರುಳಾದ ಕೂಚು ವಿದ್ಯಾರ್ಥಿಯಾಗುತ್ತಾನೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು.

ಸಾಮಾಜಿಕವಾಗಿ ಹರೆಯದವರು ಎದುರಿಸಬೇಕಾದ ಒತ್ತಡಗಳು ಹಲವು. ಮುಖ್ಯವಾಗಿ, ಹಿರಿಯರು ಮತ್ತು ಇತರರು ಹೇಳುವ, ನೀನು ಕುಡುಮಿ, ಬುದ್ದು, ಎಂಬ ಟೀಕೆ ಟಿಪ್ಪಣಿಗಳು. ಉದಾಹರಣೆಗೆ ನೀನು ಕುಳ್ಳ ಕಣೋ, ನೋಡು ಅವನು ಎಷ್ಟು ಎತ್ತರವಾಗಿದ್ದಾನೆ. ನೀನೇನೋ ಇನ್ನೂ ಹೆಣ್ಣು ಆಗಿದೀಯ, ಜೋರು ಇರಬೇಕು ಕಣೋ, ಯಾಕೋ ಒಂಥರಾ ಇದೀಯಾ, ನಮ್ಮ ಜೊತೆಗೆ ಸೇರೋಲ್ಲ ಎಂಬ ಸ್ನೇಹಿತರ ಹೋಲಿಕೆಯ ಮಾತುಗಳು. ನಿನಗೆ ಲವ್ ಮಾಡೋದಕ್ಕೆ ಬರೋಲ್ಲ ಕಣೋ. ನೋಡು ಅವನು ಎಷ್ಟು ಧೈರ್ಯದಿಂದ ಮಾತಾಡ್ತಾನೆ. ಯಾರನ್ನಾದ್ರೂ ಲವ್ ಮಾಡ್ಬೇಕು ಕಣೋ ಅದು ಖುಷಿ ಕೊಡುತ್ತೆ ಎಂಬ ಸ್ನೇಹಿತರ ಉಚಿತ ಸಲಹೆಗಳು ಕೂಡ ಹರೆಯದವರ ಮನಸ್ಸಿನಲ್ಲಿ ತಡೆಯಲಾರದ ಒತ್ತಡವನ್ನುಂಟು ಮಾಡುತ್ತದೆ.

ಕಲುಷಿತ ಕೌಟುಂಬಿಕ ವಾತಾವರಣವೂ ಹರೆಯದವರ ಮನಸ್ಸನ್ನು ಇನ್ನಿಲ್ಲದ ಒತ್ತಡಕ್ಕೀಡು ಮಾಡುತ್ತದೆ. ಪೋಷಕ ದಂಪತಿಗಳ ಮಧ್ಯೆ ಜಗಳ, ವಿವಾಹ ವಿಚ್ಛೇಧನ, ಪೋಷಕರ ಅತಿಯಾದ ನಿರೀಕ್ಷೆ, ನಕಾರಾತ್ಮಕ ಸ್ವಭಾವದ ಪೋಷಕರು, ಆರ್ಥಿಕ ಮುಗ್ಗಟ್ಟು ಮತ್ತು ಸದಾ ಮಕ್ಕಳ ಕುರಿತು ಕೀಳು ನುಡಿಗಳನ್ನಾಡುವ ಕೆಲವು ಪೋಷಕರ ಹೀಗೆ ಇರಬೇಕು, ನಾವು ಹೇಳಿದ ಹಾಗೇ ಕೇಳಬೇಕು ಎಂಬ ಪೋಷಕರ ಕಠಿಣ ನಿರ್ದೇಶನಗಳು ಸಹ ಕುಟುಂಬದ ವಾತಾವರಣವನ್ನು ಕಲುಷಿತ ಗೊಳಿಸುತ್ತದೆ. ಇದು ಹರೆಯದವರ ಒತ್ತಡಕ್ಕೆ ಕಾರಣ.

ಹರೆಯದವರನ್ನು ಒತ್ತಡಕ್ಕೀಡು ಮಾಡುವ ಮತ್ತೊಂದು ಅಂಶ 'ತನ್ನತನ'ವನ್ನು ಕಂಡುಕೊಳ್ಳುವ ತವಕ, ತಾನು ಹೇಗೆ ಬೇರೆಯಾಗಿ ಕಾಣಬೇಕು, ತನ್ನನ್ನು ಯಾರು ಗುರುತಿಸುತ್ತಾರೆ, ಯಾರ ಹಾಗೆ ಕಂಡರೆ ಚೆನ್ನ ಮತ್ತು ಯಾರಂತಾಗಬೇಕು ಎಂಬ ಹಲವಾರು ಪ್ರಶ್ನೆಗಳು. ತಾನು ಯಾರಂತೆ ಆಗಬೇಕು? ಯಾವ ಉಡುಪು ಧರಿಸಿದರೆ, ಎಲ್ಲರಿಗಿಂತ ಸುಂದರವಾಗಿ ಕಾಣುತ್ತೇನೆ? ಯಾವ ಉದ್ಯೋಗ ಆರಿಸಿಕೊಂಡರೆ ಒಳ್ಳೆಯದು? ಎಂಬ ಹಲವಾರು ಯೋಚನೆಗಳಿಂದ 'ತನ್ನತನ'ವನ್ನು ಕಂಡುಕೊಳ್ಳುವುದು ಹರೆಯದವರಿಗೆ ಒತ್ತಡವನ್ನುಂಟು ಮಾಡುತ್ತದೆ.

ಮನೋವಿಕಾಸದಿಂದ, ತನ್ನ ಮುಂದಿನ ನಡೆ ಏನು? ಓದು ಮುಗಿಸಿದ ನಂತರ ಮುಂದೇನು? ತಾನು ಯಾವ ಹುದ್ದೆ ಆರಿಸಿಕೊಳ್ಳಬೇಕು, ಅದರಲ್ಲಿ ಸಾಧನೆ ಮಾಡುವುದು ಸಾಧ್ಯವೇ? ತನ್ನ ಸ್ನೇಹಿತರು ಯಾವ ವೃತ್ತಿಯನ್ನು ಆರಿಸಿಕೊಳ್ಳುತ್ತಾರೆ. ಮುಂದಿರುವ ಆಗು ಹೋಗುಗಳನ್ನು ನಿಭಾಯಿಸುವುದು ಹೇಗೆ? ಅದು ತನ್ನಿಂದ ಸಾಧ್ಯವೇ ಎಂಬ ಹಲವು ಪ್ರಶ್ನೆಗಳು ಹರೆಯದವರನ್ನು ಒತ್ತಡಕ್ಕೀಡು ಮಾಡುತ್ತವೆ.

ಸಾಮಾಜಿಕ ಜಾಲತಾಣಗಳಾದ, ಫೇಸ್‌ಬುಕ್, ವಾಟ್ಸ್‌ಆಪ್, ಯೂಟ್ಯೂಬ್, ಟ್ವಿಟರ್, ಟಿ.ವಿ. ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಆಕರ್ಷಕ ಜಾಹೀರಾತುಗಳು, ಕೆಲವು ಅಸಹಜವಾದ ದೃಶ್ಯಗಳನ್ನು ಅತ್ಯಾಕರ್ಷಕವಾಗಿ ತೋರಿಸುತ್ತಾರೆ. ಅಪಕ್ವವಾದ ಹರೆಯದ ಮನಸ್ಸಿಗೆ ಇವುಗಳಲ್ಲಿ ಯಾವುದು ಸಹಜ? ಯಾವುದು ಅಸಹಜ? ಅದರಿಂದ ತನ್ನ ಭವಿಷ್ಯಕ್ಕೆ ಏನು ಉಪಯೋಗವಾಗುತ್ತದೆ ಎಂಬ ಗೊಂದಲ ಉಂಟಾಗುತ್ತದೆ. ಅದರಂತೆ ಸನ್ಮಾರ್ಗ ತೆಗೆದುಕೊಳ್ಳಬೇಕು. ಇವೂ ಸಹ ಹರೆಯದ ಮನಸ್ಸನ್ನು ಒತ್ತಡಕ್ಕೀಡುಮಾಡುತ್ತವೆ.

**ಪರಿಣಾಮಗಳು:** ಮೇಲಿನ ಒತ್ತಡಗಳ ಪರಿಣಾಮ ಹರೆಯದ ಮನಸ್ಸು ಸದಾ ಗೊಂದಲದಿಂದ ಕೂಡಿರುತ್ತದೆ. ಇದರಿಂದ ಯೋಚನೆಗಳು ಹೊಳೆಯುವುದಿಲ್ಲ, ತನ್ನ ಭವಿಷ್ಯವೇ ಕತ್ತಲಾದಂತೆನಿಸುತ್ತದೆ. ಓದಲು ಆಸಕ್ತಿ ಕಡಿಮೆಯಾಗುತ್ತದೆ. ಆತ್ಮವಿಶ್ವಾಸದ ಕೊರತೆ ಉಂಟಾಗುತ್ತದೆ. ತನ್ನನ್ನು ಕುರಿತು ನಕಾರಾತ್ಮಕ ಭಾವನೆಗಳು ಆಳವಾಗಿ ಬೇರೂರುತ್ತವೆ. ಕೆಲವೊಮ್ಮೆ ನಾನೇಕೆ ಈ ಪ್ರಪಂಚಕ್ಕೆ ಬಂದೆ ಎಂಬ ಯೋಚನೆಯಿಂದ ಪಾಪ ಪ್ರಜ್ಞೆ ಉಂಟಾಗುತ್ತದೆ. ಓದುವುದರಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಓದಿದ್ದೆಲ್ಲವೂ ಮರೆತಂತೆನಿಸುತ್ತದೆ. ಸದಾ ಒಂದು ವಿಧದ ಭಯ, ಆತಂಕ ಮನಸ್ಸನ್ನು ಕಾಡುತ್ತವೆ. ಒಂಟಿತನವೇ ಮೇಲು ಎಂಬ ಭಾವನೆ ಉಂಟಾಗಿ ಯಾರೊಂದಿಗೂ ಬೆರೆಯುವುದಿಲ್ಲ, ಸದಾ ಯಾವುದೋ ಲೋಕದಲ್ಲಿ ಮಗ್ನನಾಗಿರುವಂತೆ ವರ್ತಿಸುತ್ತಾನೆ. ಕೆಲವೊಮ್ಮೆ ಖಿನ್ನತೆ ಉಂಟಾಗುತ್ತದೆ. ತೀವ್ರವಾದ ಖಿನ್ನತೆಯು ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅದಿಲ್ಲದಿದ್ದಲ್ಲಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೊಳಗಾಗಿ ಹರೆಯದವರು ದಾರಿ ತಪ್ಪಿದ ಮಕ್ಕಳಾಗುತ್ತಾರೆ. ಕೆಲವರು ಸಮಾಜಬಾಹಿರ ಕಾರ್ಯಗಳಲ್ಲಿ ಭಾಗಿಯಾಗಬಹುದು.

ಮೇಲಿನ ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗುತ್ತಾ ಸಾಧನೆಗೈಯುವುದು ಮುಖ್ಯ. ಇದಕ್ಕೆ ಅವಶ್ಯವಿರುವುದು ಸಹನೆ, ಆತ್ಮವಿಶ್ವಾಸ ಮತ್ತು ಹಿತವಾದ ಕೌಟುಂಬಿಕ ವಾತಾವರಣ. ಅದರೊಂದಿಗೆ ಪೋಷಕರ ಸಕಾರಾತ್ಮಕ ಮಾರ್ಗದರ್ಶನ. ಆತ್ಮೀಯ ಸ್ನೇಹಿತರು, ಉಪಾಧ್ಯಾಯರು ಮತ್ತು ಸಮಾಜಚಿಂತಕರೊಂದಿಗೆ ತಮ್ಮ ಒತ್ತಡಗಳನ್ನು ಹಂಚಿಕೊಂಡು ಪರಿಹಾರವನ್ನು ಕಂಡುಕೊಂಡಾಗ ಹರೆಯದವರ ಬಾಳು ಹಸನಾಗುತ್ತದೆ.

# ಕೆಮ್ಮು ಒಂದು; ಅರ್ಥ ಹಲವು

ಕೆಮ್ಮುವುದರ ಪರಿ ಅಪಾರ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಕೆಮ್ಮಿದರೆ ಆ ಪರಿ ಕಸಿವಿಸಿಗೊಳ್ಳುವ, ಗುಮಾನಿಯ ಕಣ್ಣುಗಳಲ್ಲಿ ಕಾಣುವ ಕಾಲವೊಂದು ಬಂದೀತು ಎಂದು ಖುದ್ದು 'ಕೆಮ್ಮು'ವೂ ಕೂಡಾ ಎಂದೂ ಭಾವಿಸಿರಲಿಕ್ಕಿಲ್ಲ. ಆದರೂ 'ಕೆಮ್ಮು=ಡೇಂಜರ್!' ಏನೋ ಎಂಬಂತೆ ಮಾಡಿದ ಕುಖ್ಯಾತಿ ಕೊರೊನಾಕ್ಕೆ ಸಲ್ಲುತ್ತದೆ. ಹಾಗೆ ನೋಡಿದರೆ ಮನುಷ್ಯರು ವಿವಿಧ ಸಂದರ್ಭಗಳಲ್ಲಿ, ಬೇರೆ ಬೇರೆ ಅರ್ಥ-ದನಿ-ಭಾವಗಳಲ್ಲಿ 'ಯಾರೂ ಕೆಮ್ಮಂಗಿಲ್ಲ' ಎಂದು ಹೇಳಿಕೊಂಡೇ ಬರುತ್ತಿದ್ದರು. ಆದರೆ ಕೊರೊನಾ ಕಾಲಘಟ್ಟದಲ್ಲಿ ಮಾತ್ರ ಆ ಸೂಚನೆಯ ತೀವ್ರತೆ ಬೇರೆಯದೇ ಮಟ್ಟವನ್ನು ತಲುಪಿತ್ತು. 'ರೂಪ ಒಂದೇ, ಭಾವ ಹಲವು' ಎಂಬ ಮಾತಿನಂತೆ ಕೆಮ್ಮು ಒಂದೇ ಆದರೂ ಅದರ ಹಿಂದಿನ ಭಾವ-ಅರ್ಥ ಹತ್ತು ಹಲವು. ಬನ್ನಿ, ಅಂಥ ಹತ್ತು ಬಗೆಯ ಕೆಮ್ಮುಗಳನ್ನು ಅರ್ಥೈಸಿಕೊಳ್ಳೋಣ...

1. **'ನೆಗಡಿ'ಯಾರ ಕೆಮ್ಮು :** ಇಲ್ಲಿ 'ನೆಗಡಿ'ಯಾರ ಎಂಬ ಪದ ಬಳಸಿದ್ದು, ಒಂದು ನೆಗಡಿ ಯಾರನ್ನು ಬಿಟ್ಟಿದೆ ಎಂಬರ್ಥದಲ್ಲಾದರೆ, ಇನ್ನೊಂದು ಅನಾರೋಗ್ಯ ಕಾಲಿಡುವ, ಕಾಡುವ ಸಮಯ ಇದಾಗಿದೆ ಎಂಬ ಸೂಚನೆಯನ್ನು ಅದು ಹೊತ್ತು ತರುತ್ತದೆ ಎಂಬರ್ಥದಲ್ಲಿ, ಶೀತ-ನೆಗಡಿಯ ಬಲು ಹತ್ತಿರದ ನೆಂಟ ಈ ಕೆಮ್ಮು. ನೆಗಡಿಯೇ ತನ್ನ ಅಸ್ತಿತ್ವವನ್ನು, ಕೂಗಿ ಕೂಗಿ ಹೇಳುತ್ತಿದೆಯೋ ಎಂಬಂತೆ ನೆಗಡಿಬಾಧಿತರು ಕೆಮ್ಮುತ್ತಲೇ ಇರುತ್ತಾರೆ. ಈ ನೆಗಡಿ ಕೆಮ್ಮು, ಕಾಲಕ್ರಮೇಣ ಒಣ ಕೆಮ್ಮುವಾಗಿ ಮಾರ್ಪಟ್ಟರಂತೂ ಅದರ ಕಷ್ಟ ಹೇಳತೀರದು. ಆಗ, ರಾತ್ರಿ ಹಗಲೆನ್ನದೇ ನೆಗೆ ನೆಗೆದು ಕೆಮ್ಮಿದರೂ ಸಮಾಧಾನವಾಗುವುದಿಲ್ಲ. ನೆಗಡಿಗೆ ಇಂಗ್ಲೀಷ್‌ಲಿ 'ರನ್ನಿಂಗ್ ನೋಸ್, ರನ್ನೀ ನೋಸ್' ಅಂತೆಲ್ಲ ಹೇಳುತ್ತಾರೆ. ಇದರ ಜೊತೆಗೆ ಕೆಮ್ಮುವೂ ಜೊತೆಯಾದರೆ, ನೋಸ್ ಅಲ್ಲಾ ನಾವೇ ಓಡಬೇಕಷ್ಟೇ!

2. **ಸಿಕ್ ಲೀವ್ ಕೆಮ್ಮು:** ದಾಸರು, 'ಮಾಡು ಸಿಕ್ಕದಲ್ಲ..' ಎಂದು ಹಾಡಿದರು. ಆದರೆ ಈಗಿನ ನರಮಾನವರಾದ ನಾವೆಲ್ಲರೂ ಸಿಕ್ಕದಲ್ಲ ಎಂದು ಹಲುಬುವ ಹಲವಾರು ವಿಷಯಗಳಲ್ಲಿ 'ರಜೆ'ಯೂ ಕೂಡಾ ಒಂದು. ಅದು ಸುಲಭಕ್ಕೆ ಸಿಕ್ಕುವಂತೆ ಮಾಡುವಲ್ಲಿ 'ಸಿಕ್ ಲೀವ್' ಒಂದು ಮಟ್ಟಿಗೆ ನೆರವಿಗೆ ಬರುವುದು ನಿಜವಷ್ಟೇ! ಇಂತಿಪ್ಪ ಸಿಕ್ ಲೀವ್ ಪಡೆದುಕೊಳ್ಳುವ ಪ್ರಕ್ರಿಯೆ ಸಿಕ್ಕು ಸಿಕ್ಕಾಗಿ ಪರಿಣಮಿಸದೇ ಸರಾಗವಾಗಿ ನೆರವೇರುವಲ್ಲಿ ಕೆಮ್ಮು ನೆರವಿಗೆ ಬರುತ್ತದೆ. ರಜೆ ಕೇಳುವಾಗ, ರಜೆ ಮುಗಿಸಿ ಬಂದ ಮೇಲೆ, ಮಧ್ಯೆ ಯಾರಾದರೂ ಕಾಲ್ ಮಾಡಿದಾಗ ಮಾತಿನ ನಡು ನಡುವೆ ಕಾಣಿಸಿಕೊಳ್ಳುವ ಈ ಕೆಮ್ಮು 'ಸಿಕ್‌ಲೀವ್'ನ ಅಥೆಂಟಿಸಿಟಿಯನ್ನು ಸಾಬೀತುಪಡಿಸುತ್ತದೆ.

3. **ಗಮನ ಸೆಳೆಯೋ ಕೆಮ್ಮು:** ಮಾತಾಡುವುದಷ್ಟೇ ಮುಖ್ಯವಲ್ಲ, ಅವುಗಳನ್ನು ನಾಲ್ಕು ಜನ ಕೇಳುವಂತೆ ಆಡುವುದು ಬಹಳ ಮುಖ್ಯ. ಅದಕ್ಕೆಂದೇ ಕೆಲವರು - ವೇದಿಕೆಯ ಮೇಲೇ ಇರಲಿ, ಕೆಳಗೇ ಇರಲಿ - ತಮ್ಮ ಮಾತನ್ನು ಆರಂಭಿಸುವ ಮುನ್ನ ಸಣ್ಣಗೆ ಕೆಮ್ಮುತ್ತಾರೆ. ಅದು ಅತ್ತ ಗಂಟಲು ಸರಿಪಡಿಸಿಕೊಂಡಂತೆಯೂ ಆಯಿತು, ಇತ್ತ ಕೇಳುಗರ ಗಮನ ಸೆಳೆದಂತೆಯೂ ಆಯಿತು. ಮಧ್ಯೆ ಮಧ್ಯೆಯೂ ಕೆಲವರು ಈ ಕೆಮ್ಮಸ್ತ್ರವನ್ನು ಬಳಸುತ್ತಾರೆ. ಭಾರೀ ಗಲಾಟೆಯ ಕ್ಲಾಸ್ ರೂಮ್‌ನಲ್ಲಿ ಟೀಚರ್ ಬಂದು ಒಮ್ಮೆ ಜೋರಾಗಿ ಕೆಮ್ಮಿದರೆ, ಇಡೀ ಕ್ಲಾಸ್ ಗಪಚುಪ್ ಆಗುತ್ತದೆಂದರೆ, ಅದು ಕೆಮ್ಮುವಿನ ಪ್ರಭಾವವೋ, ಕೆಮ್ಮುತ್ತಿರುವವರ ಪ್ರಭಾವವೋ ಎಂದು ಯೋಚಿಸಲೇಬೇಕು.

4. **ಕಾಯಿಲೆ ಕೆಮ್ಮು :** ಕೆಮ್ಮು ಕೆಟ್ಟದ್ದು, ಕೆಮ್ಮುವಿನಿಂದ ತೊಂದರೆಯಾಗುತ್ತಿದೆ. ರೋಗದ ಕಾರಣಕ್ಕೆ ಕೆಮ್ಮುವಂತಾಗಿದೆ - ಹೀಗೆಲ್ಲ ಕೆಮ್ಮುವನ್ನು ದೂಷಿಸುವುದಿದೆ. ಅದರ ಧನಾತ್ಮಕ ಆಯಾಮ ನೋಡುವುದಾದರೆ, ಕೆಮ್ಮುವು ಮುಂದೆ ಬರುವ ಕಾಯಿಲೆ-ಕಸಾಲೆಗಳ ಬಗ್ಗೆ ಒಂದು ಮಟ್ಟಿಗಿನ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಒಳಗೇನೋ ಸರಿಯಿಲ್ಲ ಎನ್ನುವುದನ್ನು ದೇಹವು ಕೆಮ್ಮುವಿನ ಮೂಲಕವೇ ದಾಟಿಸಿದಂತಾಗುತ್ತದೆ. ಸಿನಿಮಾಗಳಲ್ಲಿ ತೋರಿಸುವಂತೆ ಒಮ್ಮಿಂದೊಮ್ಮೆಗೆ ಕೆಮ್ಮು ಆರಂಭವಾಗಿ, ಅದು ತೀವ್ರ ಸ್ವರೂಪ ಪಡೆದುಕೊಂಡು, ಬಳ್ ಎಂದು ರಕ್ತ ವಾಂತಿ ಮಾಡಿ, ಆಗಿಂದಾಗ್ಗೆ ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿರುವ ಬಗ್ಗೆ ಗೊತ್ತಾದಂತೆಲ್ಲಾ ನಿಜ ಜೀವನದಲ್ಲಿ ಘಟಿಸದೇ ಹೋದರೂ ಕೆಮ್ಮು ಒಂದು ಮಟ್ಟಿಗೆ ವಾರ್ನ್ ಮಾಡುತ್ತಲೇ ಇರುತ್ತದೆ.

5. **ದುಃಖ ಪ್ರಚೋದಿತ ಕೆಮ್ಮು :** ದುಃಖವಾದಾಗ ಮೌನವಾಗುವುದು, ಕಣ್ಣಾಲಿಗಳು ತುಂಬುವುದು, ಅಳುವುದು ಸಹಜ. ಕೆಲವೊಮ್ಮೆ ಎಷ್ಟೇ ಅತ್ತರೂ ಯಾರೂ ಕ್ಯಾರೇ ಅನ್ನದಿದ್ದಾಗ ಅತ್ತು ಅತ್ತು ರಚ್ಚೆ ಹಿಡಿದು ಅದರ ಉಚ್ಛ್ರಾಯ ಸ್ಥಿತಿಯೋ ಎಂಬಂತೆ ಒಂದೇ ಸಮನೆ ಕೆಮ್ಮಲಾರಂಭಿಸುತ್ತಾರೆ. ಹಾಗಾದರೂ ಎದುರಿನವರಿಗೆ ಇವರ ದುಃಖ, ಸಂಕಟಗಳು ತಟ್ಟಲಿ ಎನ್ನುವುದೇ ಅದರ ಉದ್ದೇಶ. 'ಅಯ್ಯೋ ಅಷ್ಟು ಕೆಮ್ಮುತ್ತಾರಲ್ಲ, ಏನಾಯ್ತು ನೋಡ್ರಪಾ' ಎಂದು ಎಲ್ಲರೂ ಅತ್ತಲೆಡೆಗೆ ಕೊಂಚ ಅಲರ್ಟ್ ಆಗುತ್ತಾರೆ.

6. **ಕಾಳು ಹಾಕೋ ಕೆಮ್ಮು :** 'ಒಣಕೆಮ್ಮು' ಎಂದೇ ಇದೆಯೆಂಬ ಕಾರಣಕ್ಕೆ ಕೆಮ್ಮನ್ನು 'ಡ್ರೈ' ವಿಷಯ ಎಂಬಂತಿಲ್ಲ, ಅದರಲ್ಲೂ ರಸವತ್ತಾದ, ಪುಳಕ ಮೂಡಿಸುವ ಸಂಗತಿಗಳು ಘಟಿಸುತ್ತವೆ. ಯಾರೋ ತಮ್ಮೆಡೆಗೆ ನೋಟ ಹರಿಸುವಂತೆ ಮಾಡಿಕೊಳ್ಳಲು ಕೆಲವರು, ನಾಟಕೀಯ ಕೆಮ್ಮಿನ ಮೊರೆ ಹೋಗುತ್ತಾರೆ. ಆ ಕೆಮ್ಮಿನ ರೀತಿ ಮನ-ಮೋಹಕ, ಅತಿ ಮಧುರ. ಇಂಥ ಕೆಮ್ಮು ಕಾಯಿಲೆಯ ಸೂಚಕವಲ್ಲದೇ ಹೋದರೂ, ಅವು 'ಪ್ರೇಮಜ್ವರದ' ಕಾವು ಏರಿಸುವ ಸಾಧ್ಯತೆ ಹೆಚ್ಚಿರುವುದನ್ನು ತಳ್ಳಿ ಹಾಕುವಂತಿಲ್ಲ. ಕೆಲವೊಮ್ಮೆ ಈ ಕೆಮ್ಮಿಗೆ ಪ್ರತಿಯಾಗಿ ಎದುರಿನಿಂದ ಸಿಗುವ ಸಿಗ್ನಲ್ ಯಾವುದೇ ವೈ-ಫೈ ಸಿಗ್ನಲ್‌ನ್ನೂ ಮೀರಿಸುವಂತಿರುತ್ತದೆ. ಈ ಕೆಮ್ಮು ಕಳ್ಳ ನೋಟ, ಕಿರುನಗೆ, ಆತ್ಮೀಯ ಭಾವ ಹೀಗೇ ಮುಂದುವರಿದು ಮೆಸೇಜ್, ಕಾಲ್, ಮೀಟ್ ಹೀಗೆ ಯಾವ್ಯಾವುದೋ ಮಟ್ಟವನ್ನು ತಲುಪುತ್ತದೆ.


7. **ಕರೆಗಂಟೆ ಕೆಮ್ಮು :** ಒಳಗಿನಿಂದ ಬಾಗಿಲು ಹಾಕಿಕೊಂಡ ಯಾರದೋ ಮನೆಯ ಮುಂದೆ ನಿಂತಿದ್ದೀರಿ. ಒಳಗಿರುವವರನ್ನು ಕರೆಯಬೇಕು. ಅಲ್ಲೆಲ್ಲೂ ಬೆಲ್ ಇಲ್ಲ, ಯಾವುದೋ ಹೆಸರಿನಿಂದ ಕರೆಯಲು ಮುಜುಗರ. ಆಗ ಕೆಮ್ಮು ಕರೆಗಂಟೆಯಂತೆ ನಮ್ಮ ನೆರವಿಗೆ ಬರುವುದು. ಒಂದು ನಾಲ್ಕೈದು ಸಲ ಜೋರಾಗಿ ಕೆಮ್ಮುತ್ತಾ ಹೊರಗಡೆ ಅತ್ತಿಂದಿತ್ತ ನಡೆದಾಡಿದರೆ ಸಾಕು, ಒಳಗಿರುವವರಿಗೆ ಯಾರೋ ಬಂದಿದ್ದಾರೆ ಎಂಬ ವಿಷಯ ತಿಳಿದು, ಬಾಗಿಲು ತೆರೆದುಕೊಳ್ಳುತ್ತದೆ. ಅಂದರೆ ವ್ಯಕ್ತಿಯೊಬ್ಬ ಅಲ್ಲಿ ಬಂದಿದ್ದು, ಆ ವ್ಯಕ್ತಿಯ ಇರುವಿಕೆಯನ್ನು ಅಕ್ಕಪಕ್ಕದವರಿಗೆ ತಿಳಿಸಲು ಕೆಮ್ಮು ಸಹಕಾರಿಯಾಗಿದೆ.

8. **ಆಕ್ರೋಶ ಪ್ರಣೀತ ಕೆಮ್ಮು :** ಆಕ್ರೋಶ, ಉದ್ವೇಗಗಳು ಜೊತೆಯಾದಾಗ ಗಂಟಲು ಕಟ್ಟಿಕೊಳ್ಳುವುದಿದೆ. ಹಾಗೆ ಗಂಟಲು ಕಟ್ಟಿ ದನಿ ಹೊರ ಹೊಮ್ಮದೇ ಹೋದರೂ, ಆಕ್ರೋಶದ ಕಾರಣಕ್ಕೆ ಕಿರುಚುವ, ಅರಚುವ ಜನರೇ ಹೆಚ್ಚು. ಆ ಸಂದರ್ಭದಲ್ಲಿ ಮಾತು, ಕೂಗಾಟಗಳೆಲ್ಲ ಕೊನೆಗೆ ಹೋಗಿ ತಲುಪುವುದು ಈ ಕೆಮ್ಮುವಸ್ಥಿತಿಯನ್ನೇ. ಅಷ್ಟೇ ಏಕೆ, 'ಯಾರೂ ನನ್ನ ಮುಂದೆ ಕೆಮ್ಮಂಗಿಲ್ಲ' ಎಂದು ಸೂಚ್ಯವಾಗಿ ಹೇಳುವುದರ ಹಿನ್ನೆಲೆಯಲ್ಲಿ ಇರುವುದು ಇದೇ ಆಕ್ರೋಶ. ಈ ಕೆಮ್ಮಿನ ರೀತಿನೀತಿಯಲ್ಲೇ ಅರ್ಥವಾಗುತ್ತದೆ ಕೆಮ್ಮುವವರ ಕೋಪ-ತಾಪಗಳು. ಇನ್ನು ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಕೆಮ್ಮುವುದೂ ಅನ್ಯರಿಗೆ ಕಿರಿ ಕಿರಿ ಉಂಟಾಗಿ ಆಕ್ರೋಶಕ್ಕೆ ತಿರುಗುವುದೂ ಇದೆ!

9. **ಖ್ಯಾತೆ ಕೆಮ್ಮು :** 'ನೋಡಿ ನಾನು ಆ ಸಭೆಯನ್ನು ಅದ್ಯಾವ ಪರಿ ಅದ್ದೂರಿಯಾಗಿ ವ್ಯವಸ್ಥಿತವಾಗಿ ಆಯೋಜಿಸುತ್ತೇನೆ ಎಂದರೆ ಯಾರೂ ಕೂಡಾ ಕೆಮ್ಮಂಗಿಲ್ಲ' ಎಂದು ಹೇಳುವುದಿದೆ. ಅಂದರೆ ಕೆಲವರು ಸಣ್ಣಪುಟ್ಟದಕ್ಕೂ ಕೆಮ್ಮುತ್ತಲೇ ಇರುತ್ತಾರೆ ಎಂದರ್ಥವಲ್ಲವೇ? ಕೆಮ್ಮುವುದು ಎಂದರೆ ಖ್ಯಾತೆ ತೆಗೆಯುವುದು ಎಂದೇ ಆಯಿತಲ್ಲವೇ? ಇಲ್ಲಿ ಕೆಮ್ಮು ವಾಚ್ಯವಾಗದೇ, ಸೂಚ್ಯವಾಗಿರುವಂಥದ್ದು, ಅದೊಂದು ಸಂಕೇತ, ಅದೊಂದು ಸೂಚನೆ ಹಾಗೂ ಅದೊಂದು ಅನ್ವರ್ಥ. ಇನ್ನು ಅಸಲಿ ಕೆಮ್ಮುವಿಗಾದರೂ ಸೂಕ್ತ ಔಷಧಿ, ಚಿಕಿತ್ಸೆ ಇದೆ, ಆದರೆ ಈ ಮೇಲೆ ತಿಳಿಸಿದ ಕೆಮ್ಮುವಿನ ಉಪಶಮನ ಕಷ್ಟಸಾಧ್ಯವೇ ಸರಿ.

10. **ಕೆಟ್ ಅಡುಗೆ ಕೆಮ್ಮು:** ಬಾಯಿಗೆ ರುಚಿಸದ ಅಡುಗೆಯ ಬಗ್ಗೆ ಪ್ರತಿಕ್ರಿಯೆ ನೀಡುವ ಬೇರೆ ಬೇರೆ ಪರಿಗಳಿವೆ. ಮುಖ ಸಿಂಡರಿಸುವುದು, ಊಟಕ್ಕೇ ಕೈ ತೊಳೆದು ಎದ್ದೇಳುವುದು, ತಟ್ಟೆ ದೂರಕ್ಕೆ ತಳ್ಳುವುದು ಇನ್ನೂ ಹಲವು. ಅದೇ ರೀತಿಯಲ್ಲಿ ಕೆಮ್ಮುವುದೂ ಕೂಡಾ ಒಂದು. ಇದಕ್ಕೆ ಸಿನಿಮಾ, ಸೀರಿಯಲ್ ದೃಶ್ಯಗಳೇ ಪ್ರೇರಣೇ ಆದರೂ ಆಗಿದ್ದಿರಬಹುದು. ತುತ್ತೊಂದನ್ನು ಬಾಯಿಗಿಟ್ಟಾಕ್ಷಣ, ವಿಚಿತ್ರ ಪ್ರತಿಕ್ರಿಯೆ ನೀಡುತ್ತಾ ಗಂಟಲು, ಎದೆಯನ್ನೆಲ್ಲಾ ಹಿಡಿದು, ಕೆಮ್ಮುತ್ತಾ ತುತ್ತನ್ನು ಬಾಯಿಯಿಂದ ಹೊರಕ್ಕೆ ಚೆಲ್ಲುವ ಈ ವೈಖರಿಯು, ಅಡುಗೆ ಅದೆಷ್ಟು ಕೆಟ್ಟದಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ, ಯಾರು ಕೆಮ್ಮಿದರು ಅಷ್ಟೇ ಅಲ್ಲ, ಹೇಗೆ ಕೆಮ್ಮಿದರು ಎನ್ನುವುದೂ ಮುಖ್ಯವಾಗುತ್ತದೆ. ಅಂದರೆ ಅದನ್ನು 'ಕೇಳಿಸದೆ ಕೆಮ್ಮು ಕೆಮ್ಮಿನಲಿ....' ಎಂದು ಹಾಡಬಹುದು. ಹ್ಞಾಂ.. ಪಕ್ಕದಲ್ಲಿ ಯಾರೋ ಕೆಮ್ಮುತ್ತಿರುವ ದನಿ ಕೇಳಿಸುತ್ತಿದೆಯೇ?!

**ಓವರ್‌ಡೋಸ್:** ಯಾರಾದರೂ ''ಹೇಗಿದ್ದೀರಿ?'' ಎಂದು ಕೇಳಿ, ನೀವು ಅದಕ್ಕೆ ಪ್ರತಿಯಾಗಿ 'ಚೆನ್ನಾಗಿದೀನಿ' ಎಂದುತ್ತರಿಸಿದ ಮರುಕ್ಷಣವೇ ಜೋರಾಗಿ ಬರುವ ಕೆಮ್ಮು, ನಾವು ನೀಡಿದ ಉತ್ತರವನ್ನೇ ಅನುಮಾನಿಸುವಂತೆ ಮಾಡುತ್ತದೆ!



- ಪ್ರಮುಖ ನಗರಗಳ ಮೇಲೆ ಭಾನುವಾರ ಮುಂಜಾನೆ ಅಮೆರಿಕ ಹೊಸ ದಾಳಿ
- ಇರಾನ್‌ನ ಶಿರಾಜ್‌ನಲ್ಲಿ 20 ನಿಮಿಷದೊಳಗೆ 20 ಬಾಂಬ್ ಸ್ಫೋಟ
- ಇಸ್ರೇಲ್ ದಾಳಿಗೆ ಇಸ್ಫಹಾನ್ ನಗರದಲ್ಲಿ ಆವರಿಸಿದ ದಟ್ಟ ಹೊಗೆ
- ಮುಂದುವರಿದ ಆಪರೇಷನ್ ಎಪಿಕ್ ಫ್ಯೂರಿ
- ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳ ಬಳಕೆ

# ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!

• **ಟೆಹ್ರಾನ್:** ಆಪರೇಷನ್ ಎಪಿಕ್ ಫ್ಯೂರಿ ಮುಂದುವರಿದ ಭಾಗವಾಗಿ ಬಿ-52 ಬಾಂಬರ್ಸ್ ಯುದ್ಧ ವಿಮಾನಗಳನ್ನು ಬಳಸಿಕೊಂಡು ಇರಾನ್ ಪ್ರಮುಖ ನಗರಗಳ ಮೇಲೆ ಅಮೆರಿಕ ಹೊಸ ದಾಳಿ ನಡೆಸಿದೆ. ಶನಿವಾರ ತಡರಾತ್ರಿ ಮತ್ತು ಭಾನುವಾರ ಮುಂಜಾನೆ ಇರಾನ್ ಪ್ರಮುಖ ನಗರಗಳಲ್ಲಿ ಸ್ಫೋಟಗಳು ಸಂಭವಿಸಿವೆ ಎಂದು ಇರಾನ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ. ಭಾನುವಾರ ಬೆಳಗಿನ ಜಾವ ದಕ್ಷಿಣ ಟೆಹ್ರಾನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ನಡೆದಿವೆಯೆಂದು ವಿಡಿಯೋ ಒಂದನ್ನು ಹಂಚಿಕೊಂಡಿದೆ. ಟೆಹ್ರಾನ್‌ನ ಹಲವು ಪ್ರದೇಶಗಳ ಮೇಲೆ ಬಿ-52 ಬಾಂಬರ್‌ಗಳು ದಾಳಿ ನಡೆಸಿವೆ ಎನ್ನಲಾಗಿದೆ. ಭಾನುವಾರ ಮುಂಜಾನೆ ಶಿರಾಜ್ ಪ್ರದೇಶದಲ್ಲಿ ಕೇವಲ 20 ನಿಮಿಷದೊಳಗೆ 20 ಬಾಂಬ್ ಸ್ಫೋಟಗಳು ನಡೆದಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಶಿರಾಜ್ ವಿಮಾನ ನಿಲ್ದಾಣದ ಸಮೀಪ ಬಾಂಬ್ ಸ್ಫೋಟಗಳು ನಡೆದಿರುವುದನ್ನು ಕೆಲವು ಪ್ರತ್ಯಕ್ಷದರ್ಶಿಗಳು ದೃಢೀಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಸಮೀಪ ಹಾರ್ಮುಜ್ಗನ್‌ನ ಜಾಸ್ಕ್ ಬಂದರಿನಿಂದ ಹೊಗೆ ಬರುವ ದೃಶ್ಯವನ್ನು ವಿಡಿಯೋದಲ್ಲಿ ಕಾಣಬಹುದು. ಇರಾನ್ ಅಣ್ವಸ್ತ್ರಾಗಾರಗಳಿರುವ ಇಸ್ಫಹಾನ್ ನಗರದಲ್ಲಿ ದಟ್ಟ ಹೊಗೆ ಆವರಿಸಿದ ದೃಶ್ಯಗಳನ್ನು ಇಸ್ರೇಲಿ ಸುದ್ದಿವಾಹಿನಿಗಳು ಪ್ರಸಾರಮಾಡಿವೆ. ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ವಾಯುಪಡೆಯ ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳು ತಡರಾತ್ರಿ ಟೇಕ್‌ಆಫ್ ಆಗಿವೆ. ಊಹೆಗೂ ಮೀರಿದ, ಚುರುಕಾದ ಮತ್ತು ನಿರ್ಣಾಯಕ ದಾಳಿಗಳು ಮುಂದುವರಿಯಲಿವೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಎಕ್ಸ್‌ನಲ್ಲಿ ವಿಡಿಯೋ ಹಂಚಿಕೊಂಡಿದೆ.



### ಹಾರ್ಮುಜ್‌ಗೆ ಯುದ್ಧ ನೌಕೆ ಕಳುಹಿಸಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮತ್ತು ಅದರ ಮೂಲಕ ತೈಲ ಹಡಗುಗಳ ಸುರಕ್ಷಿತ ಸಂಚಾರ ಖಚಿತಪಡಿಸಲು ಯುದ್ಧನೌಕೆಗಳನ್ನು ಹಾರ್ಮುಜ್‌ಗೆ ಕಳುಹಿಸಿಕೊಡಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಸೇರಿ ಹಲವು ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ. ಈ ರಾಷ್ಟ್ರಗಳು ಅಮೆರಿಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈ ಜಲಸಂಧಿ ದಾಟುವ ತೈಲ ಮತ್ತು ಅನಿಲ ಹಡಗುಗಳ ಮೇಲೆ ಅವಲಂಬಿತವಾಗಿವೆ.



### ಯುದ್ಧದ ಹಾನಿ ತೀವ್ರತೆ ಹೆಚ್ಚಳ

ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ಪ್ರಕಾರ, ಇರಾನ್‌ನಲ್ಲಿ ಈಗಾಗಲೇ 1,300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ಆರೋಗ್ಯ ಸಚಿವಾಲಯದ ನೀಡಿದ ಮಾಹಿತಿ ಪ್ರಕಾರ, ಸಾವಿಗೀಡಾದವರಲ್ಲಿ 223 ಮಹಿಳೆಯರು ಮತ್ತು 202 ಮಕ್ಕಳು ಸೇರಿದ್ದಾರೆ. ಇಸ್ರೇಲ್‌ನಲ್ಲಿ ಇರಾನ್ ದಾಳಿಗೆ 12 ಮಂದಿ ಸಾವನ್ನಪ್ಪಿದ್ದು, ಭಾನುವಾರ ಮೂವರು ಗಾಯಗೊಂಡಿದ್ದಾರೆ. ಯುದ್ಧ ಆರಂಭವಾದ ಬಳಿಕ ಅಮೆರಿಕ ಸೇನೆಯ ಕನಿಷ್ಠ 13 ಯೋಧರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಕನಿಷ್ಠ 820 ಮಂದಿ ಸಾವನ್ನಪ್ಪಿದ್ದು, 8.5 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ಹೇಳಿದೆ.

### ಇರಾನ್‌ಗೆ ರಷ್ಯಾ ಡ್ರೋನ್ ಪೂರೈಕೆ: ಝೆಲೆನ್ಸ್ಕಿ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುವುದಕ್ಕಾಗಿ ರಷ್ಯಾ ನಿರ್ಮಿತ ಶಾಹಿದ್ ಡ್ರೋನ್‌ಗಳನ್ನು ಇರಾನ್ ಬಳಸಿಕೊಂಡಿದೆ. ಇರಾನ್‌ಗೆ ರಷ್ಯಾ ತನ್ನ ಶಾಹಿದ್ ಡ್ರೋನ್‌ಗಳನ್ನು ಪೂರೈಕೆ ಮಾಡುತ್ತಿದೆ. ಇದು ಶೇ.100ರಷ್ಟು ಸತ್ಯ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಆರೋಪಿಸಿದ್ದಾರೆ. ಶಾಹಿದ್-136 ಡ್ರೋನ್‌ಗಳು ಮೂಲತಃ ಇರಾನ್ ನಿರ್ಮಿಸುವ ಅಗ್ಗದ ಡ್ರೋನ್‌ಗಳಾಗಿದ್ದು, ರಷ್ಯಾದೊಂದಿಗೆ ಜಂಟಿ ಉತ್ಪಾದನೆ ಮಾಡಲಾಗುತ್ತಿದೆ. ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲು ಇರಾನ್‌ಗೆ ಡ್ರೋನ್‌ಗಳನ್ನು ರಷ್ಯಾ ಪೂರೈಕೆ ಮಾಡುತ್ತಿರುವುದಾಗಿ ಝೆಲೆನ್ಸ್ಕಿ ಆರೋಪಿಸಿದ್ದಾರೆ. ರಷ್ಯಾ ಡ್ರೋನ್ ಪೂರೈಕೆ ಮೂಲಕ ಇರಾನ್ ಆಡಳಿತಕ್ಕೆ ತನ್ನ ಬೆಂಬಲ ನೀಡಿದ್ದು, ಮುಂದಿನ ದಿನಗಳಲ್ಲಿ ಕ್ಷಿಪಣಿ ಪೂರೈಕೆ ಮಾಡಬಹುದು ಮತ್ತು ವಾಯು ರಕ್ಷಣಾ ವ್ಯವಸ್ಥೆ ನೀಡಿ ಬೆಂಬಲಿಸಬಹುದು.

**ಅಗ್ಗದ ಡ್ರೋನ್:** ಶಾಹಿದ್ ಡ್ರೋನ್‌ಗಳ ನಿರ್ಮಾಣ ವೆಚ್ಚ 20,000ದಿಂದ 50,000 ಡಾಲರ್ ವೆಚ್ಚ ತಗಲುತ್ತದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರ್ಮಾಣದ ಮುಂದೆ ಬಹಳ ಅಗ್ಗವಾಗಿದೆ. ಈ ಅಗ್ಗದ ಡ್ರೋನ್‌ಗಳು ಪರಿಣಾಮಕಾರಿ ದಾಳಿಯನ್ನು ನಡೆಸಬಲ್ಲವು. ಇವುಗಳನ್ನು ಹೊಡೆದುರುಳಿಸಲು ಶತ್ರುಗಳು ದುಬಾರಿ ವಾಯು ರಕ್ಷಣಾ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇದರಿಂದಾಗಿ ಇವುಗಳ ದಾಳಿ ವೇಳೆ ಧ್ವಂಸವಾದರೂ ನಷ್ಟ ಎನಿಸಿಕೊಳ್ಳುವುದಿಲ್ಲ.

### ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್

• **ಹೊಸದಿಲ್ಲಿ:** ಯುಎಇಯ ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದಿದ್ದರೂ ಭಾರತೀಯ ಧ್ವಜದ ಜಾಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಸುರಕ್ಷಿತವಾಗಿ ಫುಜೈರಾದಿಂದ ಭಾರತದತ್ತ ಹೊರಟಿದೆ. ಸುಮಾರು 80,800 ಟನ್ ಮರ್ಬನ್ ಕಚ್ಚಾ ತೈಲವನ್ನು ಹೊತ್ತ ಈ ನೌಕೆ ಭಾನುವಾರ ಬೆಳಗ್ಗೆ 10.30ಕ್ಕೆ ಫುಜೈರಾ ಬಂದರಿನಿಂದ ಹೊರಟಿದ್ದು, ನೌಕೆಯಲ್ಲಿದ್ದ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಯುದ್ಧ ವಲಯದಿಂದ ಸುರಕ್ಷಿತವಾಗಿ ಹೊರಬಂದ ನಾಲ್ಕನೇ ಭಾರತೀಯ ಧ್ವಜದ ನೌಕೆ ಇದಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಅಡಚಣೆ ಉಂಟಾಗಿರುವ ಹಿನ್ನೆಲೆಯಲ್ಲಿ ಈ ಸಾಗಣೆ ಭಾರತಕ್ಕೆ ಮಹತ್ವದ್ದಾಗಿದೆ. ಇದಕ್ಕೂ ಮೊದಲು ಭಾರತೀಯ ಧ್ವಜದ ಶಿವಾಲಿಕ್ ಮತ್ತು ನಂದಾದೇವಿ ಎಂಬ ಎರಡು ಎಲ್‌ಪಿಜಿ ನೌಕೆಗಳು ಒಟ್ಟು 92,712 ಟನ್ ಎಲ್‌ಪಿಜಿ ಹೊತ್ತು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಶಿವಾಲಿಕ್ ಸೋಮವಾರ ಗುಜರಾತ್‌ನ ಮುಂದ್ರಾ ಬಂದರಿಗೆ, ನಂದಾದೇವಿ ಮಂಗಳವಾರ ಕಂದ್ಲಾ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಪರ್ಶಿಯನ್ ಕೊಲ್ಲಿಯ ಪಶ್ಚಿಮ ಭಾಗದಲ್ಲಿ ಪ್ರಸ್ತುತ 22 ಭಾರತೀಯ ಧ್ವಜದ ನೌಕೆಗಳು ಹಾಗೂ 611 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಸುರಕ್ಷತೆಯನ್ನು ಸರ್ಕಾರ ನಿಗಾದಲ್ಲಿಟ್ಟಿದೆ. ಇದುವರೆಗೆ ಗಲ್ಫ್ ಪ್ರದೇಶದಿಂದ 276 ಭಾರತೀಯ ನಾವಿಕರನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಶಾಹಿದ್-136 ವಿಶೇಷತೆಗಳು

- **ಗರಿಷ್ಠ ಟೇಕ್‌ಆಫ್ ಭಾರ:** 200 ಕೆ.ಜಿ.
- **ದೂರವ್ಯಾಪ್ತಿ :** 2,000 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ಯೆಮೆನ್, ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

### ಶಾಹಿದ್-131 ವಿಶೇಷತೆಗಳು

- **ಗರಿಷ್ಠಟೇಕ್‌ಆಫ್ ಭಾರ:** 135 ಕೆ.ಜಿ.
- **ದೂರವ್ಯಾಪ್ತಿ:** 900 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ರಷ್ಯಾ, ಇರಾಕ್‌ನ ಕತೈಬ್ ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

### ಅಮೆರಿಕ ದಾಳಿ ತೀವ್ರ

ಪೆಂಟಗನ್ ಮಾಹಿತಿ ಪ್ರಕಾರ, ಇರಾನ್‌ನ 15,000 ಕ್ಕೂ ಹೆಚ್ಚು ಗುರಿಗಳ ಮೇಲೆ ದಾಳಿ ಮಾಡಲಾಗಿದ್ದು, ಇದುವರೆಗೆ 2,000 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಈ ನಡುವೆ ಅಮೆರಿಕ, ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆ ಮತ್ತು 2,500 ನೌಕಾಪಡೆ ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಇರಾನ್ ಭಯೋತ್ಪಾದನೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಅಮೆರಿಕದ ಸಾಮಾನ್ಯ ಜನರೊಂದಿಗೆ ನಮಗೆ ಯಾವುದೇ ಯುದ್ಧವಿಲ್ಲ ಎಂದು ಲಾರಿಜಾನಿ ಒತ್ತಿ ಹೇಳಿದ್ದಾರೆ.

## 6,000

### ಇರಾನ್ ಸೈನಿಕರ ಸಾವು: ಐಡಿಎಫ್

ಐಡಿಎಫ್ ಗುಪ್ತಚರ ಮಾಹಿತಿಗಳ ಪ್ರಕಾರ, ಇಸ್ರೇಲ್ ಸೇನೆ ಆಪರೇಷನ್ ರಾರಿಂಗ್ ಲಯನ್ ಆರಂಭಿಸಿದಾಗಿನಿಂದ ಸುಮಾರು 6,000ಕ್ಕೂ ಅಧಿಕ ಇರಾನ್ ಸೈನಿಕರನ್ನು ಹೊಡೆದುರುಳಿಸಲಾಗಿದ್ದು, 15,000ಕ್ಕೂ ಅಧಿಕ ಇರಾನ್ ಸೈನಿಕರು ಗಾಯಗೊಂಡಿದ್ದಾರೆ.

### 20 ಗೂಢಚಾರಿಗಳ ಸೆರೆ ಹಿಡಿದ ಇರಾನ್

ಇರಾನ್‌ನೊಳಗಿದ್ದು ಇಸ್ರೇಲ್‌ಗೆ ರಹಸ್ಯ ಗುಪ್ತಚರ ಮಾಹಿತಿಗಳನ್ನು ನೀಡುತ್ತಿದ್ದ 20 ಗೂಢಚಾರಿಗಳನ್ನು ಇರಾನ್ ಬಂಧಿಸಿದೆ. ಇರಾನ್ ಸೇನೆ ಮತ್ತು ಅದರ ಸೇನಾ ಮೂಲಸೌಕರ್ಯಗಳಿರುವ ಸ್ಥಳಗಳ ನಿಖರ ಮಾಹಿತಿಯನ್ನು ಇಸ್ರೇಲ್ ಸೇನೆಗೆ ಕಳುಹಿಸುತ್ತಿದ್ದರೆಂಬ ಆರೋಪದಲ್ಲಿ 20 ವ್ಯಕ್ತಿಗಳನ್ನು ಇರಾನ್ ಸೆರೆಹಿಡಿದಿದೆ.

### ಇರಾನ್ ಮೇಲೆ 9/11 ಮಾದರಿ ದಾಳಿ ಪಿತೂರಿ!

• **ಟೆಹ್ರಾನ್:** ಇರಾನ್ ಮೇಲೆ ಬೃಹತ್ ಭಯೋತ್ಪಾದನಾ ದಾಳಿಯ ಹಣೆಪಟ್ಟಿ ಕಟ್ಟಲು ಎಪ್ಸ್ಟೀನ್ ನೆಟ್‌ವರ್ಕ್‌ನಿಂದ 9/11 ಮಾದರಿಯ ದಾಳಿಯ ಪಿತೂರಿ ನಡೆಯುತ್ತಿದೆ ಎಂದು ಇರಾನ್‌ನ ಭದ್ರತಾ ಕಾರ್ಯದರ್ಶಿ ಅಲಿ ಲಾರಿಜಾನಿ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಈ ಆರೋಪವನ್ನು ಎಕ್ಸ್ ಮೂಲಕ ಹಂಚಿಕೊಂಡಿರುವ ಲಾರಿಜಾನಿ, ಟೆಹ್ರಾನ್ ಅನ್ನು ಸಿಲುಕಿಸಲು ಯೋಜಿತ ಘಟನೆಯೊಂದನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಳೆದ ತಿಂಗಳು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಬಲಿಯಾದ ನಂತರ ಈ ಪ್ರದೇಶದಲ್ಲಿ ಯುದ್ಧದ ಭೀತಿ ಹೆಚ್ಚಾಗಿರುವಾಗಲೇ ಈ ಆರೋಪಗಳು ಕೇಳಿಬಂದಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಪಡೆಗಳು ಇಸ್ರೇಲ್ ಮತ್ತು ಗಲ್ಫ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸಿವೆ.

## ಕಿರುಸುದ್ದಿ

### ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

• **ಶ್ರೀನಗರ:** ಕಾಶ್ಮೀರ ಕಣಿವೆಯ ಬಾರಾಮುಲ್ಲಾ ಜಿಲ್ಲೆಯ ಉರಿಯ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಒಳನುಸುಳುತ್ತಿದ್ದ ಪಾಕಿಸ್ತಾನಿ ಭಯೋತ್ಪಾದಕನೊಬ್ಬನನ್ನು ಸದೆಬಡಿಯಲಾಗಿದೆ. ಹತ್ಯೆಗೀಡಾದ ಭಯೋತ್ಪಾದಕನಿಂದ ಎಕೆ 47 ರೈಫಲ್, ಪಿಸ್ತೂಲುಗಳು ಮತ್ತು ದೊಡ್ಡ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಭಾನುವಾರ ಹೇಳಿದೆ. ಈ ಕುರಿತು ಸೇನೆಯು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನದ ಕುರಿತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ನೀಡಿದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಜಂಟಿ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಭಯೋತ್ಪಾದಕರು ಮನಬಂದಂತೆ ಗುಂಡು ಹಾರಿಸಿದರು. ಎನ್‌ಕೌಂಟರ್‌ನಲ್ಲಿ ಒಬ್ಬ ಪಾಕ್ ಭಯೋತ್ಪಾದಕನನ್ನು ಕೊಲ್ಲಲಾಗಿದೆ ಎಂದು ತಿಳಿಸಲಾಗಿದೆ.

### ಸುಂಟರಗಾಳಿಗೆ ಓರ್ವನ ಸಾವು, 70 ಮನೆ ಧ್ವಂಸ

• **ಭುವನೇಶ್ವರ:** ಒಡಿಶಾದಲ್ಲಿ ಸಂಭವಿಸಿದ ಸುಂಟರಗಾಳಿ ಭಾರಿ ಅನಾಹುತ ಸೃಷ್ಟಿಸಿದ್ದು, ಸುಂಟರಗಾಳಿ ರುದ್ರನರ್ತನಕ್ಕೆ ಓರ್ವ ಮೃತಪಟ್ಟಿದ್ದರೆ, 70 ಮನೆಗಳು ಧ್ವಂಸಗೊಂಡಿವೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಭಾನುವಾರ ಒಡಿಶಾದ ಮಯೂರ್ಭಂಜ್ ಜಿಲ್ಲೆಯಲ್ಲಿ ಬೀಸಿದ ಪ್ರಬಲವಾದ ನಾರ್ವೆಸ್ಟರ್ ಸುಂಟರಗಾಳಿಯು ವ್ಯಾಪಕ ನಷ್ಟವನ್ನುಂಟುಮಾಡಿದ್ದು, ಸುಮಾರು 70 ಮನೆಗಳಿಗೆ ಹಾನಿಯಾಗಿದೆ. ಅಂತೆಯೇ ಹಲವಾರು ಜನರು ಗಾಯಗೊಂಡಿದ್ದಾರೆ. ಆರಂಭಿಕ ವರದಿಗಳ ಪ್ರಕಾರ, ಕರಂಜಿಯಾದ ಕಿಯಾ ಗ್ರಾಮವು ಹೆಚ್ಚು ಹಾನಿಗೊಳಗಾದ ಪ್ರದೇಶವಾಗಿದ್ದು, ಅಲ್ಲಿ ಬಲವಾದ ಗಾಳಿಯು ನಿವಾಸಿಗಳಲ್ಲಿ ಭೀತಿಯನ್ನುಂಟುಮಾಡಿತು. ಸುಂಟರಗಾಳಿ ರಭಸಕ್ಕೆ ಹಲವಾರು ಮಣ್ಣು ಮತ್ತು ಹುಲ್ಲಿನ ಮನೆಗಳ ಛಾವಣಿಗಳು ಕಿತ್ತುಕೊಂಡು ಹೋಗಿವೆ.

### ನಕಲಿ ದರೋಡೆ ಸಂಚು: 11 ಭಾರತೀಯರ ಸೆರೆ

• **ಬಾಸ್ಟನ್:** ಅಮೆರಿಕದ ಯು ವೀಸಾ ಪಡೆಯುವ ಉದ್ದೇಶದಿಂದ ನಕಲಿ ಸಶಸ್ತ್ರ ದರೋಡೆಗಳನ್ನು ನಡೆಸಿದ ಆರೋಪದ ಮೇಲೆ 11 ಭಾರತೀಯ ಪ್ರಜೆಗಳನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಈ ವಿಶೇಷ ವೀಸಾವನ್ನು ಗಂಭೀರ ಅಪರಾಧಗಳಿಗೆ ಬಲಿಯಾದ ಮತ್ತು ತನಿಖೆಗೆ ಸಹಕರಿಸುವ ಸಂತ್ರಸ್ತರಿಗೆ ಮಾತ್ರ ನೀಡಲಾಗುತ್ತದೆ. ಈ ಗುಂಪು ವಿವಿಧ ರಾಜ್ಯಗಳ ಮದ್ಯದ ಅಂಗಡಿ ಮತ್ತು ಉಪಹಾರ ಗೃಹಗಳಲ್ಲಿ ಕನಿಷ್ಠ ಆರು ನಕಲಿ ದರೋಡೆಗಳನ್ನು ಯೋಜಿಸಿತ್ತು ಎಂದು ಫೆಡರಲ್ ತನಿಖಾಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಇದು ನೈಜ ದರೋಡೆಯಂತೆ ಕಾಣಲು ನಕಲಿ ಪಿಸ್ತೂಲುಗಳನ್ನು ಬಳಸಲಾಗುತ್ತಿತ್ತು.

### ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

• **ಹೊಸದಿಲ್ಲಿ:** ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

**ಪರಿಷ್ಕೃತ ಪಾಸ್ ನಿಯಮಗಳು:** ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್, ಕಾರುಗಳು, ಜೀಪುಗಳು ಮತ್ತು ವ್ಯಾನ್‌ಗಳಂತಹ ಖಾಸಗಿ ವಾಹನಗಳಿಗೆ ಲಭ್ಯವಿದೆ. ಪ್ರತಿ ಬಾರಿಯೂ ಟೋಲ್ ಶುಲ್ಕ ಪಾವತಿಸುವ ಬದಲು, ಬಳಕೆದಾರರು ವಾರ್ಷಿಕ ಪಾಸ್ ಅನ್ನು ಖರೀದಿಸಬಹುದು. ಪ್ರಸ್ತುತ, ಈ ಪಾಸ್, ವರ್ಷಕ್ಕೆ 200 ಟೋಲ್ ದಾಟಲು ಅಥವಾ ಒಂದು ವರ್ಷದ ಅವಧಿಗೆ ಅವಕಾಶ ನೀಡುತ್ತದೆ. ಪ್ರಸ್ತುತ 50 ಲಕ್ಷಕ್ಕೂ ಹೆಚ್ಚು




ಬಳಕೆದಾರರು ಈ ವ್ಯವಸ್ಥೆಯನ್ನು ಬಳಸುತ್ತಿದ್ದು, ಇದು ಒಟ್ಟು ಕಾರು ಟೋಲ್ ವಹಿವಾಟಿನ ಶೇ.28ರಷ್ಟಿದೆ. ಬೆಲೆ ಏರಿಕೆಯ ಹೊರತಾಗಿಯೂ, ನಿರಂತರ ಪ್ರಯಾಣಿಸುವವರಿಗೆ ಇದು ಉಳಿತಾಯದ ಆಯ್ಕೆಯಾಗಿ ಮುಂದುವರಿಯಲಿದೆ.

**ನಗದು ರಹಿತ ಪಾವತಿ ಕಡ್ಡಾಯ:** ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ನಗದು ರಹಿತ ಪಾವತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಫಾಸ್ಟ್ಯಾಗ್ ಇಲ್ಲದ ವಾಹನಗಳಿಗೆ ಯುಪಿಐ ಮೂಲಕ ಶೇ.25ರಷ್ಟು ಹೆಚ್ಚುವರಿ ಶುಲ್ಕ ಅಥವಾ ನಗದು ರೂಪದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಹೊಸ ನೋಂದಣಿಗಳನ್ನು ನೇರವಾಗಿ ವಾಹನ್ ಡೇಟಾಬೇಸ್ ಮೂಲಕ ಪರಿಶೀಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

### ಚುನಾವಣೆ ಘೋಷಣೆಗೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ

• **ಕೋಲ್ಕತ್ತಾ:** ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲವೇ ಕ್ಷಣಗಳ ಮೊದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತುಟ್ಟಿಭತ್ಯೆ (ಡಿಎ) ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಮಾರ್ಚ್ 2026ರಿಂದ ರಾಜ್ಯ ಸರ್ಕಾರಿ ನೌಕರರು ರೋಪಾ 2009 ಡಿಎ ಬಾಕಿಯನ್ನು ಪಡೆಯಲಿದ್ದಾರೆ ಎಂದು ಮಮತಾ ಬ್ಯಾನರ್ಜಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಬೆಳವಣಿಗೆ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಸುದೀರ್ಘ ಕಾನೂನು ಹೋರಾಟದ ನಂತರ ಬಂದಿದೆ. ಮೇ 2022 ರಲ್ಲಿ ಕಲ್ಕತ್ತಾ ಹೈಕೋರ್ಟ್ ಕೇಂದ್ರ ಸರ್ಕಾರಿ ನೌಕರರ ಸಮಾನವಾಗಿ ಡಿಎ ನೀಡುವಂತೆ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಬಾಕಿ ಮೊತ್ತದ ಶೇ.25ರಷ್ಟು ಪಾವತಿಸಲು ಸೂಚಿಸಿದ್ದರೂ, ರಾಜ್ಯ ಸರ್ಕಾರವು ಹಣಕಾಸಿನ ಬಿಕ್ಕಟ್ಟನ್ನು ಉಲ್ಲೇಖಿಸಿ ಕಾಲಾವಕಾಶ ಕೋರಿತ್ತು. ವೇಳಾಪಟ್ಟಿಯ ಅಧಿಕೃತ ಘೋಷಣೆಗೆ ಮೊದಲು ರಾಜ್ಯ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳು, ಇತ್ತೀಚಿನ ಗೌರವಧನ ಹೆಚ್ಚಳ ಮತ್ತು ಡಿಎ ಸೌಲಭ್ಯಗಳು ಸೇರಿದಂತೆ ಎಲ್ಲವೂ ಸಿಂಧುವಾದ ಕ್ರಮಗಳೆಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

**ಅರ್ಚಕರು, ಮೌಲ್ವಿಗಳ ಭತ್ಯೆ ಹೆಚ್ಚಳ:** ಇದೇ ವೇಳೆ ಪಶ್ಚಿಮ ಬಂಗಾಳ ಸರ್ಕಾರ ಅರ್ಚಕರು ಮತ್ತು ಮೌಲ್ವಿಗಳಿಗೆ ನೀಡಲಾಗುವ ಗೌರವಧನದಲ್ಲಿ 500 ಹೆಚ್ಚಳ ಮಾಡಿದ್ದು ಒಟ್ಟಾರೆ ಮಾಸಿಕ 2,000 ರೂ. ಮಾಡಿದೆ. ನಮ್ಮ ಸಮುದಾಯಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನವನ್ನು ಉಳಿಸಿಕೊಳ್ಳುವ ಸೇವೆ ಸಲ್ಲಿಸುವ ನಮ್ಮ ಪುರೋಹಿತರು ಮತ್ತು ಮೌಲ್ವಿಗಳ ಮಾಸಿಕ ಗೌರವಧನದಲ್ಲಿ 500 ರೂ. ಹೆಚ್ಚಳ ಘೋಷಿಸಲು ಸಂತೋಷವಾಗಿದೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

### ಕೌಡಿಯಾರ್ ಅರಮನೆ: ಅಪಾರ ಮೌಲ್ಯ ಚಿನ್ನ ಕಳವು

• **ತಿರುವನಂತಪುರಂ(ಕೇರಳ):** ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೆರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎಫ್‌ಐಆರ್ ಪ್ರಕಾರ, ಈ ಕಳ್ಳತನವು 2025ರ ಅಕ್ಟೋಬರ್ ಮತ್ತು ನವೆಂಬರ್ ನಡುವಿನ ಅವಧಿಯಲ್ಲಿ ನಡೆದಿರಬಹುದು ಎಂದು ಶಂಕಿಸಲಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ ಅರಮನೆಗೆ ನುಗ್ಗಿ, ದೂರುದಾರರ ಮಲಗುವ ಕೋಣೆಯಲ್ಲಿದ್ದ ಕಬ್ಬಿಣದ ಕಪಾಟಿನಲ್ಲಿ ಇರಿಸಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದಾನೆ ಎಂದು ತಿಳಿದುಬಂದಿದೆ. ಕಳ್ಳತನವಾದ ವಸ್ತುಗಳಲ್ಲಿ ಅಮೂಲ್ಯ ಹರಳುಗಳಿಂದ ಅಲಂಕರಿಸಲ್ಪಟ್ಟ ಆಭರಣಗಳು, ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಚಿತ್ರದ ಪೆಂಡೆಂಟ್ ಹಾಗೂ ವಿದೇಶಗಳಿಂದ ತರಿಸಲಾದ ಅಪರೂಪದ ಪ್ರಾಚೀನ ಆಭರಣಗಳು ಸೇರಿವೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಾರೆ ಸುಮಾರು 2 ಕೋಟಿ ರೂ. ಮೌಲ್ಯದ ಆಭರಣಗಳು ಮತ್ತು ಪ್ರಾಚೀನ ವಸ್ತುಗಳು ಕಳುವಾಗಿವೆ ಎಂದು ತಿಳಿದುಬಂದಿದೆ.

ಈ ಪ್ರಕರಣದಲ್ಲಿ ಈಗ ಎಫ್‌ಐಆರ್ ದಾಖಲಾಗಿದ್ದು, ಕಳೆದ ನಾಲ್ಕು ತಿಂಗಳಿನಿಂದ ಪೊಲೀಸರು ಪ್ರಾಥಮಿಕ ತನಿಖೆ ನಡೆಸುತ್ತಿದ್ದರು. ತನಿಖೆಯನ್ನು ಅಧಿಕೃತವಾಗಿ ಮುಂದುವರಿಸಲು ಇದೀಗ ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಂಜಯ್ ಕುಮಾರ್ ಗುರುದಿನ್ ತಿಳಿಸಿದ್ದಾರೆ.

### ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ ಪ್ರಮಾಣ 77 ಲಕ್ಷಕ್ಕೆ ಕುಸಿತ

• **ಹೊಸದಿಲ್ಲಿ:** ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ 88.8 ಲಕ್ಷಗಳಿಂದ 77 ಲಕ್ಷಗಳಿಗೆ ಕುಸಿದಿದೆ. ಅಂದರೆ ಜನರು ಹೆದರಿಕೆಯಿಂದಲೇ ಗ್ಯಾಸ್ ಖರೀದಿಗೆ ಮುಗಿಬೀಳುತ್ತಿದ್ದ ಸನ್ನಿವೇಶ ಅಲ್ಪಮಟ್ಟಿಗೆ ಕಡಿಮೆಯಾಗಿದೆ. ಇದೇ ವೇಳೆ ಪೆಟ್ರೋಲ್, ಡೀಸೆಲ್ ಅಥವಾ ಅಡುಗೆ ಅನಿಲಗಳ ಕೊರತೆಯಿಲ್ಲ, ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹೊರತೂ ದೇಶದಲ್ಲಿ ಇವುಗಳ ಪೂರೈಕೆ ವ್ಯವಸ್ಥೆ ಸ್ಥಿರವಾಗಿದೆ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಆದರೆ, ಆನ್‌ಲೈನ್ ಮುಖೇನ ಎಲ್‌ಪಿಜಿ ಬುಕ್ಕಿಂಗ್ ಶೇ.84 ರಿಂದ ಶೇ.87ಕ್ಕೇರಿದೆ. ಗ್ಯಾಸ್ ಸಿಗದಿದ್ದರೆ ಏನು ಮಾಡುವುದೆಂಬ ಹೆದರಿಕೆಯಿಂದ ಎಲ್‌ಪಿಜಿ ಡೀಲರ್‌ಶಿಪ್‌ಗಳ ಬಳಿ ಸರತಿಯಲ್ಲಿ ನಿಲ್ಲುವ ಬದಲು, ಡಿಜಿಟಲ್ ಮುಖೇನ ಬುಕ್ ಮಾಡಿ ಎಂಬ ತೈಲ ಮಾರ್ಕೆಟಿಂಗ್ ಕಂಪನಿಗಳ ಅಭಿಯಾನದ ಪರಿಣಾಮ, ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಶೇಕಡಾವಾರು ಹೆಚ್ಚತೊಡಗಿದೆ.

ದೇಶೀಯ ತೈಲ ಸಂಸ್ಕರಣಾಗಾರಗಳು ಅತ್ಯುನ್ನತ ಸಾಮರ್ಥ್ಯದಿಂದ ಕಾರ್ಯನಿರ್ವಹಿಸುತ್ತಿದ್ದು, ಸಾಕಷ್ಟು ಕಚ್ಚಾತೈಲ ದಾಸ್ತಾನನ್ನು ಕಾಯ್ದುಕೊಳ್ಳುತ್ತಿವೆ.

### ಪಶ್ಚಿಮ ಬಂಗಾಳ, ಕೇರಳದಲ್ಲಿ ನಿಕಟ ಸ್ಪರ್ಧೆ: ಸಮೀಕ್ಷೆ

## ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?

• **ಹೊಸದಿಲ್ಲಿ:** ಒಂದು ಕೇಂದ್ರಾಡಳಿತ ಪ್ರದೇಶ ಪುದುಚೇರಿ ಸೇರಿದಂತೆ ಒಟ್ಟು ಐದು ರಾಜ್ಯಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ನಾಲ್ಕು ಪ್ರಮುಖ ರಾಜ್ಯಗಳ ಚುನಾವಣಾ ಪೂರ್ವ ಸಮೀಕ್ಷೆಯೂ ಬಹಿರಂಗವಾಗಿದೆ.



ಅಸ್ಸಾಂನಲ್ಲಿ ಮತ್ತೆ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದಿರುವ ಸಮೀಕ್ಷೆ, ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದಿದೆ. ಹಾಗೆಯೇ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಭಾರೀ ಸ್ಪರ್ಧೆ ಏರ್ಪಡಲಿದೆ ಎಂದಿದ್ದರೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ ಎಂದಿದೆ.

ಅಸ್ಸಾಂನಲ್ಲಿ ಮತ್ತೆ ಕಾಂಗ್ರೆಸ್ ಹಿಂದೆ ಬೀಳಲಿದ್ದು, 126 ಕ್ಷೇತ್ರಗಳ ಈ ವಿಧಾನಸಭೆಯಲ್ಲಿ 26-28ರಲ್ಲಿ ಗೆಲ್ಲಬಹುದು ಎಂದಿದೆ. ಆದರೆ, ಬಿಜೆಪಿ ಇಲ್ಲಿ 96ರಿಂದ 98ರಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದೆ. ಇತರೆಯವರು 2-8ರಲ್ಲಿ ಗೆಲ್ಲಬಹುದು ಎಂದಿದೆ.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿಯ ಎನ್‌ಡಿಎ ಒಕ್ಕೂಟ 114-127ರಲ್ಲಿ ಗೆಲುವು, ಡಿಎಂಕೆ-ಕಾಂಗ್ರೆಸ್ ಒಕ್ಕೂಟ 104ರಿಂದ 114, ನಟ ವಿಜಯ್ ಅವರ ಟಿವಿಕೆ 6.12 ಮತ್ತು ಇತರೆಯವರು 1-6ರಲ್ಲಿ ಗೆಲ್ಲಬಹುದು ಎಂದಿದೆ.

**ಕೇರಳ**
- ಎಡರಂಗ- 61-71
- ಕಾಂಗ್ರೆಸ್ - 58-69
- ಎನ್‌ಡಿಎ - 2

**ಪಶ್ಚಿಮ ಬಂಗಾಳ**
- ಟಿಎಂಸಿ - 155-170
- ಬಿಜೆಪಿ - 100-115
- ಇತರೆ - 5-7

### ಆರೋಗ್ಯ ಬಜೆಟ್‌ನಿಂದ ವಾರ್ಷಿಕ 150 ಕೋಟಿ ರೂ. ಕಾಂಗ್ರೆಸ್ ಜೇಬಿಗೆ

## ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ

• **ಗುವಾಹತಿ:** ಅಸ್ಸಾಂನಲ್ಲಿ 15 ವರ್ಷಗಳ ಕಾಲ ಆಡಳಿತದಲ್ಲಿದ್ದಾಗ ರಾಜ್ಯ ಆರೋಗ್ಯ ಬಜೆಟ್‌ನಿಂದ ವರ್ಷಕ್ಕೆ 150 ಕೋಟಿ ರೂ.ಗಳನ್ನು ಕಾಂಗ್ರೆಸ್ ಜೇಬಿಗೆ ಹಾಕಿಕೊಳ್ಳುತ್ತಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಏಕಕಾಲಕ್ಕೆ ಬಿಜೆಪಿ ತನ್ನ 10 ವರ್ಷಗಳ ಆಳ್ವಿಕೆಯಲ್ಲಿ ಸ್ವಾಸ್ಥ್ಯ ರಂಗವನ್ನು ಜನಪರವಾಗಿ ಪರಿವರ್ತಿಸಿದೆ ಎಂದು ಹೇಳಿದರು. ಮಾತ್ರವಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಅಸ್ಸಾಂ ವೈದ್ಯಕೀಯ ಚಿಕಿತ್ಸಾ ರಂಗ ಮತ್ತು ಶಿಕ್ಷಣ ರಂಗಗಳಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರು.

ಕಾಂಗ್ರೆಸ್ ತನ್ನ ನಾಯಕರ ಕುಟುಂಬಗಳ ಹಣಕಾಸು ಆರೋಗ್ಯ ಬಗ್ಗೆ ಮಾತ್ರ ಚಿಂತನೆ ನಡೆಸಿದ್ದರಿಂದ 10 ವರ್ಷಗಳ ಹಿಂದೆ ಅಸ್ಸಾಂನಲ್ಲಿ ಆರೋಗ್ಯ ರಂಗವು ಅಧೋಗತಿಗೆ ಜಾರಿತ್ತು. ಕಾಂಗ್ರೆಸ್ ಆಳ್ವಿಕೆಯ 2016ರವರೆಗೂ ರಾಜ್ಯದ ಸ್ವಾಸ್ಥ್ಯ ರಂಗದಲ್ಲಿ ಭಾರೀ ಭ್ರಷ್ಟಾಚಾರ ತಾಂಡವಿಸಿತ್ತು ಎಂದವರು ಆಪಾದಿಸಿದರು.



ಸುಮಾರು 2,092 ಕೋಟಿ ಮೊತ್ತದ ಸ್ವಾಸ್ಥ್ಯಪರ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ಹಲವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು.

**ಹುಟ್ಟಿರದ 9 ಲಕ್ಷ ಅಸ್ವಸ್ಥ ಮಕ್ಕಳ ಚಿಕಿತ್ಸೆಯ ನೆಪ:** ಆರೋಗ್ಯ ಬಜೆಟ್‌ನಿಂದ ಕಾಂಗ್ರೆಸ್ ಪ್ರತಿ ವರ್ಷವೂ ಸುಲಿಗೆ ಮಾಡುತ್ತಿದ್ದ ಬರೋಬ್ಬರಿ 150 ಕೋಟಿ ರೂಗಳನ್ನು, ಈ ಭೂಮಿಗೇ ಬಂದಿರದ 9 ಲಕ್ಷ ಮಕ್ಕಳ ಚಿಕಿತ್ಸೆಗೆ ಮತ್ತು ಅಸ್ತಿತ್ವದಲ್ಲೇ ಇಲ್ಲದ 390 ಅಂಗನವಾಡಿ ಕೇಂದ್ರಗಳಿಗೆ ವ್ಯಯಿಸುತ್ತಿರುವುದಾಗಿ ದಾಖಲೆಗಳಲ್ಲಿ ತೋರಿಸುತ್ತಿತ್ತು ಎಂದು ಶಾ ಹೇಳಿದರು.

### ರಾಹುಲ್‌ಗೆ ಬ್ರೇಕ್‌ಫಾಸ್ಟ್ ಮಾಡೋ ಜಾಗ ಗೊತ್ತಿಲ್ಲ!

ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡು, ಬಿಜೆಪಿ ಮತ್ತು ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶವನ್ನು ಅವಮಾನಿಸುವ ರಾಹುಲ್ ನಡೆಯನ್ನು ಯಾರೇ ಭಾರತೀಯರು ಬೆಂಬಲಿಸುವುದಿಲ್ಲ, ಕಾಂಗ್ರೆಸಿಗರು ಎಐ ಶೃಂಗಸಭೆ ಸಂದರ್ಭ ಶರ್ಟ್‌ರಹಿತವಾಗಿ ಪ್ರತಿಭಟಿಸಿದ್ದು ತೀರಾ ನಾಚಿಕೆಗೇಡು. ನಾವು ಕೂಡ ವಿಪಕ್ಷ ಸ್ಥಾನದಲ್ಲಿದ್ದು ಸರಕಾರದ ವಿರುದ್ಧ ಪ್ರತಿಭಟಿಸಿದ್ದೇವೆ, ಪ್ರತಿಭಟನೆಗೊಂದು ರೀತಿ ನೀತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಚಿವ ಶಾ, ಪ್ರಜಾಸತ್ತೆಯಲ್ಲಿ ಸಂಸತ್ತಿಗೆ ಪವಿತ್ರ ಜಾಗವಿದೆ. ಸಂಸತ್‌ಭವನದ ಮೆಟ್ಟಿಲುಗಳನ್ನು ಧರಣಿಗೂ ಬಳಸುವಂತಿಲ್ಲ, ಆದರೆ ಇದರ ಮಹತ್ತ್ವವನ್ನೇ ಅರಿಯದ ರಾಹುಲ್ ಗಾಂಧಿ ಸಂಸತ್ತಿನ ಮೆಟ್ಟಿಲಲ್ಲೇ ಕುಳಿತು ಚಹಾ-ಪಕೋಡಾ ತಿನ್ನುತ್ತಿದ್ದದ್ದು ಸರಿಯಲ್ಲ ಎಂದರು.

## ರಾಮ ಬಾಣ




### ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹ | ಆಯ್ಕೆ ಸಮಿತಿಗೆ ಪತ್ರ

# ವೈರಮುತ್ತು ಜ್ಞಾನಪೀಠ ಪ್ರಶಸ್ತಿ ಮರುಪರಿಶೀಲಿಸಿ

**ಬೆಂಗಳೂರು:** ವೈರಮುತ್ತು ಅವರಿಗೆ ಘೋಷಣೆಯಾಗಿರುವ ಜ್ಞಾನಪೀಠ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹಿಸಿದೆ.

ಈ ಬಗ್ಗೆ ಜ್ಞಾನಪೀಠ ಪ್ರಶಸ್ತಿಯ ಆಯ್ಕೆ ಸಮಿತಿಗೆ ಪತ್ರ ಬರೆದ ಪರಿಷತ್‌ನ ಅಧ್ಯಕ್ಷ ಎಸ್.ಜಿ.ಕೋಟಿ, ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತವಾದ ಜ್ಞಾನಪೀಠ ಪ್ರಶಸ್ತಿಗೆ ಅದರದ್ದೇ ಆದ ಪರಂಪರೆ, ಘನತೆ ಮತ್ತು ಪಾವಿತ್ರ್ಯತೆ ಇದೆ. ಈ ಪ್ರಶಸ್ತಿಯು ಕೇವಲ ಒಬ್ಬ ವ್ಯಕ್ತಿಯ ಸಾಹಿತ್ಯಕ ಸಾಧನೆಯನ್ನು ಮಾತ್ರವಲ್ಲದೆ, ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ ಎಂದು ನಾವು ದೃಢವಾಗಿ ನಂಬಿದ್ದೇವೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕವಿ ವೈರಮುತ್ತು ಅವರಿಗೆ ಈ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಿರುವುದು ಸಮಾಜದಲ್ಲಿ ತೀವ್ರ ಕಳವಳವನ್ನು ಉಂಟುಮಾಡಿದೆ ಹಾಗೂ ಅನೇಕರು ತಮ್ಮ ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ನಡೆದ ಮೀಟೂ ಚಳವಳಿಯ ಸಂದರ್ಭದಲ್ಲಿ ಅವರ ಮೇಲೆ

> ಜ್ಞಾನಪೀಠ ಪ್ರಶಸ್ತಿ ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ

ಕೇಳಿಬಂದಿರುವ ಗಂಭೀರ ಸ್ವರೂಪದ ಲೈಂಗಿಕ ಕಿರುಕುಳದ ಆರೋಪಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿವೆ. ಕೇವಲ ಒಬ್ಬಿಬ್ಬರಲ್ಲ, ಬದಲಾಗಿ ಅನೇಕ ಮಹಿಳಾ ಕಲಾವಿದರು, ಗಾಯಕಿಯರು ಮತ್ತು ಬರಹಗಾರ್ತಿಯರು ಅವರ ವಿರುದ್ಧ ಅತ್ಯಂತ ನೋವಿನಿಂದ ತಮ್ಮ ಕಹಿ ಅನುಭವಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

ಇಂದಿಗೂ ಈ ಗಂಭೀರ ದೂರುಗಳ ಬಗ್ಗೆ ಸಮರ್ಪಕವಾದ ತನಿಖೆ ನಡೆದು, ಅವರ ಮೇಲಿನ ಕಳಂಕ ನಿವಾರಣೆಯಾಗಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದೇ ಹಿನ್ನೆಲೆಯಲ್ಲಿ, ಹಿಂದೆ ಕೇರಳದ ಒಎನ್‌ವಿ ಸಾಹಿತ್ಯ ಪುರಸ್ಕಾರವನ್ನು ಅವರಿಗೆ ನೀಡುವ ನಿರ್ಧಾರವನ್ನು ಸಾರ್ವಜನಿಕರ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರರ ತೀವ್ರ ವಿರೋಧದ ಕಾರಣದಿಂದಾಗಿ ಮರುಪರಿಶೀಲಿಸಲಾಯಿತು ಮತ್ತು ಅಂತಿಮವಾಗಿ ಆ ಪ್ರಶಸ್ತಿಯು ಹಿಂಪಡೆಯಲ್ಪಟ್ಟಿದೆ.

ಹಾಗೇ ಮಹಿಳೆಯರ ಘನತೆಗೆ ಕುಂದು ತಂದಿರುವ ಇಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಮತ್ತು ನೈತಿಕವಾಗಿ ಪ್ರಶ್ನೆಗೀಡಾಗಿರುವ ವ್ಯಕ್ತಿಗೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯನ್ನು ನೀಡುವುದು, ಈ ಪುರಸ್ಕಾರದ ಘನತೆಗೆ ಚ್ಯುತಿ ತರಬಹುದು ಎಂಬುದು ನಮ್ಮ ಆತಂಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಜ್ಞಾನಪೀಠದಂತಹ ಗೌರವಾನ್ವಿತ ಪ್ರಶಸ್ತಿಯು ಯಾವುದೇ ರೀತಿಯ ವಿವಾದಗಳಿಗೆ ಮತ್ತು ಕಳಂಕಗಳಿಗೆ ಹೊರತಾಗಿರಬೇಕು ಎಂಬುದು ನಮ್ಮ ಕಳಕಳಿಯಾಗಿದೆ. ಮಹಿಳೆಯರ ಘನತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅತ್ಯಂತ ಸಹಾನುಭೂತಿಯಿಂದ ಮತ್ತು ಗಂಭೀರವಾಗಿ ಪರಿಗಣಿಸಿ, ವೈರಮುತ್ತು ಅವರಿಗೆ ಘೋಷಿಸಿರುವ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಪತ್ರದಲ್ಲಿ ವಿನಂತಿಸಿದ್ದಾರೆ.

## ಕಿಡಿ ನುಡಿ

**ವಾಸುದೇವರಾವ್ ಕಕ್ಕೆನೇಜಿ**

ಜಾತಿ, ಮತ, ಪಂಥಗಳು ಬಿಡಿ ಬಿಡಿ ಹೂವುಗಳು ಇದ್ದಂತೆ.ಇವುಗಳನ್ನು ಸಾಮರಸ್ಯ ಎಂಬ ದಾರದಲ್ಲಿ ಪೋಣಿಸುವುದೇ ಹಿಂದುತ್ವ
- ರಘುನಂದನ

**-ಜಾತಿ, ಮತ, ಪಂಥಗಳನ್ನು ಅಳಿಸಿ ಹಿಂದುತ್ವವನ್ನು ದೂಷಿಸಿ ಹೊಸ ಪಂಥವನ್ನು ನಿರ್ಮಿಸಿ ಧರ್ಮವೆಂಬ ಆಕರ್ಷಕ ಬೋರ್ಡನ್ನು ಹಾಕಿಕೊಂಡು ಮಾಡಬಾರದ್ದನ್ನು ಮಾಡುವುದು ಮೂಲಭೂತವಾದ!**

## ದಿನ ಭವಿಷ್ಯ

**ಮೇಷ** ಗ್ರಹಗತಿ ಪೂರಕ. ವೃತ್ತಿಯಲ್ಲಿ ನಿಮ್ಮ ಸಾಮರ್ಥ್ಯ ತೋರುವಿರಿ. ವಿವಾಹಾಕಾಂಕ್ಷಿಗಳಿಗೆ ಸಂಗಾತಿ ಲಭ್ಯ. ಹಣದ ಸಮಸ್ಯೆ ಪರಿಹಾರ.

**ವೃಷಭ** ನಿಮ್ಮ ಕೆಲಸ ಸಾಧಿಸಲು ಹೆಚ್ಚಿನ ಪ್ರಯತ್ನ ಬೇಕು. ಆರ್ಥಿಕ ಉನ್ನತಿಯ ದಾರಿ ತೋರಲಿದೆ. ಪ್ರೀತಿಯಲ್ಲಿ ಹಿನ್ನಡೆ ಉಂಟಾದೀತು.

**ಮಿಥುನ** ಇಂದು ದುಡುಕು ಬಿಟ್ಟು ತಾಳ್ಮೆಯಿಂದ ವ್ಯವಹರಿಸಿ. ಕಾರ್ಯ ಸುಲಲಿತ. ಮಹತ್ವದ ನಿರ್ಣಯ ಇಂದು ತಾಳಬೇಡಿ. ಸ್ವಲ್ಪ ಕಾಯಿರಿ.

**ಕಟಕ** ವೃತ್ತಿಯಲ್ಲಿ ಯಶ. ಎಲ್ಲರು ಮೆಚ್ಚುವ ನಿರ್ವಹಣೆ. ಕುಟುಂಬದ ಹಿತಾಸಕ್ತಿಗೆ ಹೆಚ್ಚು ಗಮನ ಕೊಡಿ. ತುಸು ಬೇಸರದ ಭಾವ ಆವರಿಸಲಿದೆ.

**ಸಿಂಹ** ಈ ದಿನ ಉತ್ತಮ ಫಲ ತರಲಿದೆ. ಮಹತ್ವದ ನಿರ್ಧಾರ ಫಲದಾಯಕ. ಏಕಾಂಗಿಗಳಿಗೆ ಪ್ರೀತಿಯಲ್ಲಿ ಯಶಸ್ಸು. ಉದ್ಯೋಗ ಅವಕಾಶ ಉಜ್ವಲ.

**ಕನ್ಯಾ** ವಿಶ್ವಾಸ ವೃದ್ಧಿಯ ದಿನ. ಕಠಿಣ ಕಾರ್ಯವೂ ಇಂದು ಸುಗಮವಾಗಿ ಸಾಗಲಿದೆ. ಹಣ ಗಳಿಕೆ. ಸಾಂಸಾರಿಕ ಬಿಕ್ಕಟ್ಟು ಪರಿಹಾರ ಕಾಣಲಿದೆ.

**ತುಲಾ** ಕೈಗೆ ಎಟುಕದ ಆಕಾಂಕ್ಷೆ ಬಿಡಿ. ನಿಮ್ಮ ಮಿತಿಯಲ್ಲೆ ವ್ಯವಹರಿಸಿ. ಎಲ್ಲರ ಜತೆ ಆತ್ಮೀಯವಾಗಿ ವರ್ತಿಸಿ. ಕೋಪತಾಪ ವಿರಸ ಸೃಷ್ಟಿಸಬಹುದು.

**ವೃಶ್ಚಿಕ** ಇಂದು ಕಠಿಣ ಪರಿಸ್ಥಿತಿ ಎದುರಿಸಿದರೂ ಆಪ್ತರಿಂದ ಬೆಂಬಲ. ಹಣ ಗಳಿಕೆ ಹೆಚ್ಚಳ. ಹಿರಿಯರಿಗೆ ಬೆನ್ನು ನೋವಿನಿಂದ ನಿರಾಳತೆ.

**ಧನು** ಅದೃಷ್ಟದ ದಿನ. ನೀವು ಬಯಸಿದ ಪ್ರಗತಿ ಸಾಧಿತ. ಮನೆಯಲ್ಲಿ ಹೆಚ್ಚು ಹೊಣೆಗಾರಿಕೆ. ದೈಹಿಕ ಬಸವಳಿಕೆ ಕಾಡಬಹುದು. ವಿಶ್ರಾಂತಿಗೆ ಗಮನಕೊಡಿ.

**ಮಕರ** ಕೌಟುಂಬಿಕ ಸಮ್ಮಿಲನ. ವ್ಯವಹಾರದಲ್ಲಿ ಯಶಸ್ಸು. ಇತರರ ಚುಚ್ಚುಮಾತಿಗೆ ತಲೆ ಕೆಡಿಸಿಕೊಳ್ಳದಿರಿ. ಆರ್ಥಿಕ ಒತ್ತಡ ಅಧಿಕ.

**ಕುಂಭ** ವೃತ್ತಿ ಸಂಬಂಧ ದೂರ ಪ್ರಯಾಣ ಸಾಧ್ಯತೆ. ಕಾರ್ಯ ಸಫಲ. ಸಾಂಸಾರಿಕ ಒತ್ತಡ ಹೆಚ್ಚು, ಧಾರ್ಮಿಕ ಚಟುವಟಿಕೆಯಿಂದ ಮನಸ್ಸಿಗೆ ನಿರಾಳತೆ.

**ಮೀನ** ಬಿಕ್ಕಟ್ಟು ಉಂಟಾದರೆ ಕ್ಷಿಪ್ರವಾಗಿ ಕಾರ್ಯಾಚರಿಸಿ. ಗುರಿ ಸಾಧನೆ ನಿಮಗೆ ಕಷ್ಟವಲ್ಲ, ಆದರೆ ಹಲವರ ವಿರೋಧ ಕಟ್ಟಿಕೊಳ್ಳುವಿರಿ. ತುಸು ಆರ್ಥಿಕ ನಷ್ಟ.

**ರಾಹುಕಾಲ: 7.30-9.00**
**ಗುಳಿಕಕಾಲ: 1.30-3.00**

ಅದೃಷ್ಟ ಸಂಖ್ಯೆ 5,0,4,1

### ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಿಸಿದ ಆಯೋಗ

# ಏಪ್ರಿಲ್ 9ಕ್ಕೆ ಮತದಾನ, ಮೇ 4 ಫಲಿತಾಂಶ




**ಬೆಂಗಳೂರು:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಗೆ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿದೆ. ಈ ಜಿಲ್ಲೆಗಳಲ್ಲಿ ಭಾನುವಾರದಿಂದಲೇ ಮಾದರಿ ನೀತಿ ಸಂಹಿತೆಯು ಜಾರಿಗೆ ಬಂದಿದೆ.

ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಎರಡು ಕ್ಷೇತ್ರಗಳಲ್ಲಿ ಸೋಮವಾರ ಅಧಿಸೂಚನೆ ಪ್ರಕಟಣೆಗೊಳ್ಳಲಿದೆ. ಮಾ.23 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಏ.9ರಂದು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರಿದ್ದಾರೆ. ಇವರಲ್ಲಿ 1,13,654 ಪುರುಷ ಹಾಗೂ 1,17,986 ಮಹಿಳಾ ಮತದಾರರಿದ್ದಾರೆ.ಯುವ ಮತದಾರರು 2,774 ಇದ್ದು, ಇತರರು 43 ಹಾಗೂ 44 ಮಂದಿ ನೂರು ವರ್ಷ ದಾಟಿದ ಹಿರಿಯರಿದ್ದಾರೆ.

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದಾರೆ. ಇವರಲ್ಲಿ 1,26,761 ಪುರುಷ ಹಾಗೂ 1,32,476 ಮಹಿಳೆಯರಿದ್ದಾರೆ. ಯುವ ಮತದಾರರು 4,188, ಇತರರು 23 ಹಾಗೂ 38 ಮಂದಿ ನೂರು ವರ್ಷ ದಾಟಿದ ಹಿರಿಯ ಮತದಾರರಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಒಟ್ಟು 5,151 ವಿಶಿಷ್ಟಚೇತನ ಮತದಾರರನ್ನು ಗುರುತಿಸಲಾಗಿದೆ.

**603 ಮತದಾನ ಕೇಂದ್ರಗಳು:** ಬಾಗಲಕೋಟೆಯಲ್ಲಿ 319 ಮತ್ತು ದಾವಣಗೆರೆ ದಕ್ಷಿಣದಲ್ಲಿ 284 ಸೇರಿದಂತೆ ಒಟ್ಟು 603 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಎಲ್ಲಾ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ) ಮತ್ತು ವಿವಿ ಪ್ಯಾಟ್ ಬಳಸಲಾಗುವುದು. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ (ಸುಮಾರು ಶೇ.160 ರಿಂದ 200 ರಷ್ಟು) ಯಂತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳಲಾಗಿದೆ ಆಯೋಗ ತಿಳಿಸಿದೆ.

## ಉಭಯ ಪಕ್ಷಗಳಲ್ಲಿ ಹೆಚ್ಚಿದ ಟಿಕೆಟ್ ಕುತೂಹಲ

**ಬಾಗಲಕೋಟೆ:** ಬಾಗಲಕೋಟೆಯ ಉಪಚುನಾ ವಣೆಗೆ ಚುನಾವಣಾ ಆಯೋಗ ಮುಹೂರ್ತ ನಿಗದಿ ಮಾಡಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಯಾರಿಗೆ ಸಿಗುತ್ತದೆ ಎಂಬುದು ಮಾತ್ರ ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಪಕ್ಷದ ದಿ.ಎಚ್.ವೈ.ಮೇಟಿಯವರ ನಿಧನದ ನಂತರ ಅವರ ಸ್ಥಾನಕ್ಕೆ ಈಗ ಉಪಚುನಾವಣೆ ನಡೆಯಲಿದ್ದು, ಬಾಗಲಕೋಟೆ ಮತಕ್ಷೇತ್ರದಲ್ಲಿ ಎಚ್.ವೈ.ಮೇಟಿಯವರ ಕುಟುಂಬಕ್ಕೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಾಗಿದ್ದರೆ ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರಿಗೆ ಬಿಜೆಪಿಯಿಂದ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿದೆ. ಇನ್ನೂ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಅವರು ಕೂಡ ಆಕಾಂಕ್ಷಿಯಾಗಿದ್ದು ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಎಲ್ಲ ನಾಯಕರು ಬದ್ಧರಾಗಿದ್ದಾರೆ.

**ಸಿಎಂ ಬಂದರೂ ಘೋಷಣೆಯಾಗದ ಟಿಕೆಟ್:** ನವನಗರದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಂದ ಸಂದರ್ಭದಲ್ಲಿ ವೇದಿಕೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿಯೂ ಕೂಡ ಯಾರಿಗೆ ಟಿಕೆಟ್ ಕೊಡುತ್ತೇವೆ ಎಂಬುದು ಹೇಳಲಿಲ್ಲ, ಇನ್ನೂ ಡಿ.ಕೆ.ಶಿವಕುಮಾರ ಮೇಟಿಯವರು ಎಷ್ಟು ಮತಗಳ ಅಂತರದಿಂದ ಗೆದ್ದಿದ್ದರೂ ಡಬಲ್ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕು ಎಂದು ಹೇಳಿದನ್ನು ಬಿಟ್ಟರೆ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದು ಮಾತ್ರ ಸುಳಿವು ನೀಡಲಿಲ್ಲ.

ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆ ಹೊರಡಿಸಿ ಏ.9ಕ್ಕೆ ಮತದಾನ ನಡೆಯಲಿದ್ದು, ಮಾ.23ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ ಪ್ರಕಟ ಮಾಡಿದ್ದರಿಂದ ಆಕಾಂಕ್ಷಿಗಳಲ್ಲಿ ಮಾತ್ರ ಕುತೂಹಲ ಮೂಡಿಸಿದೆ. ಚುನಾವಣಾ ಅಭ್ಯರ್ಥಿಗಳಿಗೆ ಸದ್ಯಕ್ಕೆ ಸಮಯಾವಕಾಶ ಕಡಿಮೆ ಇದ್ದಿದ್ದರಿಂದ ಎಷ್ಟು ಬೇಗ ಟಿಕೆಟ್ ಘೋಷಣೆ ಮಾಡುತ್ತಾರೆ, ಅಷ್ಟು ಒಳ್ಳೆಯದಾಗಲಿದೆ ಎಂಬುದು ಆಕಾಂಕ್ಷಿಗಳ ಮನದಲ್ಲಿ ಮೂಡಿದೆ.

ಬಾಗಲಕೋಟೆ ಮತಕ್ಷೇತ್ರದಲ್ಲಿ 143 ನಗರ, 176 ಗ್ರಾಮೀಣ ಪ್ರದೇಶದಲ್ಲಿ ಬೂತ್‌ಗಳಿದ್ದು 2,59,260 ಮತದಾರರು ಇದ್ದಾರೆ. ಈ ಬಾರಿ ನಡೆಯುವ ವಿಧಾನಸಭೆಯ ಉಪಚುನಾವಣೆಯ ಕಾವು ಮಾತ್ರ ಬಾಗಲಕೋಟೆಯಲ್ಲಿ ಹೆಚ್ಚಾಗಿದೆ ಆದರೆ ಅಭ್ಯರ್ಥಿಗಳ ಎರಡೂ ಪಕ್ಷದಲ್ಲಿ ಘೋಷಣೆ ಮಾತ್ರ ಬಾಕಿ ಉಳಿದಿದೆ.

### ಪಕ್ಷ, ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ

**ದಾವಣಗೆರೆ:** ಸಾಕಷ್ಟು ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮಹೂರ್ತ ಫಿಕ್ಸ್ ಆಗಿದ್ದು, ಮಿನಿ ದಂಗಲ್ ದಿನಾಂಕ ಘೋಷಣೆಯಾಗಿರುವುದು ರಾಜಕೀಯ ಪಕ್ಷ ಹಾಗೂ ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ ಮೂಡಿಸಿದೆ.

ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಪ್ರತ್ಯೇಕಗೊಂಡು ಅಸ್ತಿತ್ವಕ್ಕೆ ಬಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರು ಸೇರಿದಂತೆ ಅಹಿಂದ ಮತದಾರರ ಸಂಖ್ಯೆ ನಿರ್ಣಾಯಕವಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಕಾಂಗ್ರೆಸ್ ಅಧಿಪತ್ಯ ಸಾಧಿಸುತ್ತಿದ್ದರೂ ಬಿಜೆಪಿ ಕೂಡ ವಿರೋಚಿತ ಸ್ಪರ್ಧೆ ನೀಡುತ್ತಾ ಗೆಲುವಿಗಾಗಿ ಕಸರತ್ತು ಮಾಡುತ್ತಲೇ ಬಂದಿದೆ. ಹೀಗಾಗಿ ಪ್ರಸ್ತುತ ಉಪಚುನಾವಣೆಯು ಉಭಯ ಪಕ್ಷಗಳ ಪ್ರತಿಷ್ಠೆಯ ಕಣವಾಗಿದೆ. ಕ್ಷೇತ್ರದಲ್ಲಿ ಪಾರುಪತ್ಯ ಮುಂದುವರೆಸಲು ಕಾಂಗ್ರೆಸ್ ಹವಣಿಸುತ್ತಿದ್ದರೆ ಈ ಬಾರಿ ಶತಾಯಗತಾಯ ಗೆಲುವು ಸಾಧಿಸಲೇಬೇಕೆಂಬ ಇರಾದೆ ಬಿಜೆಪಿ ಪಕ್ಷದ್ದಾಗಿದೆ. ಕ್ಷೇತ್ರದ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ನೇರ ಹಣಾಹಣಿ ನಡೆದಿದೆ. ಈ ಬಾರಿ ಕೂಡ ಅದೇ ರೀತಿಯ ಜಿದ್ದಾಜಿದ್ದಿಯ ಹೋರಾಟ ಜರುಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ.




ಉಭಯ ಪಕ್ಷಗಳಲ್ಲೂ ಅಧಿಕೃತ ಅಭ್ಯರ್ಥಿ ಹೆಸರು ಅಂತಿಮವಾಗಿಲ್ಲ, ಆದರೆ ಎರಡೂ ಪಕ್ಷಗಳಲ್ಲಿ ತಲಾ ಅರ್ಧ ಡಜನ್ ಆಕಾಂಕ್ಷಿಗಳು ಮಿನಿ ಸಮರದಲ್ಲಿ ಪಕ್ಷದ ಟಿಕೆಟ್ ಗಿಟ್ಟಿಸಲು ತಮ್ಮದೇ ಪ್ರಯತ್ನದಲ್ಲಿ ತೊಡಗಿದ್ದಾರೆ. ಚುನಾವಣೆ ದಿನಾಂಕ ಘೋಷಣೆವರೆಗೆ ಕಾದು ನೋಡುವ ತಂತ್ರ ಅನುಸರಿಸಿಕೊಂಡು ಬಂದಿದ್ದ ಪಕ್ಷದ ವರಿಷ್ಠ ನಾಯಕರು ಕೂಡ ಇದೀಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಡ್ಯಾಮೇಜ್ ಕಂಟ್ರೋಲ್ ಮಾಡುವ ಜೊತೆಗೆ ಪಕ್ಷದ ಗೆಲುವಿಗಾಗಿ ಗಟ್ಟಿ ನಿರ್ಧಾರ ಕೈಗೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದಾರೆ.

## ಮತಯುದ್ಧಕ್ಕೆ ವೇದಿಕೆ

ಪುಟ ೧ ➜ **ಶೇ.100 ವೆಬ್‌ಕಾಸ್ಟಿಂಗ್ ವ್ಯವಸ್ಥೆ:** ಚುನಾವಣೆಯಲ್ಲಿ ಪಾರದರ್ಶಕತೆ ಹಾಗೂ ಭದ್ರತೆಯನ್ನು ಹೆಚ್ಚಿಸಲು ಚುನಾವಣಾ ಆಯೋಗ ಹಲವು ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ಶೇ.100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಇದರಿಂದ ಮತದಾನದ ಪ್ರಕ್ರಿಯೆಯನ್ನು ನೇರವಾಗಿ ಮೇಲ್ವಿಚಾರಣೆ ಮಾಡಬಹುದು. ಜತೆಗೆ ಮತದಾರರಿಗೆ ಕುಡಿಯುವ ನೀರು, ಶೌಚಾಲಯ, ವೃದ್ಧರು ಮತ್ತು ವಿಶಿಷ್ಟಚೇತನರಿಗೆ ರ್‍ಯಾಂಪ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

### ನೀತಿಸಂಹಿತೆ ಜಾರಿ

ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣದಿಂದಲೇ ಸಂಬಂಧಿಸಿದ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಸರ್ಕಾರಗಳು ಯಾವುದೇ ಹೊಸ ಘೋಷಣೆಗಳು ಅಥವಾ ಯೋಜನೆಗಳನ್ನು ಪ್ರಕಟಿಸುವಲ್ಲಿ ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಚುನಾವಣೆಯ ಸಮಯದಲ್ಲಿ ಹಿಂಸಾಚಾರ, ಪ್ರಚೋದನೆ ಅಥವಾ ಅಕ್ರಮಗಳನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಚುನಾವಣಾ ಆಯೋಗ ಎಚ್ಚರಿಸಿದೆ. ಯಾವುದೇ ರೀತಿಯ ನಿಯಮ ಉಲ್ಲಂಘನೆ ಕಂಡುಬಂದರೆ ಕಾನೂನುಬದ್ಧವಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಸ್ಪಷ್ಟಪಡಿಸಿದರು.

### 20 ದೇಶಗಳ ಚುನಾವಣಾ ವೀಕ್ಷಕರು

ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಭಾರತದ ಚುನಾವಣಾ ವ್ಯವಸ್ಥೆ ಗಮನ ಸೆಳೆಯುತ್ತಿರುವ ಹಿನ್ನೆಲೆಯಲ್ಲಿ, ಸುಮಾರು 20 ದೇಶಗಳ ಚುನಾವಣಾ ವೀಕ್ಷಕರು ಈ ಪ್ರಕ್ರಿಯೆ ವೀಕ್ಷಿಸಲು ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಆಯೋಗ ತಿಳಿಸಿದೆ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ಕ್ರಮವೆಂದು ಅಧಿಕಾರಿಗಳು ಹೇಳಿದ್ದಾರೆ. ಒಟ್ಟಾರೆ, ಐದು ವಿಧಾನಸಭಾ ಚುನಾವಣೆಗಳು ದೇಶದ ರಾಜಕೀಯ ಭವಿಷ್ಯಕ್ಕೆ ಮಹತ್ವದ್ದಾಗಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಚುನಾವಣಾ ಆಯೋಗ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

## ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

ಪುಟ ೧ ➜ ಇಸ್ರೇಲ್ ರಕ್ಷಣಾ ಸೇವೆ ಮಾಗೆನ್ ಡೇವಿಡ್ ಆಡೋಮ್ ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ರಸ್ತೆಯಲ್ಲಿ ದೊಡ್ಡ ಗುಂಡಿ ಮತ್ತು ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಭಾರೀ ಹಾನಿ ಆಗಿರುವುದು ಸ್ಪಷ್ಟವಾಗಿ ಕಾಣಿಸಿದೆ. ಟೆಲ್ ಅವಿವ್ ಮೇಲೆ ಇರಾನ್ ನಡೆಸಿದ ಹೊಸ ದಾಳಿಗೆ 23 ಸ್ಥಳಗಳಲ್ಲಿ ಹಾನಿಯಾಗಿವೆ. ಒಂದು ಕಡೆ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿದೆ.

ಇಸ್ರೇಲ್ ಸೇನೆಯ ಪ್ರಕಾರ, ಇರಾನ್ ಕ್ಲಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸುತ್ತಿದೆ. ಇವು ಕೆಲವು ವಾಯು ರಕ್ಷಣಾ ವ್ಯವಸ್ಥೆಗಳನ್ನು ತಪ್ಪಿಸಿ ಹಲವು ಸ್ಥಳಗಳಲ್ಲಿ ಪರಿಣಾಮಕಾರಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

**ಯುಎಇಯಿಂದ ಅಮೆರಿಕ ದಾಳಿ:** ಇರಾನ್ ಅಮೆರಿಕ ಸೇನೆ ಯುಎಇಯಿಂದಲೇ ಖಾರ್ಗ್ ಮತ್ತು ಅಬು ಮೂಸಾ ದ್ವೀಪಗಳ ಮೇಲೆ ದಾಳಿ ನಡೆಸಿದೆಯೆಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಆರೋಪಿಸಿದ್ದಾರೆ. ಯುಎಇ ಭೂಭಾಗ ಮತ್ತು ವಾಯುಪ್ರದೇಶವನ್ನು ಬಳಸಿಕೊಂಡು ಅಮೆರಿಕ ದಾಳಿ ನಡೆಸಿದೆಯೆಂಬ ಇರಾನ್ ಆರೋಪವನ್ನು ಯುಎಇ ತಳ್ಳಿಹಾಕಿದ್ದು, ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

ಪುಟ ೧ ➜ ಭಾರತದ ಸಮಾಜ ಈ ದೃಷ್ಟಿ ಮತ್ತು ಪ್ರಯತ್ನದಲ್ಲಿ ಇರಬೇಕು. ಸಂಘವು ಜಗತ್ತಿನಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಬೆಂಬಲಿಗ ಎಂದು ಅಭಿಪ್ರಾಯಪಟ್ಟರು.

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ 71 ದೇಶಗಳ ಪ್ರತಿನಿಧಿಗಳಿಗೆ, ನೀವು ಯಾವ ದೇಶಗಳಲ್ಲಿ ಇದ್ದೀರಿ, ಅಲ್ಲಿನ ಆಹಾರವನ್ನು ಸೇವಿಸುತ್ತೀರಿ. ಆದ್ದರಿಂದ ಆ ದೇಶವನ್ನು ಸಮರ್ಥಗೊಳಿಸುವುದೂ ನಿಮ್ಮ ಕರ್ತವ್ಯವಾಗಿದೆ ಎಂದು ನಾವು ತಿಳಿಸಿದೆವು. ಇದು ವಿಶ್ವ ಕುಟುಂಬವೆಂಬ ಹಿಂದುತ್ವದ ದೃಷ್ಟಿಯಾಗಿದೆ ಎಂದರು.

## ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

ಪುಟ ೧ ➜ ಕಂದಹಾರ್‌ನಲ್ಲಿ ಸೇನಾ ಮೂಲಸೌಕರ್ಯಗಳನ್ನು ಮತ್ತು ಸೇನಾ ಸಾಮಗ್ರಿಗಳ ಸಂಗ್ರಹಾಗಾರಗಳನ್ನು ನಾಶ ಮಾಡಿರುವುದಾಗಿ ಪಾಕ್ ಹೇಳಿಕೊಂಡಿದೆ.

ಪಾಕಿಸ್ತಾನ ನಡೆಸಿದ ದಾಳಿಗೆ ಪ್ರತಿಯಾಗಿ ಡುರಾಂಡ್ ರೇಖೆ ಸಮೀಪ ಪಾಕ್ ಸೇನೆಯ ಮೇಲೆ ಪ್ರತಿದಾಳಿ ನಡೆಸಿರುವುದಾಗಿ ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ (ಎಂಒಡಿ) ಹೇಳಿದೆ. ಕುನಾರ್ ಮತ್ತು ನಂಗರ್‌ಹಾರ್ ಪ್ರದೇಶಗಳಲ್ಲಿ ಆಫ್ಘನ್ ಸೇನಾ ಕಾರ್ಯಾಚರಣೆ ನಡೆಸಿದ್ದು, ಪಾಕ್ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿರುವುದಾಗಿ ಎಂಒಡಿ ಹೇಳಿದೆ. ಕುನಾರ್ ಮತ್ತು ನಂಗರ್ ಹಾರ್ ಪ್ರದೇಶದಲ್ಲಿನ ಡುರಾಂಡ್ ರೇಖೆ ಬಳಿ ಆಫ್ಘನ್ ರಕ್ಷಣಾ ಪಡೆಗಳು ನಡೆಸಿದ ಕಾರ್ಯಾಚರಣೆ ವೇಳೆ 14 ಪಾಕಿಸ್ತಾನಿ ಸೈನಿಕರನ್ನು ಹೊಡೆದುರುಳಿಸಿದ್ದೇವೆ. ಇನ್ನೂ 11 ಪಾಕ್ ಸೈನಿಕರು ಗಾಯಗೊಂಡಿದ್ದಾರೆ ಎಂದು ಆಫ್ಘನ್ ರಕ್ಷಣಾ ಸಚಿವಾಲಯ ಹೇಳಿದೆ.

### ಪಾಕ್ ಮೇಲೆ ಆಫ್ಘನ್ ಡ್ರೋನ್ ದಾಳಿ?

ತಾಲಿಬಾನ್ ಸರ್ಕಾರ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ತಮ್ಮ ನಾಗರಿಕರನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದೆಯೆಂದು ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಆರೋಪಿಸಿದ್ದಾರೆ. ಕೆಲವೇ ಗಂಟೆಗಳಲ್ಲಿ ಪಾಕ್ ಆಫ್ಘನ್ ಡ್ರೋನ್ ಸಂಗ್ರಹಾಗಾರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದು ವರದಿಯಾಗಿದೆ.

## ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

ಪುಟ ೧ ➜ **ಪ್ರಭಾವಿಯಾಗಿತ್ತು ಹೇಳಿಕೆ:** ಲೋಕಸಭೆಯಲ್ಲಿ ತಮ್ಮ ವಿರುದ್ಧ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲವಾಗಿದೆ. ಈ ರಾಜಕೀಯ ದುಷ್ಕಾರ್ಯವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಸದನದ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ. ನಿರ್ಣಯ ವಿಫಲಗೊಂಡ ಬೆನ್ನಲ್ಲೇ ಸದನವನ್ನುದ್ದೇಶಿಸಿ ತಾವು ನೀಡಿದ ಹೇಳಿಕೆಯನ್ನು ನಾನು ಗಮನವಿಟ್ಟು ಆಲಿಸಿದ್ದೇನೆ. ಸಂಸದೀಯ ಇತಿಹಾಸ, ಸಭಾಪತಿಯಾಗಿ ತಮ್ಮ ಕರ್ತವ್ಯಗಳು ಮತ್ತು ನಿಯಮಗಳ ಸರ್ವೋಚ್ಚತೆಯನ್ನು ತಾವು ಅತ್ಯಂತ ಸಮತೋಲಿತವಾಗಿ, ತಾಳ್ಮೆಯಿಂದ ಹಾಗೂ ಸ್ಪಷ್ಟವಾಗಿ ಉಲ್ಲೇಖಿಸಿದ್ದು, ವಿವರಿಸಿದ್ದು ನಿಜಕ್ಕೂ ಪ್ರಭಾವಿಯಾಗಿತ್ತು. ಇದಕ್ಕಾಗಿ ತಮಗೆ ನನ್ನ ತುಂಬು ಪ್ರಶಂಸೆಗಳು. ನಿಮ್ಮ ಹೇಳಿಕೆ ಆ ನಿರ್ದಿಷ್ಟ ಕ್ಷಣಗಳಿಗೆ ಪ್ರತಿಕ್ರಿಯೆಯಷ್ಟೇ ಅಲ್ಲ, ಭಾರತೀಯ ಸಂಸದೀಯ ಪರಂಪರೆಗಳು ಮತ್ತು ಪ್ರಜಾತಾಂತ್ರಿಕ ಮರ್ಯಾದೆಯನ್ನು ಅತ್ಯಂತ ಗಾಢವಾಗಿ ಮತ್ತು ತುಲನಾತ್ಮಕವಾಗಿ ಎತ್ತಿಹಿಡಿದಿದೆ.

**ಮಿಲಿಯಂತರ ಜನರ ಭರವಸೆಗಳ ಪ್ರತಿಫಲನ:** ಸಾಂವಿಧಾನಿಕ ಸಂಸ್ಥೆಗಳು ಭಾರತೀಯ ಪ್ರಜಾಸತ್ತೆಯ ಮಹಾನ್ ಬಲವಾಗಿದೆ. ಸಾಂವಿಧಾನಿಕ ಸಂಸ್ಥೆಗಳ ಪೈಕಿ ಸಂಸತ್ತು ಪರಮೋಚ್ಚ ವೇದಿಕೆಯಾಗಿದೆ. ಸದನದಲ್ಲಿ ಎತ್ತುವ ಪ್ರತಿ ಧ್ವನಿಯೂ ದೇಶಾದ್ಯಂತದ ಮಿಲಿಯಂತರ ಜನರ ಆಶೋತ್ತರ, ಭರವಸೆಗಳ ಪ್ರತಿಫಲನವಾಗಿದೆ. ಈ ನಿಟ್ಟಿನಲ್ಲಿ ಲೋಕಸಭಾ ಸಭಾಪತಿಗಳ ಹೊಣೆಗಾರಿಕೆ ಕಲಾಪಗಳನ್ನು ನಿರ್ವಹಿಸುವುದಷ್ಟೇ ಅಲ್ಲ, ಇದನ್ನು ಮೀರಿ ಸಭಾಪತಿಗಳು ಪ್ರಜಾತಾಂತ್ರಿಕ ಪರಂಪರೆಗಳ, ಸಂಸದೀಯ ನಿಯಮಗಳು ಮತ್ತು ಸಾಂಸ್ಥಿಕ ಘನತೆಯ ಕಾವಲುಗಾರ ಕೂಡ. ಈ ಸದನದಲ್ಲಿ ಯಾರೂ ನಿಯಮಗಳಿಗೆ ಅತೀತರಲ್ಲ ಎಂಬ ನಿಮ್ಮ ಸುಸ್ಪಷ್ಟ ಹೇಳಿಕೆ, ಪ್ರಜಾಸತ್ತೆಯ ಮೂಲಭೂತ ಸ್ಫೂರ್ತಿಯನ್ನು ಮರುದೃಢೀಕರಿಸಿದ ಸಂದೇಶವನ್ನು ಸಾರಿದೆ ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

**ಭಿನ್ನಾಭಿಪ್ರಾಯ, ಅಗೌರವ ಬೇರೆ ಬೇರೆ:** ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜ. ವೈವಿಧ್ಯಮಯ ಚಿಂತನೆಗಳು ಪ್ರಜಾಸತ್ತೆಗೆ ಹೊಸ ಚೈತನ್ಯ ನೀಡುವುದು. ಭಿನ್ನಾಭಿಪ್ರಾಯಕ್ಕೂ, ಅಗೌರವಕ್ಕೂ ತುಂಬು ವ್ಯತ್ಯಾಸವಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಂಸದೀಯ ವ್ಯವಸ್ಥೆಗೇ ಅಗೌರವವಾಗಿ ಮಾರ್ಪಾಡಾಗುವುದು, ಪ್ರಜಾಸತ್ತೆಯಲ್ಲಿ ತುಂಬು ಶ್ರದ್ಧೆ ಹೊಂದಿರುವವರ ಪಾಲಿಗೆ ಕಳವಳಕಾರಿಯಾಗುವುದು ಸಹಜ. ಇಂತಹ ಕ್ಷಣಗಳು ಸಭಾಪತಿ ಪೀಠದಲ್ಲಿರುವವರ ಪಾಲಿಗೆ ಸತ್ವಪರೀಕ್ಷೆಯನ್ನೊಡ್ಡುತ್ತವೆ. ಅತ್ಯಂತ ಸಂಯಮ, ಶಾಂತತೆ ಹಾಗೂ ನಿಷ್ಪಕ್ಷಪಾತಿಯಾಗಿ ಈ ಸನ್ನಿವೇಶಗಳ ತಾವು ನಿಭಾಯಿಸಿದ ರೀತಿ ಅತ್ಯಂತ ಪ್ರಶಂಸಾರ್ಹ. ತಮ್ಮ ವಿರುದ್ಧ ವೈಯಕ್ತಿಕ ಹಿತಾಸಕ್ತಿ ಮತ್ತು ದುರಹಂಕಾರದಿಂದ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ ಎಂಬುದು ಪ್ರಜಾತಾಂತ್ರಿಕ ಸಿದ್ಧಾಂತಗಳನ್ನು ಗೌರವಿಸುವ ಈ ದೇಶದ ಪ್ರತಿ ಪ್ರಜೆಗೂ ಸ್ಪಷ್ಟ ವೇದ್ಯವಾಗಿದೆ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಬ್ಬರಿಗೂ ಈ ವಿದ್ಯಮಾನಗಳಿಂದ ತೀರಾ ನೋವಾಗಿದೆ ಎಂದು ಪ್ರಧಾನಿ ಮೋದಿ ಪತ್ರದಲ್ಲಿ ತಿಳಿಸಿದ್ದಾರೆ.

### ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಪುಟ ೧ ➜ ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸಂಸದರು ಸದನದೊಳಗೆ ಹಾಗೂ ಸಂಸತ್ ಆವರಣದಲ್ಲಿ ತೋರಿಸುತ್ತಿರುವ ವರ್ತನೆಯಿಂದ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಬ್ಯಾನರ್, ಪ್ಲೆಕಾರ್ಡ್, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು, ಅಸಭ್ಯ ಭಾಷೆ ಬಳಸುವುದು ಹಾಗೂ ತೋರಿಸುವ ವರ್ತನೆ ಎಲ್ಲರಿಗೂ ಚಿಂತೆಯ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ. ಸಂಸತ್ತು ದೇಶದ 140 ಕೋಟಿ ಜನರ ಆಶೆಗಳು ಮತ್ತು ಕನಸುಗಳನ್ನು ಪ್ರತಿನಿಧಿಸುವ ಪರಮ ಪ್ರಜಾಪ್ರಭುತ್ವ ಸಂಸ್ಥೆಯಾಗಿದ್ದು, ಇಲ್ಲಿ ವ್ಯಕ್ತವಾಗುವ ಪ್ರತಿ ಧ್ವನಿಯೂ ಜನರ ನಿರೀಕ್ಷೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ಬಿರ್ಲಾ ಹೇಳಿದ್ದಾರೆ. ಆದ್ದರಿಂದ ಎಲ್ಲ ಪಕ್ಷಗಳ ನಾಯಕರು ತಮ್ಮ ಸದಸ್ಯರಲ್ಲಿ ಶಿಸ್ತು ಮತ್ತು ನೈತಿಕತೆ ಕಾಪಾಡುವಂತೆ ವಿಶೇಷ ಗಮನ ಕೊಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

## ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

ಪುಟ ೧ ➜ ಒಟ್ಟು ಐವರು ಪೊಲೀಸ್ ಅಧಿಕಾರಿಗಳು ಬೆಂಗಳೂರಿನಿಂದ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಬೆಳಗ್ಗೆ 7 ಗಂಟೆ ಸುಮಾರಿಗೆ ಹೆಗ್ಗೆರೆ ಸಮೀಪದ ಪ್ರಕಾಶ್ ಸ್ಪಾಂಜ್ ಐರನ್ ಕಂಪನಿ ಬಳಿ ಬರುತ್ತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಡಿಕ್ಕಿಯ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅಪಘಾತದ ಪರಿಣಾಮ ಎಷ್ಟು ತೀವ್ರವಾಗಿತ್ತೆಂದರೆ ಕಾರು ಸುಮಾರು 300 ಮೀಟರ್‌ಗಳಷ್ಟು ಮುಂದಕ್ಕೆ ಎಳೆದೊಯ್ಯಲ್ಪಟ್ಟಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಮೃತ ಸಿಬ್ಬಂದಿಗೆ ಐಜಿ ಸಲೀಂ ಸಂತಾಪ

**ಬೆಂಗಳೂರು:** ಚಿತ್ರದುರ್ಗದ ಚಳ್ಳಕೆರೆ ತಾಲೂಕಿನ ಹೆಗ್ಗೆರೆ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಸ್ಥಳದಲ್ಲಿ ಸಾವನ್ನಪ್ಪಿದ್ದ ಮೂವರು ರಿಸರ್ವ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಸಂತಾಪ ಸೂಚಿಸಿದ್ದಾರೆ. ಮಂಜುನಾಥ್ ದಾರಿಮಣಿ, ಅಮರೇಶ್ ಬಿ. ಮತ್ತು ಸಚಿನ್ ವಿ. ರಿಸರ್ವ್ ಪೊಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದರು.

## ಮರಕ್ಕೆ ಬಸ್ ಡಿಕ್ಕಿ: 11 ಜನರಿಗೆ ಗಂಭೀರ ಗಾಯ

**ಬೆಳಗಾವಿ:** ಖಾನಾಪುರ ತಾಲೂಕಿನ ನಂದಗಡದ ಸರ್ಕಾರಿ ಆಸ್ಪತ್ರೆ ಬಳಿ ಎದುರುಗಡೆ ಕಾರೊಂದು ವೇಗವಾಗಿ ಬಂದಾಗ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಹನ್ನೊಂದು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಗಾಯಾಳುಗಳನ್ನು ತಕ್ಷಣವೇ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್‌ನಲ್ಲಿ ತೆರಳುತ್ತಿದ್ದ ಪ್ರಯಾಣಿಕರು, ನಂದಗಡದ ಸರ್ಕಾರಿ ಆಸ್ಪತ್ರೆ ಎದುರುಗಡೆ ಬರುತ್ತಿದ್ದಾಗ, ಏಕಾಏಕಿ ರಸ್ತೆಗೆ ಅಡ್ಡ ಬಂದ ಕಾರನ್ನು ತಪ್ಪಿಸಲು ಯತ್ನಿಸಿದ ಬಸ್ ಚಾಲಕನ ನಿಯಂತ್ರಣ ತಪ್ಪಿ, ಬಸ್ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿರುವುದರಿಂದ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಗಾಯಗಳಾಗಿವೆ. ಅಪಘಾತದಲ್ಲಿ ಗಾಯಗೊಂಡವರು, ಜ್ಯೋತಿ ತಹಶೀಲ್ದಾರ(20), ಶ್ರೇಯಸ್ ಮಾದಾರ(17), ಮೆಹಬೂಬಿ ಸನದಿ(60), ಅನ್ನಪೂರ್ಣ ಹುಡೇದಾರ್(36), ಸುನೀತಾ ಕಡಬಿ(27), ಮಂಜುಳಾ ಹುಡೇದಾರ್(28), ಪವಿತ್ರಾ ಹುಡೇದಾರ್(28), ಶಿವಾನಿ ಅಂಬೇವಾಡ್ಕರ್(37) ಮತ್ತು ಶೀಲಾ ಮಿಟಗಾರ (35) ಎಂದು ಗುರುತಿಸಲಾಗಿದೆ.

## ಹರ್ಯಾಣ ಸಮಾಲ್ಖಾದ ಮಾಧವ ಸೃಷ್ಟಿ ಆವರಣದಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನ

# ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ




• **ಸಮಾಲ್ಖಾ (ಹರ್ಯಾಣ):** ಕಳೆದ ವರ್ಷದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಸಂಘ)(ಆರ್‌ಎಸ್‌ಎಸ್)ದ ಕೆಲಸ ಗಮನಾರ್ಹವಾಗಿ ವಿಸ್ತರಿಸಿದೆ. ಸಂಘದ ವಿಸ್ತರಣೆ ಎಂದರೆ ರಾಷ್ಟ್ರೀಯ ಚಿಂತನೆಯ ವಿಸ್ತರಣೆ ಎಂದು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನಗೊಂಡಿತು. ಅಂತಿಮ ದಿನವಾದ ಭಾನುವಾರ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಹರಿಯಾಣದ ಸಮಾಲ್ಖಾದ ಈ ಪರಿಸರದಲ್ಲಿ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಎರಡನೇ ಬಾರಿಗೆ ನಡೆಯುತ್ತಿದೆ. ದೇಶದಾದ್ಯಂತ 46 ಪ್ರಾಂತಗಳಿಂದ ಒಟ್ಟು 1487 ಅಪೇಕ್ಷಿತರಿದ್ದರು. ಸಂಘದ ಕಾರ್ಯವಿಸ್ತಾರ ಮತ್ತು ಈ ವರ್ಷ ವಿಶೇಷವಾಗಿ ಸಂಘದ ಶತಾಬ್ದಿಯ ನಿಮಿತ್ತ ನಡೆದ ಕಾರ್ಯಕ್ರಮಗಳ ಕುರಿತು ವಿಚಾರ ವಿನಿಮಯ ನಡೆಯಿತು. ಸಂಘಟನಾತ್ಮಕವಾಗಿ ಎರಡು ವಿಷಯಗಳು ಮತ್ತು ಸಮಾಜದ ಕುರಿತಾದ 3 ವಿಷಯಗಳನ್ನು ಇಲ್ಲಿ ಚರ್ಚಿಸಲಾಯಿತು ಎಂದರು.

ಈಗ ಪ್ರಸ್ತುತ ದೇಶದಲ್ಲಿ 88,949 ಶಾಖೆಗಳಿವೆ. ಸಂಘದ ಶಾಖೆ ಎಲ್ಲಿರುವುದೋ ಅಲ್ಲಿಗೆ ಬರುವ ಸ್ವಯಂಸೇವಕ ದೇಶವನ್ನು ಏಕಾತ್ಮ ದೃಷ್ಟಿಯಿಂದ ನೋಡುತ್ತಾನೆ. ಜಾತಿ ಸಮುದಾಯಗಳ ಕುರಿತು ಮಾತ್ರ ಯೋಚಿಸದೇ ಸಂಪೂರ್ಣ ಸಮಾಜದ ಕುರಿತು ಯೋಚಿಸುವುದು ಅವನ ದೃಷ್ಟಿಯಾಗುತ್ತದೆ. ಸಮಾಜಕ್ಕೆ ನಾನು ಏನಾದರೂ ನೀಡಬೇಕೆಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಹಾಗಾಗಿ, ಸಂಘಟನಾತ್ಮಕವಾಗಿ ಒಂದೊಂದು ಶಾಖೆ ಹೆಚ್ಚಾದರೂ ಕೇವಲ ಸಂಘದ ಶಾಖೆಯ ಸಂಖ್ಯೆ ಹೆಚ್ಚಾದಂತಲ್ಲ; ಬದಲಾಗಿ ದೇಶದ ಕುರಿತು ಯೋಚಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದರ್ಥ. ಕೇವಲ ಕಾರ್ಯದ ವಿಸ್ತಾರವಾದರೆ ಸಾಲದು, ಬದಲಾಗಿ ಕಾರ್ಯಕರ್ತರ ಗುಣಾತ್ಮಕ ವಿಕಾಸವೂ ಆಗಬೇಕೆಂಬುದು ನಮ್ಮ ಗುರಿ. ವಸತಿಗಳಲ್ಲಿ ಇಂತಹ ಕಾರ್ಯಕರ್ತರ ನಿರ್ಮಾಣವಾಗಬೇಕು ಎನ್ನುವುದು ಕಳೆದ 100 ವರ್ಷಗಳ ನಮ್ಮ ಪ್ರಯತ್ನವಾಗಿದೆ ಎಂದು ವಿವರಿಸಿದರು.

### ಸಮಾಜದಲ್ಲಿ ಆಗಬೇಕಿದೆ ಬದಲಾವಣೆ

ಸಮಾಜದ ದೃಷ್ಟಿಯಿಂದ ಸಮಾಜದ ಎದುರು ಪಂಚಪರಿವರ್ತನೆ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ)ಯನ್ನು ಇಟ್ಟಿದ್ದೆವು. ಭಾರತದ ಇತಿಹಾಸ, ಸಂಸ್ಕೃತಿ, ಜನಜೀವನ, ಜ್ಞಾನ ಪರಂಪರೆಯ ಕುರಿತು ಸರಿಯಾದ ವಿಮರ್ಶೆ (ಕಥನ) ದೇಶ ಮತ್ತು ಜಗತ್ತಿನಲ್ಲಿ ಆಗಬೇಕು. ಈ ದೃಷ್ಟಿಯಿಂದ ದೇಶದ ಯೋಚನೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ಅಂಕಣಗಳು ಮತ್ತು ಮಾಧ್ಯಮಗಳಲ್ಲಿ ಸರಿಯಾದ ವಿಚಾರ ಬರಬೇಕು. ನಮ್ಮ ದೇಶದಲ್ಲಿ ಆಂಗ್ಲರ ಆಡಳಿತದ ಸಂದರ್ಭದಲ್ಲಿ ಮತ್ತು ಅದರ ನಂತರವೂ ಕೆಲವು ಸಮಯ ನಮ್ಮ ಮಾನಸಿಕತೆ, ವಸಾಹತೀಕರಣಕ್ಕೆ ಒಳಗಾಯಿತು. ಹಾಗಾಗಿ, ಮಾನಸಿಕತೆಯ ನಿರ್ವಸಾಹತೀಕರಣ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

### ದೇಶಕ್ಕಾಗಿ ಸಜ್ಜನಶಕ್ತಿ ಒಂದಾಗಬೇಕು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಮಾತ್ರ ದೇಶಭಕ್ತರು ಎಂದು ನಾವು ಎಂದೂ ಹೇಳುವುದಿಲ್ಲ, ದೇಶದಲ್ಲಿ, ಸಮಾಜದಲ್ಲಿ ದೇಶ ಮತ್ತು ಸಮಾಜಕ್ಕಾಗಿ ಕಾರ್ಯ ಮಾಡುವುದಕ್ಕಾಗಿ ತಮ್ಮ ಸಮಯ, ಬುದ್ಧಿ, ಧನ, ಪ್ರತಿಭೆಯನ್ನು ಉಪಯೋಗಿಸಿ ಒಟ್ಟಿಗೆ ಕೆಲಸ ಮಾಡಲು ಬಯಸುವವರು ಬಹಳಷ್ಟು ಜನರಿದ್ದಾರೆ. ಅಂತಹ ಸಜ್ಜನಶಕ್ತಿಯ ಸಹಯೋಗದೊಂದಿಗೆ ದೇಶದ ಸರಿಯಾದ ಕಥನವನ್ನು ಪ್ರಸ್ತುತಪಡಿಸಲು, ಪಂಚಪರಿವರ್ತನೆಯನ್ನು ಅನುಷ್ಠಾನಗೊಳಿಸಲು, ದೇಶದ ದೃಷ್ಟಿಯಿಂದ ಸಜ್ಜನಶಕ್ತಿ ಒಂದಾಗಬೇಕಿದೆ. ಈ ದೃಷ್ಟಿಯಿಂದ ಶತಾಬ್ದಿ ವರ್ಷದಲ್ಲಿ ಪ್ರಮುಖ ನಾಗರಿಕ ಗೋಷ್ಠಿ, ಹಿಂದು ಸಮ್ಮೇಳನದಂತಹ ಕಾರ್ಯಕ್ರಮದಲ್ಲಿ ಗ್ರಾಮ ಮತ್ತು ನಗರ ಮಟ್ಟದಲ್ಲಿ ಎಲ್ಲರೂ ಜೊತೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಮಂದಿ ಸಾಧು ಸಂತರು ತಮ್ಮ ಬೆಂಬಲವನ್ನು ಈ ಕಾರ್ಯಕ್ಕೆ ಸೂಚಿಸಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಸಂಘದ ಪದಾಧಿಕಾರಿಗಳು, ಮಾತೃಶಕ್ತಿಯೂ ಈ ಕಾರ್ಯಕ್ರಮಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ ಎಂದರು. ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಆಂಬೇಕರ್ ಸುದ್ದಿಗೋಷ್ಠಿಯಲ್ಲಿದ್ದರು.

### 75 ಶಿಕ್ಷಾ ವರ್ಗಗಳು

ಮುಂಬರುವ ವರ್ಷಕ್ಕೆ ಸಂಘದ ನಿಯಮಿತ ಶಿಕ್ಷಾ ವರ್ಗಗಳ ಬಗ್ಗೆ ಮಾಹಿತಿ ನೀಡಲಾಯಿತು. ಮುಂಬರುವ ದಿನಗಳಲ್ಲಿ 63 ಕಡೆಗಳಲ್ಲಿ ಸಂಘ ಶಿಕ್ಷಾ ವರ್ಗಗಳು ನಡೆಯಲಿವೆ. ಕ್ಷೇತ್ರೀಯ ಮಟ್ಟದಲ್ಲಿ 11 ಕಡೆಗಳಲ್ಲಿ ಕಾರ್ಯಕರ್ತರ ವಿಕಾಸ ವರ್ಗ–1 ಮತ್ತು ನಾಗ್ಪುರದಲ್ಲಿ ಕಾರ್ಯಕರ್ತರ ವಿಕಾಸ ವರ್ಗ–2 ವರ್ಗ ನಡೆಯಲಿದೆ. ಕೆಲವು ವರ್ಗಗಳು 15 ದಿನಗಳದ್ದಾದರೆ, ಇನ್ನೂ ಕೆಲವು 21 ದಿನಗಳದ್ದಾಗಿವೆ. ಇವು ಏಪ್ರಿಲ್‌ನಿಂದ ಜೂನ್‌ವರೆಗೆ ಜರುಗಲಿವೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

> ಭಾರತೀಯತೆ ಎಂದರೇನು? ಹಿಂದುತ್ವ ಎಂದರೇನು? ಅದು ಕೇವಲ ಸಿದ್ಧಾಂತ ಅಥವಾ ಆಧ್ಯಾತ್ಮಿಕ ವಿಚಾರವಲ್ಲ, ಅದು ಜೀವನ ಶೈಲಿಯಾಗಿದೆ ಎಂದು ವಿವೇಕಾನಂದರು, ದಯಾನಂದ ಸರಸ್ವತಿ ಸೇರಿದಂತೆ ಅನೇಕರು ತಿಳಿಸಿದ್ದಾರೆ. ನಾವು ಅವರನ್ನು ಸ್ಮರಿಸುತ್ತೇವೆ. ಭಾರತೀಯ ಕಥನ ವಿಶ್ವಕ್ಕೆ ಅವಶ್ಯವಾದ ಒಂದು ಚಿಂತನೆ ಎಂಬುದನ್ನು ತಿಳಿಸಬೇಕಿದೆ.
>
> ■ **ದತ್ತಾತ್ರೇಯ ಹೊಸಬಾಳೆ,** ಆರ್‌ಎಸ್‌ಎಸ್ ಸರಕಾರ್ಯವಾಹ



### ಮುಂದುವರಿಯುತ್ತದೆ ಶತಾಬ್ದಿ ವರ್ಷ ಕಾರ್ಯಕ್ರಮ

ಶತಾಬ್ದಿ ವರ್ಷ 2026ರ ವಿಜಯದಶಮಿಯವರೆಗೆ ಮುಂದುವರಿಯುತ್ತದೆ. ಇನ್ನೂ ಅನೇಕ ಪ್ರಾಂತಗಳಲ್ಲಿ ಯುವಕರ ಕಾರ್ಯಕ್ರಮ ನಡೆಯಬೇಕಿದೆ. ಆದ್ದರಿಂದ ಯುವಕರ ಕೇಂದ್ರಿತವಾದ ಕಾರ್ಯಕ್ರಮಗಳು, ಪ್ರಾಂತಗಳ ಸಂವಾದ, ಯುವ ಪ್ರತಿಭೆಗಳ ಗುರುತಿಸುವಿಕೆ, ವಿವಿಧ ಚಟುವಟಿಕೆಗಳು, ಪಂಚಪರಿವರ್ತನೆಯ ವಿಷಯಗಳನ್ನು ಪ್ರಯೋಗಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಘಟನಾತ್ಮಕ ದೃಷ್ಟಿಯಿಂದಲೂ ಯುವಕರನ್ನು ಒಗ್ಗೂಡಿಸುವಂತಹ ಪ್ರಯತ್ನಗಳು ನಡೆದಿವೆ ಎಂದು ಹೊಸಬಾಳೆ ಹೇಳಿದರು.

### ಪರಿಸರಸ್ನೇಹಿ ಮನೆಗೆ ಒತ್ತು

ಸಂಘದ ದೃಷ್ಟಿಯಿಂದ ಸ್ವಯಂಸೇವಕರು ಗೋಸೇವಾ, ಗ್ರಾಮವಿಕಾಸದಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಗ್ರಾಮಗಳಲ್ಲಿ ಗೋಸೇವಾ ಕಾರ್ಯ ಮಾಡಬಹುದು. ಆದರೆ, ನಗರಗಳಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ – ಪರಿಸರಸ್ನೇಹಿ ಮನೆ ನಿರ್ಮಿಸುವುದು. ನಗರಗಳಲ್ಲಿ ವಾಸವಿರುವವರು ತಮ್ಮ ಮನೆಗಳ ತಾರಸಿಯಲ್ಲಿ ಚಿಕ್ಕ ತೋಟ ಮಾಡಿ ಅದಕ್ಕೆ ಗೋ ಮೂತ್ರ, ಸಗಣಿ ಉಪಯೋಗಿಸಿ ಗೋಸೇವಾ ಕಾರ್ಯಕ್ಕೆ ಕೈ ಜೋಡಿಸಬಹುದು. ಅದೇ ರೀತಿ, ನಾಗರಿಕರು ಪರಿಸರಸ್ನೇಹಿ ಮನೆಗಳನ್ನು ನಿರ್ಮಿಸಲು ಪ್ರತಿಜ್ಞೆ ಮಾಡಬಹುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬಹುದು, ನೀರನ್ನು ಸಂರಕ್ಷಿಸಬಹುದಾಗಿದೆ. ದೇಶಾದ್ಯಂತ ಅನೇಕರು ಇದನ್ನು ಅನುಸರಿಸುತ್ತಿದ್ದಾರೆ.

- ಅಂಡಮಾನ್‌ನ ಒಂಬತ್ತು ಪ್ರಮುಖ ದ್ವೀಪಗಳಿಂದ 13,000ಕ್ಕೂ ಹೆಚ್ಚು ಜನರು ಸರಸಂಘಚಾಲಕರ ಸಮ್ಮುಖದಲ್ಲಿ ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಹಿಂದು ಸಮಾವೇಶದಲ್ಲಿ ಭಾಗಿ
- ಅರುಣಾಚಲ ಪ್ರದೇಶದಂತಹ ಕಡಿಮೆ ಜನಸಂಖ್ಯಾ ಸಾಂದ್ರತೆ ಹೊಂದಿರುವ ರಾಜ್ಯದಲ್ಲಿ 37,000ಕ್ಕೂ ಹೆಚ್ಚು ಜನರು 21 ಸ್ವಧರ್ಮ ಸಮಾವೇಶಗಳಲ್ಲಿ ಭಾಗಿ
- ತೇಗಬಹದ್ದೂರ್ ಅವರ 350ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ದೇಶಾದ್ಯಂತ 2,134 ಕಾರ್ಯಕ್ರಮಗಳ ಆಯೋಜನೆ, 7 ಲಕ್ಷ ಜನರು ಭಾಗಿ
- ವಂದೇ ಮಾತರಂನ 150ನೇ ವರ್ಷದ ಕಾರ್ಯಕ್ರಮಗಳು ದೇಶಾದ್ಯಂತ ಉತ್ಸಾಹದಿಂದ ಜರುಗಿದವು
- ಈ ವರ್ಷ ಸಂತ ಶಿರೋಮಣಿ ರವಿದಾಸ ಅವರ 650ನೇ ಜಯಂತಿಯನ್ನು ಸ್ಮರಿಸಲು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ

---

## ಕಿರುಸುದ್ದಿ

### ಲಕ್ಷಾಂತರ ಹಣ ಲೂಟಿ ಮಾಡಿದವರ ಬಂಧನ

• **ಚಿತ್ರದುರ್ಗ:** ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಹೆಸರನ್ನು ಬಳಸಿಕೊಂಡು ನಗರಾಭಿವೃದ್ಧಿ ಕೋಶದ ಸಿಬ್ಬಂದಿ ಲಕ್ಷ ಲಕ್ಷ ಹಣ ದೋಚಿರುವ ಘಟನೆ ಚಿತ್ರದುರ್ಗದಲ್ಲಿ ಬೆಳಕಿಗೆ ಬಂದಿದೆ. ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಅವರ ಡಿಜಿಟಲ್ ಸಹಿಯನ್ನು ಬಳಸಿಕೊಂಡು ನಕಲಿ ದಾಖಲೆ ಸೃಷ್ಟಿಸಿ ಹಣ ದೋಚಲಾಗಿದೆ. ಈ ಸಂಬಂಧ ಚಿತ್ರದುರ್ಗ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶದ ಸಿಟಿ ಲೆವೆಲ್ ಟೆಕ್ನಿಕಲ್ ಸೆಲ್ ಸಿಬ್ಬಂದಿಯ ವೇತನದ ಹೆಸರಿನಲ್ಲಿ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ನಕಲಿ ಬಿಲ್ ಸಲ್ಲಿಸಿರುವುದು ತಿಳಿದುಬಂದಿದೆ. ಖಜಾನೆ ಇಲಾಖೆಯು ಡಿಜಿಟಲ್ ಸಹಿ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆ ಈ ಅಕ್ರಮ ಬೆಳಕಿಗೆ ಬಂದಿದೆ. ನಗರಾಭಿವೃದ್ಧಿ ಕೋಶದ ನಿರ್ದೇಶಕಿ ರೇಷ್ಮಾ ಹಾನಗಲ್ ನೀಡಿದ ದೂರಿನ ಆಧಾರದ ಮೇಲೆ ಹೊರಗುತ್ತಿಗೆ ನೌಕರರಾದ ಸೈಯದ್ ಸಾದಿಕ್, ವಿನಯ್ ಶರ್ಮಾ, ವಿಜಯ್ ಕುಮಾರ್, ಬಸವರಾಜ್, ಮೆಹಬೂಬ್ ಭಾಷಾ ಹಾಗೂ ವಿಎಂಎಚ್ ಎಂಟರ್‌ಪ್ರೈಸಸ್‌ನ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಾಗಿದೆ. ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಮುಖ ಆರೋಪಿ ಸೈಯದ್ ಸಾದಿಕ್ ಪರಾರಿಯಾಗಿದ್ದಾನೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿ ಅವರ ಸಹಿ ಸರ್ಟಿಫಿಕೇಟ್ ಕೀ ಕಳವು ಮಾಡಿ ದುರುಪಯೋಗ ಪಡಿಸಿಕೊಂಡಿರುವ ಆರೋಪವೂ ಇವರ ಮೇಲಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ.

**ಡಿಸಿ, ಎಡಿಸಿ ಅವರ ಡಿಜಿಟಲ್ ಸಹಿ ದುರ್ಬಳಕೆ**

---

## ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯ ನಾಗರಿಕರು

# ಶಾಸಕರಿಗೆ ₹5 ಕೋಟಿ ಆಮಿಷ

### ಪೊಲೀಸರಿಂದ ವಿಚಾರಣೆ

ರೆಸಾರ್ಟ್‌ನಲ್ಲಿದ್ದ ಎಲ್ಲಾ ಶಾಸಕರನ್ನು ಬೆಂಗಳೂರಿನ ಖರ್ಗೆ ಮನೆಗೆ ಶಿಫ್ಟ್ ಮಾಡಲಾಗಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಪೊಲೀಸ್ ಎಸ್ಕಾರ್ಟ್ ಭದ್ರತೆಯಲ್ಲಿ ಬಸ್ ಮೂಲಕ 8 ಮಂದಿ ಶಾಸಕರು ಬೆಂಗಳೂರಿನ ಸದಾಶಿವನಗರದ ಖರ್ಗೆ ಮನೆಗೆ ಸ್ಥಳಾಂತರ ಮಾಡಲಾಗಿದೆ. ಇತ್ತ ರೆಸಾರ್ಟ್‌ಗೆ ಎಸ್‌ಪಿ ಶ್ರೀನಿವಾಸ್‌ಗೌಡ ಭೇಟಿ ನೀಡಿ ಪೊಲೀಸರ ವಶದಲ್ಲಿರುವ ಇಬ್ಬರು ವ್ಯಕ್ತಿಗಳನ್ನು ವಿಚಾರಣೆ ನಡೆಸಿದ್ದಾರೆ.




• **ರಾಮನಗರ:** ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಒಡಿಶಾ ಕೈ ಶಾಸಕರ ಖರೀದಿಗೆ ಬಂದಿದ್ದ ಇಬ್ಬರು ಒಡಿಶಾ ವ್ಯಕ್ತಿಗಳು ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ. ಶಾಸಕರಿಗೆ 5 ಕೋಟಿ ರೂ. ಆಫರ್ ನೀಡಿದ್ದ ವ್ಯಕ್ತಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಹಿನ್ನೆಲೆಯಲ್ಲಿ ಮಾ.12ರಂದು ಒಡಿಶಾದಿಂದ ರಾಮನಗರದ ಬಿಡದಿ ವಂಡರ್ ಲಾ ರೆಸಾರ್ಟ್‌ಗೆ ಬಂದು ವಾಸ್ತವ್ಯ ಹೂಡಿದ್ದ ಕಾಂಗ್ರೆಸ್ ಶಾಸಕರಿಗೆ ಆಪರೇಷನ್ ಯತ್ನ ನಡೆದಿದೆ. ಭಾನುವಾರ ಬೆಳಗ್ಗೆ ಒಡಿಶಾದಿಂದ ಮೂವರು ವ್ಯಕ್ತಿಗಳು, ಸ್ಥಳೀಯ ಓರ್ವ ವ್ಯಕ್ತಿ ಜೊತೆ ಸೇರಿ ಶಾಸಕರ ಖರೀದಿಗೆ ಮುಂದಾಗಿದ್ದು, ಈ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಬಿರೇಂದ್ರ, ಪ್ರಸಾದ್, ಅಜಿತ್ ಕುಮಾರ್ ಸಾಹು ಎಂಬುವವರು ಸಿಕ್ಕಿಬಿದ್ದಿದ್ದು, ಸ್ಥಳಕ್ಕೆ ಬಿಡದಿ ಪೊಲೀಸರು ಆಗಮಿಸಿ, ಒಡಿಶಾ ವ್ಯಕ್ತಿಗಳ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಬಗ್ಗೆ ಒಡಿಶಾ ಕಾಂಗ್ರೆಸ್ ಎಂಪಿ ಸಪ್ತಗಿರಿ ಶಂಕರ್ ಉಲಾಖ ಮಾತನಾಡಿ, ನಾಲ್ವರು ವ್ಯಕ್ತಿಗಳು ರೆಸಾರ್ಟ್‌ಗೆ ಬಂದು ಶಾಸಕರ ಜತೆ ಮಾತನಾಡಲು ಯತ್ನಿಸಿದ್ದರು. ನಮ್ಮ ಶಾಸಕರಿಗೆ 5 ಕೋಟಿ ರೂ. ಹಣದ ಆಫರ್ ಮಾಡಿದ್ದಾರೆಂದು ದೂರಿದರು.

### ದೂರು ದಾಖಲು

ಒಡಿಶಾ ಸಿಎಂ ಮೋಹನ್ ಚರಣ್ ಆಪ್ತ ಇಲ್ಲಿಗೆ ಬಂದು ಶಾಸಕರ ಖರೀದಿಗೆ ಯತ್ನಿಸಿದ್ದಾನೆ. ಆದರೆ ನಮ್ಮ ಯಾವ ಶಾಸಕರು ಆಮಿಷಕ್ಕೆ ಒಳಗಾಗಿಲ್ಲ. ಆಮಿಷ ತೋರಲು ಬಂದ ವ್ಯಕ್ತಿಗಳನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಿಡಿದು ಪೊಲೀಸರಿಗೆ ಕೊಟ್ಟಿದ್ದಾರೆ. ಅವರ ವಿರುದ್ಧ ನಾವು ಕೂಡಾ ಪೊಲೀಸರಿಗೆ ದೂರು ನೀಡಿದ್ದೇವೆ ಎಂದರು.



### ಶಾಸಕರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ: ಡಿ.ಕೆ.ಶಿವಕುಮಾರ್

• **ಬೆಂಗಳೂರು:** ಬಿಡದಿಯಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ನಮ್ಮ ಪಕ್ಷದ ನಾಲ್ವರು ಶಾಸಕರನ್ನು ಭೇಟಿ ಮಾಡಿ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತ ದಾನಕ್ಕೆ ತಲಾ 5 ಕೋಟಿ ರೂ. ಹಣದ ಆಮಿಷ ಒಡ್ಡಿದ್ದಾರೆ. ಆದರೆ ನಮ್ಮ ಶಾಸಕ ರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಮಿಷ ಒಡ್ಡಿದ ನಾಲ್ವರ ಪೈಕಿ ಇಬ್ಬರು ತಪ್ಪಿಸಿಕೊಂಡಿದ್ದು ಮತ್ತಿಬ್ಬರನ್ನು ಹಿಡಿಯ ಲಾಗಿದೆ. ಅವರು ಇದೇ ಕೆಲಸಕ್ಕೆ ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಆಮಿಷ ಒಡ್ಡಿದವರು ಖಾಲಿ ಚೆಕ್ ತಂದಿದ್ದಾರೆ. ಆ ಮೂಲಕ ಆಪರೇಷನ್ ಕಮಲ ಮಾಡಲಾಗುತ್ತಿದೆ. ಒಡಿಶಾದಿಂದ ಬಂದಿರುವ ನಾಲ್ಕು ಜನರು ಸ್ಥಳೀಯ ಬ್ಯಾಟರಾಯನಪುರ ನಿವಾಸಿ ಸುರೇಶ್ ಎಂಬಾತನ ಸಹಾಯ ಪಡೆದು ರೂಮ್ ಬುಕ್ ಮಾಡಿಸಿದ್ದಾರೆ. ನಂತರ ನಮ್ಮ ಶಾಸಕರಿಗೆ ಆಮಿಷ ಒಡ್ಡಿದಾಗ ನಮ್ಮ ಪಕ್ಷದ ಶಾಸಕರು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಎಂದರು.

### ಒಡಿಶಾಗೆ ಪ್ರಯಾಣ

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಗ್ಗೆ ಉತ್ತರಿಸಿದ ಅವರು, ಪಕ್ಷದ ಶಾಸಕರು ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡದೆ ಬಿಜೆಪಿ ಅಧ್ಯಕ್ಷರನ್ನು ಭೇಟಿ ಮಾಡಲು ಆಗುತ್ತದೆಯೇ? ನಮ್ಮ ಪಕ್ಷದ ಶಾಸಕರು ತಮ್ಮ ಆಸೆಯಂತೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದು, ಅವರ ಆಶೀರ್ವಾದ ಪಡೆದಿದ್ದಾರೆ. ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದು, ಸೋಮವಾರ ಬೆಳಗ್ಗೆ ಅವರು ಒಡಿಶಾಗೆ ಪ್ರಯಾಣ ಬೆಳೆಸಲಿದ್ದಾರೆ ಎಂದರು.

> ನಾವು ಇಂತಹ ಪರಿಸ್ಥಿತಿ ಎದುರಿಸುತ್ತಲೇ ಇರುತ್ತೇವೆ. ನಾನು ಸದಾ ಮಂದ ಹಾಸದಲ್ಲೇ ಇರುತ್ತೇನೆ. ನಾನು ನನ್ನ ಆತ್ಮಸಾಕ್ಷಿಯನ್ನು ನಂಬಿದ್ದೇನೆ, ಯಾವ ಟ್ರಬಲ್ಲೂ ಇಲ್ಲ.
>
> ■ **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

### ಅನಿಲ ಪೂರೈಕೆಗೆ ಪರ್ಯಾಯ ಮಾರ್ಗಕ್ಕೆ ಕೇಂದ್ರಕ್ಕೆ ಪತ್ರ: ಮುಖ್ಯಮಂತ್ರಿ

• **ಬೆಂಗಳೂರು:** ಎಲ್‌ಪಿಜಿ ಸಿಲಿಂಡರ್ ಅಭಾವವನ್ನು ನೀಗಿಸಲು ಹೊರದೇಶದಿಂದ ಅನಿಲ ಪೂರೈಕೆಯಂತಹ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಬಗ್ಗೆ ಭಾನುವಾರ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಎಲ್‌ಪಿಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು. ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಬಗ್ಗೆ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ. ಆಹಾರಕ್ಕಾಗಿ ಹೋಟೆಲ್‌ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ತವಾಗುತ್ತದೆ ಎಂದು ಹೇಳಿದರು. ರಾಜ್ಯದಲ್ಲಿ ಮಾತ್ರ ಎಲ್‌ಪಿಜಿ ಪೂರೈಕೆ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರ ಟೀಕೆಗೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು, ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

---

## ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕ: ಶಾಸಕ

# ರಾಷ್ಟ್ರಾದ್ಯಂತ ಅಭಿಯಾನ ಶ್ಲಾಘನೀಯ

• **ಬೆಂಗಳೂರು:** ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕವಾಗಿದ್ದು, ಈ ಸಂಸ್ಕೃತಿಯನ್ನು ಮುಂದುವರಿಸಲು ರಾಷ್ಟ್ರಾದ್ಯಂತ ಅಭಿಯಾನನಡೆಸುತ್ತಿರುವುದುಶ್ಲಾಘನೀಯಎಂದು ಶಾಸಕ ಕೆ.ಗೋಪಾಲಯ್ಯ ಅಭಿಪ್ರಾಯಪಟ್ಟರು.

ಮಹಾಲಕ್ಷ್ಮಿಪುರದ ಸಾದರ ಸಮುದಾಯ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಭಾನುವಾರ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ನೇತೃತ್ವದಲ್ಲಿ ನಡೆದ ರಾಜ್ಯಮಟ್ಟದ ಗೋ–ಸಮ್ಮಾನ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಷ್ಟ್ರಾದ್ಯಂತಮಠಮಾನ್ಯಗಳಸ್ವಾಮೀಜಿಗಳನ್ನು ಒಂದೆಡೆ ಸೇರಿಸಿರುವುದು ಡಾ.ಆರೂಢಭಾರತಿ ಸ್ವಾಮೀಜಿ ಅವರ ಹೆಗ್ಗಳಿಕೆಯಾಗಿದೆ. ಗೋವುಗಳ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಒಲವಿರುವ ಕುಟುಂಬಗಳು ಸಹ ಇಲ್ಲಿ ಸೇರಿರುವುದು ಸಂತಸವನ್ನು ಉಂಟುಮಾಡಿದೆ. ದೇಶಾದ್ಯಂತ ನಾಲ್ಕು ಹಂತಗಳಲ್ಲಿ ನಡೆಯುವ ಗೋಸಮ್ಮಾನ ಅಭಿಯಾನಕ್ಕೆ ಪೂರ್ವಭಾವಿಯಾಗಿ ಇಂದು



ರಾಜ್ಯಮಟ್ಟದ ಪ್ರಚಾರಕರ ಕಾರ್ಯಾಗಾರ ಏರ್ಪಡಿಸಲಾಗಿದೆ. ಇದರಲ್ಲಿ ರಾಜ್ಯ, ಹೊರರಾಜ್ಯದ ಅನೇಕ ಸಂತರು ರಾಜ್ಯದ ಪ್ರತಿ ತಾಲೂಕಿನ ಪ್ರಾತಿನಿಧಿಕ ಗೋ ಭಕ್ತರು, ಗೋ ಸಂರಕ್ಷಕರು ಭಾಗವಹಿಸಿರುವುದು ಸಂತಸ ತಂದಿದೆ ಎಂದರು.

ಗೋವುರಾಷ್ಟ್ರಮಾತೆಎಂದುಉದ್ಘೋಷಿಸಬೇಕು. ದೇಶಾದ್ಯಂತ ಒಂದೇ ಕಾನೂನಿನ ಅಡಿಯಲ್ಲಿ ಗೋ ಹತ್ಯೆ ನಿಷೇಧಿಸಬೇಕು. ಗೋಮಾಳವನ್ನು ಗೋವಿಗಾಗಿಯೇ ಉಳಿಸಬೇಕು ಎಂಬ ಮುಖ್ಯ ಬೇಡಿಕೆಗಳ ಕುರಿತು ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯುತ್ತದೆ ಎಂದು ಮಾಹಿತಿ ನೀಡಿದರು.

ಈ ಅಭಿಯಾನದ ಮುಂದಿನ ಭಾಗವಾಗಿ ಮೊದಲ ಹಂತದಲ್ಲಿ ಏ.27 ರಂದು ದೇಶದ ಎಲ್ಲ 5,400 ತಹಸೀಲ್ದಾರರಿಗೆ ಈ ಕುರಿತು ಮನವಿ ಸಲ್ಲಿಸಲಾಗುವುದು. ಎರಡನೇ ಹಂತದಲ್ಲಿ ಜು.27ರಂದು ದೇಶದ ಎಲ್ಲ ಜಿಲ್ಲಾಧಿಕಾರಿಗಳಿಗೆ, ಮೂರನೇ ಹಂತದಲ್ಲಿ ಅ. 27ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಾಲ್ಕನೇ ಹಂತದಲ್ಲಿ 2027ರ ಫೆ. 27 ರಿಂದ ಆ.15 ರವರೆಗೆ ದಿಲ್ಲಿಯಲ್ಲಿ ಹೆಚ್ಚಿನ ಸಂಖ್ಯೆಯ ಸಂತರು ಹಾಗೂ ಗೋ ಭಕ್ತರು ಶಾಂತಿಯುತ ಧರಣಿ ನಡೆಸಲಿದ್ದಾರೆ. ಆಗಲೂ ಬೇಡಿಕೆ ಈಡೇರದಿದ್ದಲ್ಲಿ ಅಂತಿಮವಾಗಿ 2027ರ ಆ. 16ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಿದ್ಧಾರೂಢ ಮಠದ ಶ್ರೀ ಪ್ರಭುಲಿಂಗ ದೇವರು ಸ್ವಾಮೀಜಿ, ಮಾಜಿ ಶಾಸಕ ನೆ.ಲ.ನರೇಂದ್ರಬಾಬು ಸೇರಿದಂತೆ ಗೋ ಸಂರಕ್ಷಣಾ ಪ್ರತಿನಿಧಿಗಳು ಇದ್ದರು.

### ಸರ್ಕಾರಕ್ಕೆ ಆರ್ಥಿಕ ಬಿಕ್ಕಟ್ಟು: ಅಶೋಕ

• **ಬೆಂಗಳೂರು:** ತುಘಲಕ್ ನೀತಿಗಳಿಂದಲೇ ದುರಾಡಳಿತಕ್ಕೆ ಹೆಸರಾಗಿ ರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ದುಡ್ಡಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 51,000 ಅತಿಥಿ ಶಿಕ್ಷಕರು ಕಳೆದ 4 ತಿಂಗಳಿಂದ ಸಂಬಳ ವಿಲ್ಲದೆ ಪರದಾಡುತ್ತಿದ್ದಾರೆ. ಮಾರ್ಚ್ 15ರೊಳಗೆ ಸಂಬಳ ಪಾವತಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಲು ಹೊರಟಿದ್ದಾರೆ ಎಂದಿದ್ದಾರೆ. ಸ್ವ ಘೋಷಿತ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಿಕ್ಕೆಟ್ಟ ನೀತಿಗಳು ಸರ್ಕಾರಿ ನೌಕರರನ್ನು ಬೀದಿಗೆ ತಂದಿವೆ. ದಿವಾಳಿ ಸರ್ಕಾರ ತೊಲಗುವವರೆಗೂ ಕನ್ನಡಿಗರಿಗೆ ನೆಮ್ಮದಿ ಇಲ್ಲ ಎಂದು ಅಶೋಕ ದೂರಿದ್ದಾರೆ.

### ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ: ಸಲೀಮ್ ಅಹ್ಮದ್

• **ವಿಜಯಪುರ:** ಮೇ, ಜೂನ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ನಾನು ಕೂಡ ಸಚಿವಸ್ಥಾನದ ಆಕಾಂಕ್ಷಿಯಾಗಿರುವೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಮ್ ಅಹ್ಮದ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ, ಜೂನನಲ್ಲಿ ಸಂಪುಟ ವಿಸ್ತರಣೆಯಗಲಿದ್ದು, ಶೇ.50ರಷ್ಟು ಹೊಸ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚರ್ಚೆಯಾಗಿದೆ. ಹಾಲಿ ಇರುವ ಶೇ.50ರಷ್ಟು ಸಚಿವರು ತಮ್ಮ ಸ್ಥಾನವನ್ನು ತ್ಯಜಿಸಿದ ನಂತರ ಮುಂದಿನ ಚುನಾವಣೆಗೆ ಕೆಲಸ ಮಾಡ ಬೇಕು ಎನ್ನುವ ತೀರ್ಮಾನವಾಗಿದೆ ಎಂದರು. ಪಕ್ಷದಲ್ಲಿ ನಾಯಕತ್ವ ಗೊಂದಲ ಇಲ್ಲ, ತಾವು ಡಿ.ಕೆ.ಶಿವಕುಮಾರ ಹಾಲು, ಜೇನು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದಾರೆ. ಹಾಗಾಗಿ ಯಾವುದೇ ಗೊಂದಲ ಬೇಡ ಎಂದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ 9 ತಿಂಗಳು ಕಳೆದಿವೆ. ನಾವು ನುಡಿದಂತೆ ನಡೆದಿದ್ದೇವೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4 ಲಕ್ಷ ಕೋಟಿಗೂ ಅಧಿಕ ಮೊತ್ತದ ಬಜೆಟ್ ಮಂಡಿಸಿದ್ದು, ಎಲ್ಲ ಜನರನ್ನು, ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ 17ನೇ ಬಜೆಟ್ ಇದಾಗಿದ್ದು, ಜನಪ್ರಿಯ ಬಜೆಟ್ ಮೂಲಕ ಗ್ಯಾರಂಟಿ ಯೋಜನೆ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೂ ವೇಗ ನೀಡಿದ್ದಾರೆ ಎಂದರು. ಮೇನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹಾಗಾಗಿ ಆ ಚುನಾವಣೆಯಲ್ಲಿ ನಮ್ಮ ಸರ್ಕಾರದ ಜನಪರ ಯೋಜನೆಗಳು, ಸರ್ಕಾರದ ಸಾಧನೆಗಳು ನಮ್ಮ ಕೈ ಹಿಡಿಯಲಿವೆ ಎಂದರು. ಎಸ್ಸಿ, ಎಸ್ಟಿ ಹಣವನ್ನು ದುರ್ಬಳಕೆ ಮಾಡಿಲ್ಲ ಎಂದರು.

ಮಹಿಳಾ ದಿನಾಚರಣೆ ಕಾರ್ಯಕ್ರಮ | ಪ್ರಾಂಶುಪಾಲ ಡಾ.ಜೆ.ಕರಿಯಪ್ಪ ಮಾಳಿಗೆ ಸಲಹೆ

# ಮಹಿಳೆಯರು ಅಕ್ಷರಸ್ಥರಾಗಬೇಕು

**ಚಿತ್ರದುರ್ಗ:** ಮಹಿಳೆ ಅಕ್ಷರಸ್ಥಳಾದಾಗ ಮಾತ್ರ ಎಲ್ಲಾ ಕ್ಷೇತ್ರಗಳಲ್ಲಿ ಸ್ಥಾನ ತನ್ನಷ್ಟಕ್ಕೆ ತಾನೆ ಅರಸಿ ಬರುತ್ತದೆಂದು ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲರಾದ ಡಾ.ಜೆ.ಕರಿಯಪ್ಪ ಮಾಳಿಗೆ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ಜಿಲ್ಲಾ ಘಟಕದ ವತಿಯಿಂದ ಪತ್ರಕರ್ತರ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ರಾಜ್ಯ ಮಟ್ಟದ ಕವಿಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಗೆ ಭೂಮಿ ತೂಕದ ಅರ್ಥವಿದೆ. ಸಹಜತೆಯಲ್ಲಿ ಆಕರ್ಷಣೆ, ಸೌಂದರ್ಯ, ಸೊಗಸಿರುತ್ತದೆ. ಮಹಿಳೆ ಸಾಂಸ್ಕೃತಿಕ, ಸಂಘಟನಾತ್ಮಕವಾಗಿ ಬೆಳೆಯಬೇಕು. ಮಹಿಳಾ ಚಳುವಳಿಗಳು ಹೇಗೆ ಹುಟ್ಟಿಕೊಂಡವು ಎನ್ನುವ ಬಗ್ಗೆಯೂ ನೀವುಗಳು ಮಾಹಿತಿ ತಿಳಿದುಕೊಂಡಿರಬೇಕು. ಸಾಧನೆಗೆ ಪೂರಕವಾದ ವಾತಾವರಣ ಸೃಷ್ಠಿಯಾಗಬೇಕು. ಹೆಣ್ಣಾದರೆ ಮಾತ್ರ ಶರಣಾಗಲು ಸಾಧ್ಯ ಎಂದು ಹೇಳಿದರು.

ಕನ್ನಡದಲ್ಲಿ ಮಹಿಳಾ ಸಾಹಿತ್ಯ ಸೃಷ್ಠಿಯಾಗಿದೆ. ಚಳುವಳಿ ಎಂದರೆ ಕೇವಲ ವಿರೋಧಿಸುವುದಲ್ಲ, ಸಾಮರಸ್ಯ, ಸುಧಾರಣೆ, ಪ್ರೀತಿಯಿರುತ್ತದೆ. ಪ್ರೀತಿಯಿಂದ ಜಗತ್ತನ್ನು ಗೆಲ್ಲಬಹುದು ಎನ್ನುವುದನ್ನು ಬುದ್ದ ತೋರಿಸಿದ್ದಾನೆ. ಜಗದ, ಮನಸ್ಸಿನ ಬೆಳಕು ಮಹಿಳೆ. ಶಿಕ್ಷಣವೆಂದರೆ ಕೇವಲ ಅಕ್ಷರ ತಿಳುವಳಿಕೆಯಲ್ಲ, ಜೀವನದಲ್ಲಿನ ಅನುಭವ ಕೂಡ ಶಿಕ್ಷಣವೆ. ಕೀಳರಿಮೆ, ಹಿಂಜರಿಕೆಯನ್ನು ಬಿಟ್ಟು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸುವುದರಿಂದ ನಿಮ್ಮಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ ಎಂದರು.

ಜನಪದರಲ್ಲಿ ಸ್ತ್ರೀಗೆ ಗೌರವವಿದೆ. ಮಹಿಳೆ-ಪುರುಷ, ಜಾತಿ-ಧರ್ಮದ ನಡುವೆ ಒಡಕಿರುವ ಇಂದಿನ ಕಾಲಘಟ್ಟದಲ್ಲಿ ಸೌಹಾರ್ಧ, ಸಹಬಾಳ್ವೆಯಿಂದ ಇರುವುದನ್ನು ಕಲಿತಾಗ ಮಾತ್ರ ಎಲ್ಲಿಯೂ ಸಂಘರ್ಷಕ್ಕೆ ಜಾಗವಿರುವುದಿಲ್ಲ, ವಾಸ್ತವ ಪ್ರಜ್ಞೆಯ ಸಂಕೇತವಾಗಿರುವ ಮಹಿಳೆಯರು ಸೂಕ್ಷ್ಮ ಸಂವೇದನೆಗಳನ್ನು ಬೆಳೆಸಿಕೊಳ್ಳುವಂತೆ ಡಾ.ಜೆ.ಕರಿಯಪ್ಪ ಮಾಳಿಗೆ ಕರೆ ನೀಡಿದರು.



ವಿಮರ್ಶಕರಾದ ತಾರಿಣಿ ಶುಭದಾಯಿನಿ ಸ್ತ್ರೀ ಬರವಣಿಗೆಯಲ್ಲಿನ ಕುಶಲತೆಗಳು ವಿಷಯ ಕುರಿತು ಮಾತನಾಡಿ, ಸೃಜನಶೀಲತೆ ಯಾರ ಸ್ವತ್ತಲ್ಲ, ಅಕ್ಕಮಹಾದೇವಿ ಮೊದಲ ಮಹಿಳಾ ಕವಿ, ನಂತರದಲ್ಲಿ ಶರಣೆಯರು, ವಚನಗಾರ್ತಿಯರು ಬರುತ್ತಾರೆ. ಅಭಿವ್ಯಕ್ತಿಯಲ್ಲಿಯೂ ಅನುಭವದ ಸಂವೇದನೆಯ ಸೆಳಹುಗಳಿರುತ್ತವೆ. 19 ನೇ ಶತಮಾನದಲ್ಲಿ ಸ್ತ್ರೀಗೆ ಶಿಕ್ಷಣ ಕಠಿಣವಾಗಿದ್ದರಿಂದ ಮನೆಯಲ್ಲಿ ಅನೇಕ ಕಟ್ಟುಪಾಡುಗಳನ್ನು ಪಾಲಿಸುವುದೇ ದೊಡ್ಡ ಸವಾಲಾಗಿತ್ತು. ಕೀರ್ತನಕಾರರು ಮೌಖಿಕ ಪರಂಪರೆಯವರು. ಮೌಖಿಕ ಪರಂಪರೆಯನ್ನು ಒಗ್ಗಿಸಿಕೊಳ್ಳುವುದು ಒಂದು ಕೌಶಲ್ಯ ಎಂದರು.

ಅಭಿವ್ಯಕ್ತಿ ತುಡಿತ ನೈಜವಾಗಿದ್ದಷ್ಟು ಮುನ್ನಡೆಸಿಕೊಂಡು ಹೋಗುತ್ತದೆ. ತಂತ್ರಗಾರಿಕೆಯಿಂದ ಸಾಹಿತ್ಯವನ್ನು ಉಳಿಸಿಕೊಂಡು ಬರಲಾಗಿದೆ. ಮಹಿಳಾ ಅಭಿವ್ಯಕ್ತಿಯಲ್ಲಿ ತನ್ನ ತನದ ಬರವಣಿಗೆಯಿರಬೇಕು. ಬರವಣಿಗೆಯಲ್ಲಿ ಗುರುತಿಸಿಕೊಳ್ಳಬೇಕಾದರೆ ಅನನ್ಯತೆಗಳನ್ನು ಶೋಧಿಸಿಕೊಳ್ಳಬೇಕಾದರೆ ಅಭಿವ್ಯಕ್ತಿಗಳನ್ನು ಭಾಷೆ ಮೂಲಕ ಹೊರಗೆಡಿ. ಸೃಜನಶೀಲತೆ ಸಮಸ್ಯೆಯಿದೆ. ಅದೊಂದು ದೊಡ್ಡ ಸವಾಲನ್ನು ಮಹಿಳೆಯರು ಸಮರ್ಥವಾಗಿ ಎದುರಿಸಲು ಸಿದ್ದರಾಗಬೇಕೆಂದು ನುಡಿದರು.

ಕವಿ ಜಬೀವುಲ್ಲಾ ಎಂ.ಅಸದ್ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೆ.ನಿರ್ಮಲ ಮರಡಿಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ಲೇಖಕಿಯರ ಸಂಘ ಜಿಲ್ಲಾ ಘಟಕದ ಕಾರ್ಯದರ್ಶಿ ದೀಪಿಕಾ ಬಾಬು, ಸಹ ಕಾರ್ಯದರ್ಶಿ ಡಾ.ಚಾಂದಿನಿಖಾಲಿದ್, ಖಜಾಂಚಿ ಮೀರಾ ನಾಡಿಗ್, ಡಿ.ಶಬ್ರಿನಾ ಮಹಮದ್ ಅಲಿ ಇವರುಗಳು ವೇದಿಕೆಯಲ್ಲಿದ್ದರು.

ಕೆ.ಸಿ.ಶಿಲ್ಪಾ ಜಗದೀಶ್, ಶಕುಂತಲಾ ಪಿ.ಆಚಾರ್ ಸೇರಿದಂತೆ ಕರ್ನಾಟಕ ಲೇಖಕಿಯರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿದ್ದರು. 60 ಕ್ಕೂ ಹೆಚ್ಚು ಕವಿಗಳು ತಮ್ಮ ಕವನಗಳನ್ನು ವಾಚಿಸಿದರು.

# ಎಲ್ಲ ಕ್ಷೇತ್ರದಲ್ಲೂ ಮಹಿಳೆ ಸಾಧನೆ



**ಚಿಕ್ಕಮಗಳೂರು:** ಭಾರತದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳಿವೆ. ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಸಾಮರ್ಥ್ಯ ತೋರಿದ್ದಾರೆಂದು ಹಿರಿಯ ಮಹಿಳೆ ಸರಳಾ ಶ್ರೀಧರ್ ನುಡಿದರು.

ಟೌನ್ ಮಹಿಳಾ ಸಮಾಜ ನಗರದ ಎಐಟಿ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತ್ಯಾಗ, ಕರುಣೆ, ಮಮತೆಯ ಪ್ರತಿರೂಪವೇ ಮಹಿಳೆ. ನಮ್ಮಲ್ಲಿ ಮಹಿಳೆಯರಿಗೆ ಅತ್ಯಂತ ಗೌರವದ ಸ್ಥಾನ ನೀಡಲಾಗಿದೆ. ಪುರುಷರಿಗೆ ಸರಿಸಮಾನವಾದ ಕ್ಷಮತೆಯನ್ನು ಹೆಣ್ಣುತೋರಿದ್ದಾಳೆ. ನಾರಿಯರನ್ನು ಎಲ್ಲಿ ಪೂಜಿಸುವರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆಂಬ ನಾಣ್ಣುಡಿ ನಮ್ಮಲ್ಲಿ ಪ್ರಚಲಿತದಲ್ಲಿದೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆ ಅಪೂರ್ವವಾಗಿದೆ. ರಾಜಕೀಯಕ್ಷೇತ್ರದಲ್ಲಿ ಇಂದಿರಾಗಾಂಧಿ ದೇಶವನ್ನೆ ಆಳಿ ಉಕ್ಕಿನ ಮಹಿಳೆಯೆಂದೆ ಖ್ಯಾತಿಗೊಂಡಿದ್ದಾರೆ. ಪ್ರಸ್ತುತ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ ದೇಶದ ಹಲವು ಆಯವ್ಯಯಗಳನ್ನು ಮಂಡಿಸಿ ಭಾರತದ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸಿದ ಸಾಧಕಿ ಎಂದು ಉದಾಹರಿಸಿದ ಅವರು, ಜಾಗತಿಕವಾಗಿ ಅಪೂರ್ವ ಸೇವೆಸಲ್ಲಿಸಿರುವ ಮದರ್ ತೆರೇಸಾ, ಹೆಲನ್ ಕೆಲರ್, ಕ್ಲಾರಾ ಜೆಟ್ಕಿನ್ ಮತ್ತಿತರರನ್ನು ಉಲ್ಲೇಖಿಸಿದರು.

ಭಾರತದ ಕೋಗಿಲೆ ಎಂದೇ ಹೆಸರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ಸರೋಜಿನಿನಾಯ್ಡು ಅವರ ಹುಟ್ಟುಹಬ್ಬವು ಮಹಿಳಾ ದಿನವಾಗಿ ಬರುತ್ತಿದೆ. ಟೌನ್ ಮಹಿಳಾ ಸಮಾಜ ಸೇರಿದಂತೆ ವಿವಿಧ ಮಹಿಳಾ ಸಂಘಟನೆಗಳು ಮಹಿಳಾ ದಿನಾಚರಣೆಯನ್ನು ನೆಪವಾಗಿಟ್ಟುಕೊಂಡು ಸ್ಥಳೀಯವಾಗಿ ಸಾಧಕ ಮಹಿಳೆಯರನ್ನು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯ ಎಂದರು.

ರಚಿತಾಮಹಿಳಾಸಮಾಜದಅಧ್ಯಕ್ಷೆವಿಶಾಲಗೋಪಾಲ ಮತ್ತು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಗೊಂಡಿರುವ ಹಿರೇಮಗಳೂರಿನ ಕುಮಾರಿ ಶ್ವೇತಾ ಅವರನ್ನು ಸನ್ಮಾನಿಸಲಾಯಿತು. ಟೌನ್ ಮಹಿಳಾ ಸಮಾಜ ಅಧ್ಯಕ್ಷೆ ನೇತ್ರಾ ವೆಂಕಟೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿ ಕಾರ್ಯದರ್ಶಿ ಶುಭದಾ ಸ್ವಾಗತಿಸಿ, ನಿರ್ದೇಶಕಿ ಶೈಲಾ ನಾಗೇಶ್ ವಂದಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರನ್ನು ಪರಿಚಯಿಸುವ ಏಕಪಾತ್ರ ಅಭಿನಯ ಗಮನಸೆಳೆಯಿತು.

# ಶಿಸ್ತು ಮತ್ತು ರಾಷ್ಟ್ರಭಕ್ತಿಯೇ ಯಶಸ್ಸಿನ ಮಂತ್ರ

**ಚಿತ್ರದುರ್ಗ:** ಎನ್‌ಸಿಸಿ ತರಬೇತಿಯು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ, ಕೆಚ್ಚೆದೆಯ ಧೈರ್ಯ, ನಾಯಕತ್ವದ ಗುಣ ಮತ್ತು ನಿಸ್ವಾರ್ಥ ಸೇವೆಯ ಮನೋಭಾವವನ್ನು ಬೆಳೆಸುತ್ತದೆ ಎಂದು ಎನ್‌ಸಿಸಿ ಅಧಿಕಾರಿ ಡಾ.ಹೆಚ್.ಸತೀಶ್‌ನಾಯಕ್ ಹೇಳಿದರು.

ನಗರದ ಚಂದ್ರವಳ್ಳಿಯ ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಎನ್.ಸಿ.ಸಿ. ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 2025-26ನೇ ಸಾಲಿನ ಎನ್.ಸಿ.ಸಿ. ಸೀನಿಯರ್ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವರ್ಷವಿಡೀ ಕಠಿಣ ಪರಿಶ್ರಮದಿಂದ ತರಬೇತಿ ಪೂರೈಸಿದ ಕೆಡೆಟ್‌ಗಳು ದೇಶದ ಜವಾಬ್ದಾರಿಯುತ ಪ್ರಜೆಗಳಾಗಲೆಂದು ಶುಭ ಹಾರೈಸಿದರು.

ಮುಖ್ಯ ಅತಿಥಿ ಡಾ.ಎಸ್.ಆನಂದ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಎನ್‌ಸಿಸಿ ಒಂದು ಶಿಸ್ತಿನ ಪಾಠಶಾಲೆ. ಇಲ್ಲಿ ಕೇವಲ ಶಾರೀರಿಕ ದೃಢತೆ ಮಾತ್ರವಲ್ಲದೆ, ಮಾನಸಿಕ ಸದೃಢತೆಯೂ ಲಭಿಸುತ್ತದೆ. ಕೆಡೆಟ್‌ಗಳು ಇಲ್ಲಿ ಕಲಿತ ಸಮಯಪ್ರಜ್ಞೆ ಮತ್ತು ಶಿಸ್ತನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಉನ್ನತ ಗುರಿ ತಲುಪಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಐಕ್ಯುಎಸಿ ಸಂಯೋಜಕರು ಮಾತನಾಡಿ, ಎನ್‌ಸಿಸಿ ಸಂಘಟನೆಯ ಇತಿಹಾಸ ಮತ್ತು ಅದರ ಮಹತ್ವವನ್ನು ವಿವರಿಸುತ್ತ ಯುವಜನತೆಯಲ್ಲಿ ಏಕತೆ ಮತ್ತು ಶಿಸ್ತನ್ನು ಮೂಡಿಸುವಲ್ಲಿ ಈ ಸಂಘಟನೆಯು ಭಾರತೀಯ ರಕ್ಷಣಾ ವ್ಯವಸ್ಥೆಯ ಎರಡನೇ ಸಾರಥಿಯಾಗಿ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.



ಪ್ರಾಂಶುಪಾಲರಾದ ಡಾ.ಎಸ್.ಹೆಚ್.ಪಂಚಾಕ್ಷರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಕಾಲೇಜಿನ ಹೆಮ್ಮೆಯ ಎನ್.ಸಿ.ಸಿ. ಘಟಕವು ಶಿಸ್ತಿನ ನಡವಳಿಕೆಗೆ ಹೆಸರುವಾಸಿಯಾಗಿದೆ. ವಿದ್ಯಾರ್ಥಿಗಳು ತಮಗೆ ಲಭಿಸಿರುವ ಈ ಸದವಕಾಶವನ್ನು ಬಳಸಿಕೊಂಡು ಸಾಧನೆಯ ಶಿಖರಕ್ಕೇರಬೇಕು. ನಿಮ್ಮ ಸಾಧನೆಯ ಮೂಲಕ ಕಾಲೇಜಿನ ಕೀರ್ತಿ ಪತಾಕೆಯನ್ನು ಹಾರಿಸಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಎನ್.ಸಿ.ಸಿ. ಕೆಡೆಟ್‌ಗಳು, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ವಿಮರ್ಶೆಗೆ ಇಂಗ್ಲಿಷ್ ಜ್ಞಾನ ಅಗತ್ಯ

**ಚಿತ್ರದುರ್ಗ:** ಕನ್ನಡ ಸಾಹಿತ್ಯ ವಿಮರ್ಶೆಯ ತಲಸ್ಪರ್ಶಿ ಅಧ್ಯಯನಕ್ಕೆ ಇಂಗ್ಲಿಷ್ ಭಾಷೆಯ ಜ್ಞಾನ ಅಗತ್ಯ ಎಂದು ಕಥೆಗಾರ ಲೋಕೇಶ್ ಅಗಸನಕಟ್ಟೆ ಹೇಳಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಐಕ್ಯುಎಸಿ ಮತ್ತು ಕನ್ನಡ ವಿಭಾಗದ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ವಿಮರ್ಶೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಮರ್ಶೆಗೆ ಇಂದ್ರಿಯ ಮುಖ್ಯವಾದದ್ದು ಮತ್ತು ಹಲವು ತಾತ್ವಿಕ ಗ್ರಹಿಕೆಗಳನ್ನು ಹೊಂದಿರುತ್ತದೆ. ಹಾಗಾಗಿ ಸಾಹಿತ್ಯ ಕೃತಿಯಲ್ಲಿನ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಅದರ ಮೌಲ್ಯ ನಿರ್ಧರಿಸುವ ಜಾಣ್ಮೆ ವಿಮರ್ಶಕರಿಗೆ ಇರಬೇಕು. ಸಾಹಿತ್ಯ ಕೃತಿಗಳು ಭಿನ್ನ ಭಿನ್ನ ಅನುಭವ ನೀಡುತ್ತವೆ. ಸಾಹಿತ್ಯ ಮತ್ತು ವಿಮರ್ಶೆ ಎರಡರಲ್ಲೂ ಚಲನಶೀಲತೆ ಗುಣವಿರುತ್ತದೆ. ಆದ್ದರಿಂದ ವಸ್ತುನಿಷ್ಠ, ಕೃತಿ ನಿಷ್ಠ ಹಾಗೂ ಸಮಾಜ ನಿಷ್ಠ ವಿಮರ್ಶೆಯ ಸ್ವರೂಪವನ್ನು ಅರಿತುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರಾಂಶುಪಾಲ ಪ್ರೊ.ಜೆ.ಕರಿಯಪ್ಪ ಮಾಳಿಗೆ ಮಾತನಾಡಿ, ಸಮಾಜಮುಖಿಯಾದ ಸಂಶೋಧನೆ ಮತ್ತು ಸಾಹಿತ್ಯ ವಿಮರ್ಶೆಯ ಕಡೆಗೆ ಹೆಚ್ಚಿನ ಗಮನಹರಿಸಬೇಕು. ಸ್ಥಳೀಯ ಚರಿತ್ರೆ ಮತ್ತು ಬರಹಗಾರರ ಸಾಹಿತ್ಯದ ಕುರಿತು ವಿಶೇಷ ಅಧ್ಯಯನ ನಡೆಸುವ ಮೂಲಕ ಅಂಶಿಕ ಪ್ರಬಂಧ ರಚಿಸಬೇಕು. ಸ್ನಾತಕೋತ್ತರ ಪದವಿ ಕಲಿಕೆಯ ಜೊತೆಯಲ್ಲಿಯೇ ವ್ಯಾಪಕ



ಕ್ಷೇತ್ರಕಾರ್ಯ ನಡೆಸಿ ಕಲೆ, ಸಂಸ್ಕೃತಿ ಮತ್ತು ಅಲಕ್ಷಿತ ಕಲಾವಿದರು ಹಾಗೂ ತತ್ವಪದಗಳನ್ನು ಸಂಗ್ರಹಿಸುವ ಕೆಲಸದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು ಎಂದು ಪದವಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಐಕ್ಯುಎಸಿ ಸಮಿತಿ ಸಂಚಾಲಕಿ ಪ್ರೊ.ತಾರಿಣಿ ಶುಭದಾಯಿನಿ ಮಾತನಾಡಿ, ಬೌದ್ಧಿಕ ವಿಕಾಸಕ್ಕೆ ಪೂರಕವಾದ ವಿಚಾರ ಸಂಕಿರಣಗಳನ್ನು ಕಾಲೇಜಿನಲ್ಲಿ ಪ್ರತಿ ತಿಂಗಳು ಏರ್ಪಡಿಸಬೇಕು. ಉತ್ತಮ ಬದುಕು ಕಟ್ಟಿಕೊಳ್ಳಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಸ್ನಾತಕೋತ್ತರ ಪದವಿ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಚಿತ್ತಯ್ಯ ಕೆ., ಉಪನ್ಯಾಸಕ ಜಿ.ಎಸ್. ಯಶೋಧರ ಮಾತನಾಡಿದರು. ಪ್ರಾಧ್ಯಾಪಕರ ಸಂಘದ ಕಾರ್ಯದರ್ಶಿ ಪ್ರೊ.ಹೆಚ್.ಹನುಮಂತಪ್ಪ, ಸ್ನಾತಕೋತ್ತರ ವಿಭಾಗದ ಕನ್ನಡ ಸಹ ಪ್ರಾಧ್ಯಾಪಕ ಪ್ರೊ.ಜಿ.ಹೆಚ್. ನಾಗಮರ್ಮ, ಸಹಾಯಕ ಪ್ರಾಧ್ಯಾಪಕ ಪ್ರೊ.ಗಿರೀಶ್ ಗೌಡ, ಇಂಗ್ಲಿಷ್ ವಿಭಾಗದ ಸಹ ಪ್ರಾಧ್ಯಾಪಕ ಪ್ರೊ.ಶ್ರೀಹರಿ ಹಾಜರಿದ್ದರು.



ತ್ಯಾವಣಿಗೆಯ ಪ್ರಕೃತಿ ವಿದ್ಯಾಲಯದಲ್ಲಿ ಶಾರದಾ ಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಕಾರ್ಯದರ್ಶಿ ಕೆ.ಜಿ. ಲೋಹಿತ್ ಕುಮಾರ್, ಮುಖ್ಯ ಶಿಕ್ಷಕ ಎಸ್ ಆರ್. ಮಂಜು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಇದ್ದರು.



ಹಿರಿಯೂರು ನಗರದ ರಾಜ ದುರ್ಗಾ ಪರಮೇಶ್ವರಿ ದೇವರ ರಥೋತ್ಸವ ನೆರವೇರಿತು. ಹೊಸಹಳ್ಳಿ ಗ್ರಾಮದೇವತೆ ಕೊಲ್ಲಾಪುರದ ಮಹಾಲಕ್ಷ್ಮಿ ಹುಳಿಯಾರು ಗ್ರಾಮ ದೇವತೆ ದುರ್ಗಾಪರಮೇಶ್ವರಿ ಹಿರಿಯೂರು ಹುಲಿಗಮ್ಮ ಹಾಗೂ ಸೋಮ ದೇವರುಗಳು ಜೊತೆಗೂಡಿ ರಥೋತ್ಸವದಲ್ಲಿ ಭಾಗವಹಿಸಿದ್ದವು.

# ಅಸ್ಪೃಶ್ಯತೆ ಆಚರಣೆ ಕಂಡುಬಂದರೆ ಕ್ರಮ



**ಹೊಸದುರ್ಗ:** ತಾಲೂಕಿನ ವ್ಯಾಪ್ತಿಯಲ್ಲಿ ಎಲ್ಲಿಯಾದರೂ ಅಸ್ಪೃಶ್ಯತೆ ಆಚರಣೆ ಮಾಡುತ್ತಿರುವ ಬಗ್ಗೆ ಕಂಡು ಬಂದರೆ, ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಅಸ್ಪೃಶ್ಯತೆ ಆಚರಣೆ ಮಾಡುತ್ತಿರುವ ಬಗ್ಗೆ ತಾಲೂಕು ಆಡಳಿತಕ್ಕೆ ತಿಳಿಸಿದರೆ, ಕಾನೂನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಹಶೀಲ್ದಾರ್ ತಿರುಪತಿ ಪಾಟೀಲ್ ಹೇಳಿದರು.

ತಾಲೂಕಿನ ಕಾರೇಹಳ್ಳಿ ಗ್ರಾಮದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಪೊಲೀಸ್ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರತಿಬಂಧ ಕಾಯ್ದೆ 1989ರ ಕುರಿತು ಜನಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಸ್ಪೃಶ್ಯತೆ ಆಚರಿಸುವವರು ಎಸ್ಸಿ ಎಸ್ಟಿ ಪಂಗಡಗಳ ಪ್ರತಿಬಂಧ ಕಾಯ್ದೆಯಡಿಯಲ್ಲಿ ಬಹಳಷ್ಟು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಮನುಷ್ಯರಾಗಿ ನಮ್ಮೆಲ್ಲ ಹಕ್ಕುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ತಾ.ಪಂ.ಇಓ ಸುನೀಲ್ ಕುಮಾರ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗೋಪಾಲಪ್ಪ, ಮುಖಂಡ ದೊಡ್ಡಘಟ್ಟ ಲಕ್ಷ್ಮಣ್, ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಧೀಕ್ಷಕ ಓಂಕಾರಪ್ಪ ಮತ್ತು ಜನಮಿತ್ರ ಸಂಸ್ಥೆಯ ಜಿವಿಟಿವಿ ರಾಘು ಪಾಲ್ಗೊಂಡಿದ್ದರು.

# ಸನ್ಮಾನ, ಆರೋಗ್ಯ ತಪಾಸಣೆ




**ಹಿರಿಯೂರು:** ಶುಕ್ರವಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರ ಸಭೆ ಆವರಣದಲ್ಲಿ ನಾರಿಯ ನಡೆ ಸ್ವಚ್ಛತೆಯ ಕಡೆಗೆ ಎಂಬ ಕಾರ್ಯಕ್ರಮವನ್ನು ಮತ್ತು ಪೌರಕಾರ್ಮಿಕರಿಗೆ ಹಾಗೂ ಕಮ್ಯೂನಿಟಿ ಮೊಬೈಲರ್ಸ್‌ಗಳಿಗೆ ಸನ್ಮಾನ ಮತ್ತು ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಹಸಿ ಹಾಗೂಒಣ ಕಸದ ಬಗ್ಗೆ ಮತ್ತು ರಸ್ತೆಗೆ ಕಸ ಹಾಕದಂತೆ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಾನ್ಯ ಪೌರಾಯುಕ್ತರಾದ ಎ ವಾಸಿಂ ಮತ್ತು ಆರೋಗ್ಯ ನಿರೀಕ್ಷಕರುಗಳು ಸುನಿಲ್ ಕುರ್ಮಾ, ಸಂಧ್ಯಾ, ಅಶೋಕ್ ಕುರ್ಮಾ, ಮಹಾಲಿಂಗರಾಜು, ನಯಾಜ್ ಶರೀಫ್ ಮತ್ತು ಕಚೇರಿ ಸಿಬ್ಬಂದಿ ವರ್ಗದವರು ಮತ್ತು ಮಹಿಳಾ ಸ್ವಸಹಾಯ ಸಂಘದವರು ಮತ್ತು ಪೌರಕಾರ್ಮಿಕರು ಇದ್ದರು.

ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ | ಶಾಸಕ ಎಂ.ಚಂದ್ರಪ್ಪ ಹೇಳಿಕೆ

# 10 ಕೋಟಿ ರೂ.ವೆಚ್ಚದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ

**ಚಿತ್ರದುರ್ಗ:** ಖಾಸಗಿ ಶಾಲೆಯನ್ನು ಮೀರಿಸುವ ರೀತಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ನೀಡಲಾಗುತ್ತದೆಂದು ಶಾಸಕ ಡಾ.ಎಂ.ಚಂದ್ರಪ್ಪ ತಿಳಿಸಿದರು.

ಹೊಳಲ್ಕೆರೆ ತಾಲ್ಲೂಕಿನ ಎನ್.ಜಿ.ಹಳ್ಳಿ ಗ್ರಾಮದಲ್ಲಿ 10 ಕೋಟಿ ರೂ.ವೆಚ್ಚದಲ್ಲಿ ನೂತನ ಕರ್ನಾಟಕ ಪಬ್ಲಿಕ್ ಶಾಲೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ಸಲ್ಲಿಸಿ ನಂತರ ಸರ್ಕಾರಿ ಪ್ರೌಢಶಾಲೆಯ ವಾರ್ಷಿಕೋತ್ಸವ, ಎನ್.ಜಿ.ಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಗೆ ಒಂದು ಬಸ್ ವಿತರಿಸಿ ಮಾತನಾಡಿದರು.

ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಲ್.ಕೆ.ಜಿ.ಯಿಂದ ಪಿ.ಯು.ಸಿ.ವರೆಗೆ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ನೀಡಲಾಗುವುದು. ಮಧ್ಯಾಹ್ನದ ಬಿಸಿಯೂಟ, ಪಠ್ಯಪುಸ್ತಕ, ಶೂ, ಸಾಕ್ಸ್, ಪೌಷ್ಟಿಕಾಂಶವುಳ್ಳ ಕಾಳುಗಳನ್ನು ನೀಡಲಾಗುವುದು. ಸುತ್ತಮುತ್ತಲಿನ ಹತ್ತಕ್ಕು ಹೆಚ್ಚು ಹಳ್ಳಿಗಳ ಮಕ್ಕಳು ಇಲ್ಲಿಗೆ ಬಂದು ಪಾಠ ಕಲಿಯಬಹುದು. ಬಡ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಾರದೆಂದು ಉಚಿತವಾಗಿ ಬಸ್‌ಗಳನ್ನು ಬಿಟ್ಟಿದ್ದೇನೆ. ಡ್ರೈವರ್ ಕಂಡಕ್ಟರ್‌ಗೆ ಸಂಬಳ ನೀಡಿ ಬಸ್‌ಗೆ ಡೀಸೆಲ್ ಕೂಡ ಹಾಕಿಸಲಾಗುವುದು. ಬೆಳಿಗ್ಗೆ ಮಕ್ಕಳನ್ನು ಮನೆಯಿಂದ ಶಾಲೆಗೆ ಕರೆ ತಂದು ಸಂಜೆ ಸುರಕ್ಷಿತವಾಗಿ ಮನೆಗೆ ತಲುಪಿಸಲಾಗುವುದು ಎಂದರು.



ರಾಜ್ಯದಲ್ಲಿ ಯಾವ ಶಾಸಕನು ಇಂತಹ ಪುಣ್ಯಸಾರ್ಥಕ ಕೆಲಸ ಮಾಡಿಲ್ಲ, ಮುಂದಿನ ದಿನಗಳಲ್ಲಿ ಎಲ್ಲಾ ಹಳೆಯ ಶಾಲೆಗಳನ್ನು ಕೆಡವಿ ಹತ್ತು ಕೋಟಿ ರೂ.ವೆಚ್ಚದಲ್ಲಿ ಉತ್ತಮ ಕಟ್ಟಡಗಳನ್ನು ಕಟ್ಟಿಸಿ ಖಾಸಗಿ ಶಾಲೆಗಳನ್ನು ಮೀರಿಸುವ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗುವುದು. ಪೋಷಕರುಗಳು ತಮ್ಮ ಮಕ್ಕಳನ್ನು ಕರ್ನಾಟಕ ಪಬ್ಲಿಕ್ ಶಾಲೆಗೆ ದಾಖಲಿಸಿ ಸಹಕರಿಸುವಂತೆ ಶಾಸಕ ಡಾ.ಎಂ.ಚಂದ್ರಪ್ಪ ಮನವಿ ಮಾಡಿದರು.

ದೇವಸ್ಥಾನಕ್ಕೆ ಈಗಾಗಲೆ ಹತ್ತು ಲಕ್ಷ ರೂ.ಗಳನ್ನು ಕೊಟ್ಟಿದ್ದೇನೆ. ಮುಂದಿನ ದಿನಗಳಲ್ಲಿ ನನ್ನ ಅನುದಾನದಲ್ಲಿ ಇನ್ನು ಹಣ ಕೊಡುತ್ತೇನೆ. ಎನ್.ಜಿ.ಹಳ್ಳಿ ಗೇಟ್‌ನಲ್ಲಿ ಪೊಲೀಸ್ ಉಪ ಠಾಣೆ ಅಗತ್ಯವಿರುವುದರಿಂದ ಗೃಹ ಮಂತ್ರಿ ಬಳಿ ಮಾತನಾಡಿ ಮಂಜೂರು ಮಾಡಿಸುತ್ತೇನೆಂದು ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ಮಾತನಾಡಿ, ಎನ್.ಜಿ.ಹಳ್ಳಿ ಗ್ರಾಮಕ್ಕೆ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಮಂಜೂರು ಮಾಡಿಸುವಂತೆ ಈ ಹಿಂದೆ ಶಾಸಕ ಡಾ.ಎಂ.ಚಂದ್ರಪ್ಪನವರಲ್ಲಿ ಮನವಿ ಮಾಡಿದ್ದೆ. ಅದರಂತೆ ಅವರು ಕರ್ನಾಟಕ ಪಬ್ಲಿಕ್ ಶಾಲೆಯನ್ನು ಕೊಟ್ಟು ಹೇಳಿದ ಮಾತಿನಂತೆ ನಡೆದುಕೊಂಡಿದ್ದಾರೆ. ಕೆಲವು ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳನ್ನು ಮೀರಿಸುವ ರೀತಿಯಲ್ಲಿವೆ. ಎನ್.ಜಿ.ಹಳ್ಳಿ ಹಾಗೂ ಸುತ್ತಮುತ್ತಲಿನ ಹತ್ತಾರು ಗ್ರಾಮದ ಮಕ್ಕಳು ಇಲ್ಲಿಗೆ ಬಂದು ಶಿಕ್ಷಣ ಪಡೆಯುವಂತೆ ತಿಳಿಸಿದರು.

ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳಾದ ಹೆಚ್ಚುವರಿ ಕೊಠಡಿ, ಗ್ರಂಥಾಲಯ, ಲೈಬ್ರರಿಯನ್ನು ತೆರೆಯಬೇಕು. ಶಿಕ್ಷಕರು ಮನೆ ಮನೆಗೆ ಹೋಗಿ ಮಕ್ಕಳನ್ನು ಶಾಲೆಗೆ ಕರೆ ತರುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಗ್ರಾಮಸ್ಥರು ಇಲ್ಲಿಗೆ ಮಕ್ಕಳನ್ನು ದಾಖಲಿಸಬೇಕು ಎಂದ ಅವರು, ಎನ್.ಜಿ.ಹಳ್ಳಿ ಗಡಿ ಭಾಗದಲ್ಲಿರುವುದರಿಂದ ಇಲ್ಲೊಂದು ಪೊಲೀಸ್ ಔಟ್‌ಪೋಸ್ಟ್ ಮಂಜೂರು ಮಾಡಿಸುವಂತೆ ಶಾಸಕ ಡಾ.ಎಂ.ಚಂದ್ರಪ್ಪ ಅವರಲ್ಲಿ ವಿನಂತಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್, ಕ್ಷೇತ್ರ ಸಮನ್ವಯಾಧಿಕಾರಿ ಸುರೇಂದ್ರನಾಥ್, ಹೊಳಲ್ಕೆರೆ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಲೋಕೇಶ್, ಜಿ.ಆರ್.ಗುರುಮೂರ್ತಿ, ಕುಮಾರ್, ಮೋಹನ್‌ಕುಮಾರ್, ಶ್ರೀನಿವಾಸ್, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರು.

# ಪರೀಕ್ಷೆ ಎನ್ನುವ ಭಯಬೇಡ



**ಚಿತ್ರದುರ್ಗ:** ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಧೈರ್ಯ, ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಂತ ಮುಖ್ಯ. ಭಯವನ್ನು ಬಿಟ್ಟು ಧೈರ್ಯದಿಂದ ಪರೀಕ್ಷೆ ಎದುರಿಸಿದರೆ ಉತ್ತಮ ಫಲಿತಾಂಶಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ರಂಗಸ್ವಾಮಿ ಕೆ. ತಾಲ್ಲೂಕು ಶಿಕ್ಷಣ ಸಂಯೋಜನ ಅಧಿಕಾರಿ ಇವರು ಹೇಳಿದರು.

ಹಿರಿಯೂರು ತಾಲ್ಲೂಕು ಯರಬಳ್ಳಿ ಗ್ರಾಮದ ಸರ್ಕಾರಿ ಪಿಎಂಶ್ರೀ ಮಾಧ್ಯಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾರದಾ ಪೂಜೆ ಹಾಗೂ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪರೀಕ್ಷೆ ಎಂದರೆ ಭಯಪಡುವ ವಿಷಯವಲ್ಲ, ಅದು ವಿದ್ಯಾರ್ಥಿಗಳು ವರ್ಷಪೂರ್ತಿ ಕಲಿತ ಜ್ಞಾನವನ್ನು ಪರೀಕ್ಷಿಸುವ ಒಂದು ಅವಕಾಶ ಮಾತ್ರ. ಮಕ್ಕಳು ಪರೀಕ್ಷೆ ಬಂದಾಗ ಆತಂಕಪಡದೇ ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಎದುರಿಸಬೇಕು. ನಿಯಮಿತವಾಗಿ ಓದುವುದು, ಸಮಯಕ್ಕೆ ಸರಿಯಾಗಿ ಪುನರವಲೋಕನ ಮಾಡುವುದು ಮತ್ತು ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುವುದು ಯಶಸ್ಸಿಗೆ ಸಹಾಯ ಮಾಡುತ್ತದೆ ಎಂದು ಮಕ್ಕಳಿಗೆ ಧೈರ್ಯ ಹೇಳಿದರು.

ಶಾಲೆಯ ಹಿರಿಯ ಮುಖ್ಯ ಶಿಕ್ಷಕ ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲೆ ಎಂದರೆ ಕೇವಲ ಓದುವ ಸ್ಥಳ ಮಾತ್ರವಲ್ಲ, ಅದು ವ್ಯಕ್ತಿತ್ವ ರೂಪುಗೊಳ್ಳುವ ಪವಿತ್ರ ಸ್ಥಳ. ಅಲ್ಲಿ ಪಡೆದ ಜ್ಞಾನ, ಶಿಕ್ಷಕರ ಮಾರ್ಗದರ್ಶನ, ಸ್ನೇಹಿತರ ಜೊತೆಗಿನ ಅನುಭವಗಳನ್ನು ಜೀವನ ಪೂರ್ತಿ ಮರೆಯದೆ ನೆನಪಿಟ್ಟುಕೊಂಡು ಓದಿದ ಶಾಲೆಗೆ ಋಣಿಗಳಾಗಿರಬೇಕು. ನಿಮ್ಮೆಲ್ಲರ ಮುಂದಿ ಶೈಕ್ಷಣಿಕ ಜೀವನಕ್ಕೆ ಶುಭವಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸವಿತಾ, ಮಂಜುನಾಥ್, ಶಬಾನ, ವಿಜಯಮ್ಮ ಸಂತೋಷ್ ಕುಮಾರ್, ದರ್ಶನ್, ಎಸ್‌ಡಿಎಂಸಿ ಅಧ್ಯಕ್ಷ ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಸುಮಲತಾ ಹಾಗೂ ಸದಸ್ಯರು ಮಾರ್ಗದರ್ಶಿ ಶಿಕ್ಷಕರಾದ ಶಶಿಕಲಾ, ಲಿಂಗರಾಜು, ಮಾರುತಿ, ಸಿ.ಬಿ. ಶಾರದಮ್ಮ, ದೈಹಿಕ ಶಿಕ್ಷಕ ಪಿ.ರಾಜಪ್ಪ, ಗ್ರಾಮದ ಮುಖಂಡರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

### ಜಿಲ್ಲಾಮಟ್ಟದ ನೌಕರರ ಸಮಾವೇಶ ಹಾಗೂ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಜಿಪಂ ಸಿಇಒ ಹೇಮಂತ್ ಎನ್.

# ಜನಸಾಮಾನ್ಯರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕಿದೆ



**ಶಿವಮೊಗ್ಗ :** ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳಿಗೆ ಧೈರ್ಯ ತುಂಬುವ ಕೆಲಸವನ್ನು ಸಂಘಗಳು ಮಾಡುವುದಲ್ಲ, ಜನಸಾಮಾನ್ಯರಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಹೇಮಂತ್ ಎನ್. ಹೇಳಿದರು.

ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಭಾನುವಾರ ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ನೌಕರರ ಸಮಾವೇಶ ಹಾಗೂ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಾನೂನಿನ ಅರಿವಿನ ಕೊರತೆ ಎಲ್ಲಿರುತ್ತದೆಯೋ ಅಲ್ಲಿ ಶೋಷಣೆಯಾಗುತ್ತದೆ. ನೌಕರರೇ ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾಗುತ್ತಾರೆಂದರೆ ಕಾನೂನಿನ ಅರಿವು ಇಲ್ಲ ಎಂದರ್ಥ. ಹೀಗಾಗಿ ಪರಿಶಿಷ್ಟ ಪಂಗಡಗಳ ನೌಕರರಿಗೆ ಕಾನೂನಿನ ಅರಿವು ನೀಡುವ ನಿಟ್ಟಿನಲ್ಲಿ ತರಬೇತಿ ಹಮ್ಮಿಕೊಳ್ಳಬೇಕಿದೆ ಎಂದರು.

ಕಾನೂನಿನ ಅರಿವು ಇಲ್ಲದಿದ್ದರೆ ಯಾವುದೇ ಕೆಲಸ ಮಾಡಲು ಧೈರ್ಯ ಬರುವುದಿಲ್ಲ, ಕಾನೂನು ಚೌಕಟ್ಟಿನಲ್ಲಿ ಹೇಗೆ ಮಾಡಬೇಕೆಂಬ ಜ್ಞಾನ ಇರಬೇಕು. ಕೆಲವೊಮ್ಮೆ ಕಾನೂನಿಗಿಂತ ಮಾನವೀಯತೆಯೂ ಬೇಕಾಗುತ್ತದೆ. ಇದನ್ನು ನೌಕರರು ಪಾಲಿಸಬೇಕಿದೆ ಎಂದರು.

ಬಹುತೇಕ ಅಧಿಕಾರಿಗಳು ಹಾಗೂ ನೌಕರರು ಅತ್ಯಂತ ಬಡತನದಿಂದ ಬಂದಿರುತ್ತಾರೆ. ಆದರೆ ಒಂದು ಹುದ್ದೆಗೆ ಹೋದ ಬಳಿಕ ತಾವು ಸಾಗಿ ಬಂದ ದಾರಿಯನ್ನೇ ಸಂಪೂರ್ಣ ಮರೆಯುತ್ತಾರೆ. ನಾವು ಕಷ್ಟಪಟ್ಟು ಬಂದಿದ್ದೇವೆ. ನಮ್ಮ ಬಳಿ ಬರುವ ಸಮುದಾಯ ಹಾಗೂ ಇತರೆ ಸಮುದಾಯದವರಿಗೆ ಸಹಾಯ ಮಾಡಬೇಕೆಂಬ ಮನೋಭಾವನೆಯನ್ನು ಬೆಳೆಸಿಕೊಂಡಿರುವುದಿಲ್ಲ ಎಂದರು.

ಸಂಘದಿಂದ ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ ನೀಡುವುದಾಗಿ ಹೇಳಿರುವುದು ಸಮಂಜಸವಲ್ಲ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಡೀ ದೇಶದಲ್ಲಿ ಸಾವಿರಾರು ಸಂಸ್ಥೆಗಳು ಹುಟ್ಟಿಕೊಂಡಿವೆ. ಈ ಸಂಸ್ಥೆಗಳ್ಯಾವು ಪರೀಕ್ಷೆಯನ್ನು ಹೇಗೆ ಬರೆಯಬೇಕೆಂಬ ತರಬೇತಿ ನೀಡುವುದಿಲ್ಲ, ಪರೀಕ್ಷಾ ತರಬೇತಿಗಿಂತ ಮೆಂಟರ್‌ಶಿಪ್ ಅತೀ ಮುಖ್ಯವಾಗಿ. ಪ್ರತಿಭಾವಂತರನ್ನು ಗುರುತಿಸಿ ಮೆಂಟರ್‌ಶಿಪ್‌ನಲ್ಲಿ ತರಬೇತಿ ನೀಡಿದರೆ ಸ್ಪರ್ಧಾತ್ಮಕ ಪರೀಕ್ಷೆ ಸುಲಭವಾಗಲಿದೆ ಎಂದು ಹೇಳಿದರು.

ಪರಿಶಿಷ್ಟ ಪಂಗಡದ ಜನ ಸಂಖ್ಯೆ ರಾಜ್ಯದಲ್ಲಿ ಸುಮಾರು 42 ರಿಂದ 45 ಲಕ್ಷ ಇದೆ. ಇದು ರಾಜ್ಯದ ಜನಸಂಖ್ಯೆಯ ಶೇ.7 ರಷ್ಟಾಗಿದೆ. ಈ ಸಮುದಾಯದಲ್ಲಿ ಶೇ.33 ರಷ್ಟು ತೀರಾ ಬಡವರಿದ್ದಾರೆ. ಅವರಿಗೆ ಸೌಲಭ್ಯಗಳನ್ನು ನೀಡುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಗಮನ ಹರಿಸಿದಾಗ ಸಮುದಾಯದ ಏಳಿಗೆ ಸಾಧ್ಯವೆಂದರು.

ಕ್ರೀಡಾ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಇಂದು ಆಗಬೇಕಿದೆ. ಈ ಕ್ಷೇತ್ರಗಳಲ್ಲಿ ಪ್ರತಿಭಾವಂತರಿದ್ದರೂ ಪ್ರೋತ್ಸಾಹ ಸಿಕ್ಕುತ್ತಿಲ್ಲ, ಹೊಸ ಸಾಂಸ್ಕೃತಿಕ ನಾಯಕರನ್ನು ಹುಟ್ಟು ಹಾಕಬೇಕಿದೆ ಎಂದರು.

ವಾಲ್ಮೀಕಿ ಜನಾಂಗದ ಸಾಂಸ್ಕೃತಿಕ ಜವಾಬ್ದಾರಿ ಕುರಿತು ವಿಶೇಷ ಉಪನ್ಯಾಸ ನೀಡಿದ ಕುವೆಂಪು ವಿವಿ ಕನ್ನಡ ಭಾರತಿ ಪ್ರಾಧ್ಯಾಪಕ ಡಾ. ಜಿ. ಪ್ರಶಾಂತ್ ನಾಯಕ್, ರಾಮಾಯಣ ಬರೆದ ವಾಲ್ಮೀಕಿ ಈ ಸಮುದಾಯದ ಬಹುದೊಡ್ಡ ಸಾಂಸ್ಕೃತಿಕ ನಾಯಕ. ರಾಮಾಯಣದಲ್ಲಿ, ಶಬರಿ ಸೇರಿದಂತೆ ಸಾಕಷ್ಟು ಸಾಂಸ್ಕೃತಿಕ ನಾಯಕರು ಬಂದು ಹೋಗಿದ್ದಾರೆ ಎಂದರು.

ಇಂದು ಡಾಕ್ಟರ್, ಇಂಜಿನಿಯರ್ ಮಾತ್ರ ಕೆಲಸಗಳೆಂದು ಪರಿಗಣಿಸಲಾಗುತ್ತಿದೆ. ಎಲ್ಲೆಂದರಲ್ಲಿ ತಲೆ ಎತ್ತಿರುವ ಪಿಯು ಕಾಲೇಜುಗಳು ಮಕ್ಕಳನ್ನು ಡಾಕ್ಟರ್, ಇಂಜಿನಿಯರ್‌ಗಳನ್ನಾಗಿ ಮಾಡುತ್ತೇವೆಂದು ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಿವೆ. ನಮ್ಮನ್ನು ನಾವು ಗುರುತಿಸಿಕೊಳ್ಳಲು ಸಾಂಸ್ಕೃತಿಕ ನಾಯಕರು ಬೇಕಿದೆ. ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣದ ಹೊರತಾಗಿಯೂ ಮಕ್ಕಳಿಗೆ ಸಾಕಷ್ಟು ಅವಕಾಶಗಳಿವೆ ಎಂಬುದನ್ನು ತಿಳಿಸಬೇಕಿದೆ ಎಂದರು.

> **ಕಳೆದ 70 ವರ್ಷಗಳಿಂದ ಜಿಲ್ಲೆಯ ಶರಾವತಿ ಸಂಸತ್ರಸ್ತರು ಭೂ ಹಕ್ಕು ಸಿಕ್ಕದೆ ಪರಿತಪಿಸುತ್ತಿದ್ದಾರೆ. ಆ ಸಮಸ್ಯೆಗೆ ತಾರ್ಕಿಕ ಅಂತ್ಯ ಕಾಣಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಹನುಮಂತಪ್ಪ ಕೆ.ಟಿ. ಅವಿರತವಾಗಿ ಶ್ರಮಿಸುತ್ತಿದ್ದಾರೆ. ಒಂದೂವರೆ ವರ್ಷಗಳಿಂದ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಈ ಸಮಸ್ಯೆ ಕಡತ ಮುಗಿಸಿಯೇ ಹೋಗುವುದಾಗಿ ಹೇಳುತ್ತಿದ್ದಾರೆ. ಕರ್ತವ್ಯದಲ್ಲಿ ಇಂತಹ ಬದ್ಧತೆ ಬೇಕಿದೆ.**
> ■ ಹೇಮಂತ್, ಜಿಪಂ ಸಿಇಒ

ಸಂಘದ ಅಧ್ಯಕ್ಷ ಎಂ.ಎಚ್. ಮಲ್ಲಿಕಾರ್ಜುನ ಅಧ್ಯಕ್ಷತೆ ವಹಿಸಿದ್ದರು.ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಹನುಮಂತಪ್ಪ, ಜಿಪಂ ಉಪಕಾರ್ಯದರ್ಶಿ ಅನ್ನಪೂರ್ಣ ಮುದುಕಮ್ಮನವರ್, ವಿಜಯಕುಮಾರ್ ಬಿ.ಎಂ., ಎಂ. ಕುಮಾರಸ್ವಾಮಿ, ಮೂಕಪ್ಪ ಕರಿಭೀಮಣ್ಣನವರ್ ಇದ್ದರು.

# ಸರ್ಕಾರದ ಯೋಜನೆ ತೆಗೆದುಹಾಕಲು ಸಾಧ್ಯವಿಲ್ಲ: ಮಧು



**ಶಿಕಾರಿಪುರ :** ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಜಾರಿಗೊಳಿಸಲಾದ ಕಾರ್ಯಕ್ರಮಗಳು ಶಾಶ್ವತವಾಗಿದ್ದು, ಭವಿಷ್ಯದಲ್ಲಿನ ಯಾವುದೇ ಸರ್ಕಾರ ತೆಗೆದುಹಾಕಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಭಾನುವಾರ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಅವರು ಮಾತನಾಡಿ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲಾ ಬಡವರ ಮತ್ತು ಹಿಂದುಳಿದವರ ಹಿತಾಸಕ್ತಿಗೆ ಆದ್ಯತೆ ನೀಡುತ್ತಾ ಬಂದಿದೆ. ಇಂದಿರಾ ಗಾಂಧಿಯವರ ಕಾಲದಿಂದಲೂ ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡುವುದು ಪಕ್ಷದ ಮೂಲ ಮಂತ್ರವಾಗಿದೆ. ಚುನಾವಣಾ ಪೂರ್ವದಲ್ಲಿ ಜನರಿಗೆ ನೀಡಿದ್ದ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸರ್ಕಾರ ನುಡಿದಂತೆ ನಡೆದಿದೆ. ಇದು ಕೇವಲ ರಾಜಕೀಯ ಗಿಮಿಕ್ ಅಲ್ಲ, ಬದಲಿಗೆ ಕಾಂಗ್ರೆಸ್ ಸರ್ಕಾರವು ಉಳಿಸಿಕೊಂಡು ಬಂದಿರುವ ನಿಜವಾದ ಮಾನವೀಯ ಮೌಲ್ಯಗಳ ಪ್ರತೀಕವಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ಕೊಡುಗೆಗಳನ್ನು ಸ್ಮರಿಸಿದ ಸಚಿವರು, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಿ, ಭೂರಹಿತರಿಗೆ ಭೂಮಿ ಮಂಜೂರು ಮಾಡಿದ್ದು ಹಾಗೂ ಗ್ರಾಮೀಣ ಕೃಪಾಂಕದಂತಹ ಐತಿಹಾಸಿಕ ತೀರ್ಮಾನಗಳು ಬಂಗಾರಪ್ಪನವರ ಬಡವರ ಪರ ಕಾಳಜಿಯನ್ನು ಎತ್ತಿ ತೋರಿಸುತ್ತವೆ. ಅವರ ಆಶಯದಂತೆಯೇ ನಾವು ಕೆಲಸ ಮಾಡುತ್ತಿದ್ದೇವೆ ಎಂದರು.

ಜಿಲ್ಲೆಯಲ್ಲಿ ಈಗಾಗಲೇ 15 ಇಂದಿರಾ ಕ್ಯಾಂಟೀನ್ ನಿರ್ಮಾಣವಾಗಿದ್ದು, ಶೀಘ್ರ ಹಳ್ಳಿಯಲ್ಲಿ ಶಿಕಾರಿಪುರದಲ್ಲಿಯೂ ಆರಂಭವಾಗಲಿದೆ ಬಡವರು ಕೂಲಿಕಾರರು ನಿತ್ಯ ಬೆಳಿಗ್ಗೆ ಕೇವಲ ರೂ.5 ನೀಡಿ ತಿಂಡಿ ಹಾಗೂ ರೂ.10 ನೀಡಿ ಊಟ ಪಡೆಯಬಹುದಾಗಿದೆ ಸರ್ಕಾರ ಉಳಿದ ಹೆಚ್ಚುವರಿ ಹಣ ಭರಿಸಲಿದೆ ಅಗತ್ಯವಿರುವ ಪ್ರತಿಯೊಬ್ಬರಿಗೂ ಇದರ ಲಾಭ ತಲುಪಬೇಕು ಎಂದ ಅವರು ಎಲ್ಲ 5 ಗ್ಯಾರಂಟಿ ಮುಂದುವರಿಯಲಿದ್ದು ರಾಜ್ಯದಲ್ಲಿ 46 ಸಾವಿರ ಶಾಲೆ,57 ಲಕ್ಷ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕಾಗಿ ಅತಿ ಹೆಚ್ಚಿನ ರೀತಿಯಲ್ಲಿ ಶ್ರಮಿಸುತ್ತಿದ್ದು ಜನತೆಗೆ ಸರ್ಕಾರ ಸೇವೆ ನೀಡಿದ್ದಾಗ ಮಾತ್ರ ಜನತೆ ನೆನಪಿಟ್ಟುಕೊಳ್ಳುತ್ತಾರೆ ಎಂಬ ಅರಿವು ಹೊಂದಿದ್ದೇವೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ರಂಗಸ್ವಾಮಿ ಮಾತನಾಡಿದರು. ಪುರಸಭೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ.85 ಅಧಿಕ ಅಂಕಗಳಿಸಿದ ಅರ್ಥ ವಿದ್ಯಾರ್ಥಿಗಳನ್ನು ಸಚಿವರು ಸನ್ಮಾನಿಸಿದರು.

ವೇದಿಕೆಯಲ್ಲಿ ಉಪವಿಭಾಗಾಧಿಕಾರಿ ವೀರೇಶ್, ತಹಶೀಲ್ದಾರ್ ವಾಣಿ, ಪುರಸಭೆ ಮುಖ್ಯಾಧಿಕಾರಿ ಭರತ್, ಮುಖಂಡರಾದ ಪುಷ್ಪಾ ಶಿವಕುಮಾರ್, ಗೋಣಿ ಮಾಲತೇಶ್, ಉಳ್ಳಿ ದರ್ಶನ್, ಭಂಡಾರಿ ಮಾಲತೇಶ್, ಬಡಗಿ ಪಾಲಾಕ್ಷಪ್ಪ, ಶಿವು ಸಂದಿಮನೆ, ರಾಘವೇಂದ್ರ ನಾಯ್ಕ ಮತ್ತಿತರರು ಪಾಲ್ಗೊಂಡಿದ್ದರು.

# ಪತ್ರಕರ್ತರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹೆಚ್ಚಿನ ಸಹಕಾರಿ



**ಭದ್ರಾವತಿ :** ಸದಾ ಕಾಲ ವೃತ್ತಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಪತ್ರಕರ್ತರಿಗೆ ಆರೋಗ್ಯ ಕಾಳಜಿ ಬಹಳ ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ತಪಾಸಣಾ ಶಿಬಿರಗಳು ಹೆಚ್ಚಿನ ಸಹಕಾರಿಯಾಗಲಿವೆ ಎಂದು ನಗರಸಭೆ ಹಿರಿಯ ಸದಸ್ಯ ಬಿ.ಕೆ ಮೋಹನ್ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ತಾಲೂಕು ಘಟಕದಿಂದ ಹಳೇನಗರ ಭೂತನಗುಡಿ ಡೆಕೇರ್- ಸರ್ಜಿಕಲ್ ಕೇರ್ ಡಯಾಗ್ನೋಸ್ಟಿಕ್ಸ್ ಸಹಯೋಗ ದೊಂದಿಗೆ ಪತ್ರಕರ್ತರು ಮತ್ತು ಅವರ ಕುಟುಂಬ ವರ್ಗದವರಿಗೆ ಭಾನುವಾರ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಕೆ.ವಿ ಶಿವಕುಮಾರ್ ಮಾತನಾಡಿ, ಪತ್ರಕರ್ತರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಅವರ ಸಂಕಷ್ಟದ ಸಮಯದಲ್ಲಿ ನೆರವಾಗಲು ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ನಗರಸಭೆ ಆಡಳಿತ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು. ಆ ಮೂಲಕ ಪತ್ರಕರ್ತರ ಮಕ್ಕಳ ಶಿಕ್ಷಣಕ್ಕೆ ಹಾಗು ತುರ್ತು ಸಂದರ್ಭಗಳಲ್ಲಿ ನೆರವಾಗಬೇಕು. ಸಮಾಜದಲ್ಲಿ ಪತ್ರಕರ್ತರು ಮತ್ತು ವೈದ್ಯರ ನಡುವಿನ ಬಾಂಧವ್ಯ ಸದಾ ಕಾಲ ಉತ್ತಮವಾಗಿರಬೇಕೆಂದರು.

ಈ ನಡುವೆ ಬಿ.ಕೆ ಮೋಹನ್‌ರವರು ಸ್ಥಳೀದಲ್ಲಿಯೇ ನಗರಸಭೆ ಪೌರಾಯುಕ್ತ ಕೆ.ಎನ್ ಹೇಮಂತ್ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಲು ಮುಂದಾಗುವಂತೆ ಮನವಿ ಮಾಡಿದರು.

ಎಸ್‌ಎಲ್‌ಎನ್ ಸಂಸ್ಥೆಯ ವೈದ್ಯಕೀಯ ನಿರ್ದೇಶಕ, ಹೃದಯ ರೋಗ ತಜ್ಞ ಡಾ. ಸುಶೀಲ್ ಎಸ್. ಶೆಟ್ಟಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಹೃದಯ ರೋಗಗಳು ಹೆಚ್ಚಾಗುತ್ತಿವೆ. ಹೃದಯ ಸಂಬಂಧಿ ರೋಗಗಳಿಗೆ ಹೆಚ್ಚಿನ ಹಣ ವ್ಯಯವಾಗಲಿದೆ. ಸಂಸ್ಥೆಯಿಂದ ಪತ್ರಕರ್ತರಿಗೆ ನೆರವಾಗಬೇಕೆಂಬ ಆಶಯದೊಂದಿಗೆ ಉಚಿತ ತಪಾಸಣೆ ನಡೆಸಲಾಗಿದೆ. ಮುಂದಿನ ದಿನಗಳಲ್ಲೂ ಇನ್ನೂ ಹೆಚ್ಚಿನ ಸಹಕಾರ ನೀಡಲು ಸಂಸ್ಥೆ ಬದ್ಧವಿದೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಗಂಗಾನಾಯ್ಕ ಗೊಂದಿ ಅಧ್ಯಕ್ಷತೆವಹಿಸಿದ್ದರು. ಕಿಡ್ನಿ ರೋಗ ತಜ್ಞ ಡಾ. ಇಮ್ರಾನ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎನ್.ಯು ವೈದ್ಯನಾಥ್, ಪ್ರಧಾನ ಕಾರ್ಯದರ್ಶಿ ಆರ್. ಎಸ್ ಹಾಲಸ್ವಾಮಿ, ನಗರಸಭೆ ಸದಸ್ಯ ಬಸವರಾಜ ಬಿ. ಆನೇಕೊಪ್ಪ ಮತ್ತು ಪತ್ರಕಾಭವನ ಟ್ರಸ್ಟ್ ಅಧ್ಯಕ್ಷ ಕಣ್ಣಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಬಸವರಾಜ ಸ್ವಾಗತಿಸಿ, ರಾಬರ್ಟ್ ಪ್ರಾರ್ಥಿಸಿ, ಉಪಾಧ್ಯಕ್ಷ ಸುಭಾಷ್‌ರಾವ್ ಸಿಂಧ್ಯಾ ನಿರೂಪಿಸಿದರು. ಫಿಲೋಮಿನಾ .ಆರ್, ಅನಂತಕುಮಾರ್ ಕಾರ್ಯಕಾರಿ ಸಮಿತಿ ಸದಸ್ಯರು, ಅವರ ಕುಟುಂಬ ವರ್ಗದವರು ಪಾಲ್ಗೊಂಡಿದ್ದರು.

# ಕಾನಹಳ್ಳಿಯಲ್ಲಿ ಕದಂಬ ಹೆಮ್ಮಾಡಿದೇವನ ಕಾಲದ ವೀರಗಲ್ಲು ಪತ್ತೆ



**ಸೊರಬ:** ತಾಲೂಕಿನ ಕಾನಹಳ್ಳಿಯಲ್ಲಿ ಕ್ರಿ.ಶ. 1207ರ ಅವಧಿಯ ವೀರಗಲ್ಲನ್ನು ಇತಿಹಾಸ ಅಧ್ಯಯನಕಾರ ಉಳವಿಯ ಅವಿನಾಶ ಚಿಕ್ರಸಾಲಿ ಪತ್ತೆ ಮಾಡಿದ್ದಾರೆ.

ವೀರಗಲ್ಲು 9 ಅಡಿ ಉದ್ದ, 3 ಅಡಿ ಅಗಲವಿದ್ದು ಮೂರು ಹಂತಗಳಲ್ಲಿ ಖಂಡರಿಸಲಾಗಿದೆ. ಕೆಳಗಿನ ಹಂತದಲ್ಲಿ ವೀರನು ಬಿಲ್ಲು, ಬಾಣ ಆಯುಧಗಳನ್ನು ಹಿಡಿದು ವೈರಿಯೊಂದಿಗೆ ಹೋರಾಡುತ್ತಿರುವ ಚಿತ್ರಣವಿದ್ದು, ಮಧ್ಯದಲ್ಲಿ ಕಾಳಗದಲ್ಲಿ ವೀರಮರಣ ಹೊಂದಿದ ವೀರನನ್ನು ಸುರಾಂಗನೆಯರು ದೇವಲೋಕಕ್ಕೆ ಕೊಂಡೊಯ್ಯುವ ಚಿತ್ರಣವಿದೆ. ಮೇಲಿನ ಹಂತದಲ್ಲಿ ದೇವಲೋಕದ ಸಂಕೇತವಾಗಿ ಶಿವಲಿಂಗ, ನಂದಿ ಹಾಗೂ ಪದ್ಮಾಸನದಲ್ಲಿ ಕೈ ಮುಗಿದು ಪ್ರಾರ್ಥಿಸುತ್ತಿರುವ ವೀರನನ್ನು ಖಂಡರಿಸಲಾಗಿದೆ.

ಇದರಲ್ಲಿ 14 ಸಾಲಿನ ಶಾಸನ ಪಾಠವನ್ನು ಎರಡು ಪಟ್ಟಿಕೆಗಳಲ್ಲಿ ಬರೆಯಲಾಗಿದೆ. ಚಾಲುಕ್ಯ ಅರಸನಾದ ಜಗದೇಕಮಲ್ಲನ ಆಡಳಿತವನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಜಗದೇಕಮಲ್ಲನನ್ನು ಶಾಸನವು ಪೃಥ್ವಿ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮ ಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಲುಕ್ಯಾಭರಣ ಎಂಬ ಬಿರುದುಗಳನ್ನು ಒಳಗೊಂಡಿದೆ. ಈ ಅವಧಿಯಲ್ಲಿ ಬನವಾಸಿ ಹನ್ನೆರೆಡು ಸಾವಿರ ರಾಜ್ಯವನ್ನು ಹಾನಗಲ್ಲಿನ ಕದಂಬ ಚಿಕ್ರೇಶ್ವರ ಕೀರ್ತಿದೇವನ ಕುಮಾರ ಹೆಮ್ಮಾಡಿದೇವನು ಆಳುತ್ತಿರುತ್ತಾನೆ. ಈ ಅವಧಿಯಲ್ಲಿ ಬನವಾಸಿ ನಾಡಿನ ಮನ್ನೇಯ ಮಾಂಡಳೀಕನ ಅನುಮತಿ ಪಡೆದು ಕಾನಹಳ್ಳಿಯ ಹಡವಳ ಕನ್ನಯ್ಯನು ಒಂದು ಕಾಳಗದಲ್ಲಿ ತಾನೇ ನೇರವಾಗಿ ಹೋರಾಟಕ್ಕೆ ದುಮುಕುತ್ತಾನೆ. ಹೋರಾಟದಲ್ಲಿ ವಿರೋಧಿಗಳ ಕುದುರೆಗಳನ್ನು ಹಲವು ಸೈನಿಕರನ್ನು ಕೊಂದು ವೀರಭಟನಾಗಿ ಸ್ವರ್ಗ ಪಡೆಯುತ್ತಾನೆ. ಶಾಸನದ 10ನೇ ಸಾಲಿನ ಹಲವು ಅಕ್ಷರಗಳು ಅಳಿಸಿ ಹೋಗಿರುವುದರಿಂದ ಕನ್ನಯ್ಯನು ಯಾರೊಂದಿಗೆ ಕಾಳಗ ಮಾಡಿದ ಎಂಬ ಮಾಹಿತಿ ದೊರೆಯುತ್ತಿಲ್ಲ,ಆತನ ಕುಟುಂಬಕ್ಕೆ ಹೆಮ್ಮಾಡಿದೇವನು ಕಾನಹಳ್ಳಿಯ ನಾಯಕ ವೃತ್ತಿಯನ್ನು ಮರು ನೀಡುತ್ತಾನೆ. ಈ ವೀರಗಲ್ಲನ್ನು ಬೀರಯ್ಯ ಎಂಬುವವನು ರಚಿಸಿದ್ದಾನೆ. ಸೊರಬ ತಾಲ್ಲೂಕಿನಲ್ಲಿ ಹೆಮ್ಮಾಡಿ ದೇವನ ಉಲ್ಲೇಖ ಇದೇ ಮೊದಲನೆಯದ್ದಾಗಿದೆ. ಕನ್ನಯ್ಯ ಎಂಬ ಕಾನಹಳ್ಳಿಯ ನಾಯಕನು ನೇರವಾಗಿ ಕಾಳಗಕ್ಕೆ ಇಳಿದಿದ್ದು ಇದು ಅಂದಿನ ವೀರತ್ವದ ಸಂಕೇತವಾಗಿದೆ. ಕಾನಹಳ್ಳಿ ಆ ವೇಳೆಗಾಗಲೇ ಅವರಿಬ್ಬರ ಆಡಳಿತಗಾರರನ್ನು ಹೊಂದಿತ್ತು ಎಂಬುದು ಈ ಶಾಸನದಿಂದ ತಿಳಿದು ಬರುತ್ತದೆ.

ಈ ವೀರಗಲ್ಲು ದೊರೆತ ಸ್ಥಳದಿಂದ 800 ಮೀ ದೂರದಲ್ಲಿ ಐದನೇ ಶತಮಾನಕ್ಕೆ ಸೇರಿದ ಸಿಂಹಶಿಲ್ಪ ಪತ್ತೆಯಾಗಿದೆ. ಇದು 65 ಸೆಂ ಮೀ ಉದ್ದ 12 ಸೆಂ ಮೀ ಎತ್ತರವಿದ್ದು ಮುಂಭಾಗದ ಒಂದು ಭಾಗ ಒಡೆದು ಹೋಗಿದೆ. ಇದನ್ನು ಕದಂಬರ ಆಡಳಿತ ನೆಲೆಯ ಸಂಕೇತ ಎಂತಲೂ ಪ್ರಾಚೀನ ನರಸಿಂಹ ಆರಾಧನೆ ಎಂದೂ ಗುರುತಿಸಲಾಗಿದೆ.

ಇದೇ ಪರಿಸರದಲ್ಲಿ ಕೋಟೆಗಳ ಸುತ್ತ ಕಾಣುವ ಬೃಹತ್ ಸುತ್ತಳತೆ ಇರುವ ಅಗಳ(ಕಾಲುವೆ) ಪತ್ತೆಯಾಗಿದ್ದು, ಆ ಪ್ರದೇಶದಲ್ಲಿ ಹಿಂದೆ ರಾಷ್ಟ್ರಕೂಟರ ಅವಧಿಯ ಕೋಣನತಲೆ ಶಿಲ್ಪ ಹಾಗೂ 13ನೇ ಶತಮಾನದ ಹೊಸಗುಂದದ ಸಾಂತರಸರ ಉಲ್ಲೇಖವಿರುವ ವೀರಗಲ್ಲು ಪತ್ತೆಯಾಗಿದ್ದು ಅಧ್ಯಯನ ಮಾಡಲಾಗಿದೆ.

> **ಶಾಸನದಲ್ಲಿ ಹಾನಗಲ್ ಕದಂಬರ ಹೆಮ್ಮಾಡಿ ದೇವನಉಲ್ಲೇಖ ಗಮನಾರ್ಹವಾಗಿದೆ. ವೀರಮರಣ ಹೊಂದಿದವ ಹಡವಳ ಕನ್ನಯ್ಯ ಎಂದಿರುವುದರಿಂದ ಈ ಭಾಗದಲ್ಲಿ ಹಡವಳ ಅಥವಾ ಪಡೆವಳರ (ಸ್ವಂತ ಸೈನ್ಯ ಉಳ್ಳವರು) ಇರುವಿಕೆಯನ್ನು ಸೂಚಿಸುತ್ತದೆ. ಸೊರಬ ಚೀಲನೂರು, ಕುಪ್ಪೆ ಮುಂತಾದೆಡೆ ಪಡೆವಳರಿದ್ದ ಬಗ್ಗೆ ಶಾಸನುಲ್ಲೇಖವಿದೆ.**
> ■ ಶ್ರೀಪಾದ ಬಿಚ್ಚುಗತ್ತಿ, ಯಲಸಿ. ಇತಿಹಾಸ ಸಂಶೋಧಕ

ಈ ಕ್ಷೇತ್ರಕಾರ್ಯಕ್ಕೆ ಇತಿಹಾಸ ಸಂಶೋಧಕರಾದ ರಮೇಶ್ ಬಿ ಹಿರೇಜಂಬೂರು ಸ್ಥಳಕ್ಕೆ ಬೇಟಿ ನೀಡಿ ಮಾರ್ಗದರ್ಶನ ಮಾಡಿದ್ದು, ಶಾಸನ ವಿಶ್ಲೇಷಣೆ ಮಾಡಿದ್ದಾರೆ, ಪರಿಸರ ಅಧ್ಯಯನಕಾರರಾದ ಅರುಣಕುಮಾರ್ ಜಿ, ಗ್ರಾಮಸ್ಥರಾದ ನೆಮ್ಮದಿ ಸಂತೋಷ್, ಸೋಮಶೇಖರ, ಸೋಮಪ್ಪ ಹಾಗೂ ಟೋಕಪ್ಪ ಶಾಸನ ಪತ್ತೆ ಹಚ್ಚಲು ಸಹಕರಿಸಿದ್ದಾರೆ.

# ಮಳೆಗಾಗಿ ಕಳಸೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸುವಾಗಲೇ ತಂಪಾದ ಇಳೆ



**ಚಿಕ್ಕಮಗಳೂರು:** ಮಳೆಗಾಗಿ ಕಳಸೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವಾಗಲೇ ಆಕಾಶ ಕಪ್ಪಿಟ್ಟು, ಧಾರಾಕಾರವಾಗಿ ಮಳೆ ಸುರಿದು ಇಳೆಗೆ ತಂಪೆರೆದ ಪ್ರಸಂಗ ಕಳಸದಲ್ಲಿ ಬಾನುವಾರ ನಡೆದಿದ್ದು, ಭಕ್ತರು ಹಾಗೂ ರೈತರಲ್ಲಿ ಸಂಭ್ರಮ ಮನೆ ಮಾಡಿದೆ.

ಮಲೆನಾಡು ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಬಿಸಿಲ ಬೇಗೆಗೆ ಜನತೆ ಕಂಗಾಲಾಗಿದ್ದರು. ವಿಶೇಷವೆಂದರೆ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿಯಾದ ಕಳಸದ ಶ್ರೀ ಕಳಸೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಇಂದು ನಾಡಿನ ಸುವೃಷ್ಟಿಗಾಗಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗಿನಿಂದ ನಿರಂತರವಾಗಿ ಶತರುದ್ರಾಭಿಷೇಕ, ಏಕಾದಶ ರುದ್ರಹೋಮ, ಸರ್ವಾಂಗ ಸುಂದರಿ ಅಮ್ಮನವರಿಗೆ ಸಹಸ್ರ ಕುಂಕುಮಾರ್ಚನೆ, ಆನೆ ವಿಘ್ನೇಶ್ವರ ಸ್ವಾಮಿಗೆ ಚರುಬಲಿ ಸೇವೆ ಇನ್ನಿತರೆ ಧಾರ್ಮಿಕ ಕೈಂಕರ್ಯದೊಂದಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಭಕ್ತರು ಕಳಸದ ಕಳಸೇಶ್ವರನಿಗೆ ಉಘೇ ಎನ್ನುತ್ತಾ ಮಳೆಗಾಗಿ ಮೊರೆ ಹೋಗಿದ್ದರು.

ದೇವಸ್ಥಾನದಲ್ಲಿ ಧಾರ್ಮಿಕ ವಿಧಿ, ವಿಧಾನಗಳು ಮುಗಿಯುವ ಹಂತಕ್ಕೆ ಬರುತ್ತಿದ್ದಂತೆಯೇ, ಮಲೆನಾಡು ಭಾಗದ ಆಗಸದಲ್ಲಿ ಮೋಡ ಕವಿದು ಧಾರಾಕಾರ ಮಳೆ ಸುರಿಯಲಾರಂಭಿಸಿತು.

ಕಳಸ ಪಟ್ಟಣದ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವರ್ಷದ ಮೊದಲ ಮಳೆ ಸುರಿದಿರುವುದು ರೈತರು, ಬೆಳೆಗಾರರು, ಸಾರ್ವಜನಿಕರ ಸಂತಸಕ್ಕೆ ಪಾರವೇ ಇಲ್ಲದಂತಾಯಿತು. ಕಲಸೇಶ್ವರ ಸ್ವಾಮಿಯ ಪವಾಡ ಮತ್ತು ಭಕ್ತರ ಪ್ರಾರ್ಥನೆಗೆ ಸಿಕ್ಕ ಪ್ರತಿಫಲ ಎಂದು ಹರ್ಷ ವ್ಯಕ್ತಪಡಿಸಿದರು.



### ಹೊರ ಜಿಲ್ಲೆಗಳಿಂದಲೂ ಹೆರಿಗೆಗೆ ಆಗಮನ | ಬೆಡ್ ಇಲ್ಲದೆ ಬಾಣಂತಿಯರಿಗೆ ನೆಲದ ಮೇಲೆ ಹಾಸಿಗೆ

# ಸಾಗರ ತಾಯಿ ಮಗು ಆಸ್ಪತ್ರೆ; ಕೊರತೆಗಳದ್ದೇ ದರ್ಬಾರು

▸ ಜಿ.ನಾಗೇಶ್ ಸಾಗರ

ದಿಗಂತ ವಿಶೇಷ



**ಸಾಗರ :** ಶಿವಮೊಗ್ಗ ಜಿಲ್ಲೆಯ ಸಾಗರದ ತಾಯಿಮಗು ಆಸ್ಪತ್ರೆ ರಾಜ್ಯದಲ್ಲಿಯೆ ಅತಿಹೆಚ್ಚು ಹೆರಿಗೆ ಮಾಡಿಸುವ ತಾಲ್ಲೂಕು ಆಸ್ಪತ್ರೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೊರತೆ ನಡುವೆಯೂ ಇಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯಸಿಬ್ಬಂದಿಗಳ ಬದ್ಧತೆಯಿಂದಾಗಿ ತಾಯಿಮಗು ಆಸ್ಪತ್ರೆಗೆ ಜಿಲ್ಲೆ ಹೊರಜಿಲ್ಲೆಗಳಿಂದಲೂ ಗರ್ಭಿಣಿಯರನ್ನು ಹೆರಿಗೆಗೆ ಕರೆದುಕೊಂಡು ಬರುತ್ತಿದ್ದಾರೆ.

**2015-16ರಲ್ಲಿ ಪ್ರಾರಂಭ :** ಸಾಗರ ದಲ್ಲಿರುವ ಉಪವಿಭಾಗೀಯ ಆಸ್ಪತ್ರೆಗೆ ಹೆಚ್ಚುತ್ತಿರುವ ರೋಗಿಗಳ ಸಂಖ್ಯೆ, ಪ್ರತಿದಿನ ನಡೆಯುವ ಹೆರಿಗೆಗಳ ಅಂಕಿಅಂಶ ಗಮನಿಸಿ 2015-16ರಲ್ಲಿ ಕಾಗೋಡು ತಿಮ್ಮಪ್ಪ ಅವರ ಮುಂದಾಲೋಚನೆಯಿಂದಾಗಿ ಶಿವಮೊಗ್ಗ ರಸ್ತೆಯಲ್ಲಿ ತಾಯಿಮಗು ಸುಸಜ್ಜಿತ ಆಸ್ಪತ್ರೆಯನ್ನು ಒಂದೇ ವರ್ಷದಲ್ಲಿ ನಿರ್ಮಿಸಿ ಲೋಕಾರ್ಪಣೆಗೊಳಿಸಿದರು. ನಂತರ ಶಾಸಕರಾಗಿ ಹರತಾಳು ಹಾಲಪ್ಪ ಬಂದಾಗಲೂ ತಾಯಿಮಗು ಆಸ್ಪತ್ರೆಗೆ ಒಂದಷ್ಟು ಮೂಲಭೂತ ಸೌಲಭ್ಯ ಒದಗಿಸಿ ಕೊಟ್ಟಿದ್ದಾರೆ. ಈಗಿನ ಶಾಸಕ ಗೋಪಾಲಕೃಷ್ಣ ಬೇಳೂರು ಆರೋಗ್ಯ ಮತ್ತು ಶಿಕ್ಷಣ ಇಲಾಖೆ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದು ಅಗತ್ಯ ಸೌಲಭ್ಯ ಕಲ್ಪಿಸುತ್ತಿದ್ದಾರೆ. ಆದರೆ ಸಾಗರದ ತಾಯಿಮಗು ಆಸ್ಪತ್ರೆಗೆ ಬೇಕಾದ ಸೌಲಭ್ಯ ತರುವಲ್ಲಿ ಶಾಸಕರು ಸಹ ಎಲ್ಲಿಯೋ ವಿಫಲವಾದಂತೆ ಕಾಣುತ್ತಿದೆ.

**ನೆಲದ ಮೇಲೆ ಬಾಣಂತಿಯರು :** ತಾಯಿಮಗು ಆಸ್ಪತ್ರೆ 100 ಹಾಸಿಗೆ ಸಾಮರ್ಥ್ಯಕ್ಕೆ ಮೇಲ್ದರ್ಜೆಗೆ ಏರಿಸಲಾಗಿದ್ದರೂ ಸೂಕ್ತ ಮೂಲಭೂತ ಸೌಲಭ್ಯ ಕೊರತೆ ಇರುವುದರಿಂದ 60 ಹಾಸಿಗೆ ಸಾಮರ್ಥ್ಯ ಎಂದೆ ಆರೋಗ್ಯ ಇಲಾಖೆಯಲ್ಲಿ ನಮೂದಾಗಿದೆ. ಸುಸಜ್ಜಿತ ಆಸ್ಪತ್ರೆ ಇದ್ದು ಸಾಕಷ್ಟು ಕೊಠಡಿಗಳಿದ್ದರೂ ವೈದ್ಯಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ.

ಪ್ರತಿ ತಿಂಗಳು ಕನಿಷ್ಟ 250ರಿಂದ 300 ಹೆರಿಗೆ ಆಗುತ್ತದೆ. ಬೆಡ್ ಕೊರತೆ ಇರುವುದರಿಂದ ಎಳೆ ಮಗು ಮತ್ತು ಬಾಣಂತಿಯರಿಗೆ ನೆಲದ ಮೇಲೆ ಹಾಸಿಗೆ ಹಾಸಿ ಮಲಗಿಸಲಾಗುತ್ತಿದೆ. ಬಾಣಂತಿಯರು ಎದ್ದು ಓಡಾಡಲು ಸಾಧ್ಯವಿಲ್ಲದಷ್ಟು ಕಿಷ್ಕಿಂದೆ ಜಾಗದಲ್ಲಿ ಮಲಗುತ್ತಿದ್ದಾರೆ. ಆಸ್ಪತ್ರೆಯಲ್ಲಿ ಕೊಠಡಿಗಳ ಸಂಖ್ಯೆಗೇನೂ ಕಡಿಮೆ ಇಲ್ಲ, ಆದರೆ ತಾಲ್ಲೂಕು ವೈದ್ಯಾಧಿಕಾರಿಗಳ ಕಚೇರಿ ಅಲ್ಲಿಯೆ ಕಾರ್ಯನಿರ್ವಹಿಸುತ್ತಿದ್ದು ಎಂಟರಿಂದ ಹತ್ತು ಕೊಠಡಿಗಳನ್ನು ಅವರು ಆಕ್ರಮಿಸಿಕೊಂಡಿದ್ದಾರೆ. ಪ್ರತಿದಿನ ಆರೋಗ್ಯ ಇಲಾಖೆ ಮೀಟಿಂಗ್ ಎಂದು ನೂರಾರು ಜನ ಆಶಾ ಕಾರ್ಯಕರ್ತೆಯರು ಬಂದು ಹೋಗುತ್ತಿದ್ದು, ಮಗು ಮತ್ತು ಬಾಣಂತಿಗೆ ಸೋಂಕು ತಗಲುವ ಸಾಧ್ಯತೆ ಇದೆ ಎಂದು ತಾಯಂದಿರು ಅಳಲು ತೋಡಿ ಕೊಳ್ಳುತ್ತಾರೆ. ಇಲ್ಲಿಂದ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಬೇರೆ ಕಡೆ ಸ್ಥಳಾಂತರಿಸಿ ಎಂದು ಒತ್ತಾಯಿಸುತ್ತಲೇ ಬರುತ್ತಿದ್ದು, ಶಾಸಕರು ಯಾಕೋ ಕಿವಿ ಮೇಲೆ ಹಾಕಿಕೊಳ್ಳುತ್ತಿಲ್ಲ ಎನ್ನುತ್ತಾರೆ ವೈದ್ಯಸಿಬ್ಬಂದಿಗಳು.

**ವೈದ್ಯ ಸಿಬ್ಬಂದಿ ಕೊರತೆ :** ಸಾಗರ ತಾಯಿಮಗು ಆಸ್ಪತ್ರೆಗೆ 40 ಜನ ವೈದ್ಯಸಿಬ್ಬಂದಿಗಳು ಅಗತ್ಯವಿದೆ. ಆದರೆ ಇರುವುದು ಇಬ್ಬರು ಹೆರಿಗೆ ತಜ್ಞರು, ಓರ್ವ ಗುತ್ತಿಗೆ ಆಧಾರದ ಮೇಲೆ ಅನಸ್ತೇಸಿಯಾ ವೈದ್ಯರು ಮಾತ್ರ ಇದ್ದಾರೆ. ನರ್ಸ್ ಮತ್ತು ಸಿಬ್ಬಂದಿ ಕೇವಲ 16 ಜನ ಇದ್ದಾರೆ. ಈ ಪೈಕಿ 8 ಖಾಯಂ ನೌಕರರಾದರೆ, ಉಳಿದ 8 ಜನ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

- ಸಾಗರ, ಸೊರಬ, ಸಿದ್ದಾಪುರ, ಹೊಸನಗರ, ಶಿಕಾರಿಪುರ, ಹಾನಗಲ್, ಹಿರೇಕೆರೂರು ಭಾಗದಿಂದ ಪ್ರತಿದಿನ ಹೆರಿಗೆಗಾಗಿ ಬರುತ್ತಾರೆ.
- ಈತನಕ ಆಸ್ಪತ್ರೆಯಲ್ಲಿ 50 ಸಾವಿರಕ್ಕೂ ಹೆಚ್ಚಿನ ಸಂತಾನಹರಣ ಚಿಕಿತ್ಸೆ ಮಾಡಲಾಗಿದೆ
- ಪ್ರತಿ ವರ್ಷ 2700ರಿಂದ 3000 ಹೆರಿಗೆ ಆಗುತ್ತಿದೆ
- ನಾಲ್ಕು ಮಕ್ಕಳ ತಜ್ಞರು, ಇಬ್ಬರು ಅನಸ್ತೆಸಿಯಾ, ಇನ್ನು ಐದು ಜನ ಹೆರಿಗೆ ತಜ್ಞರ ಅಗತ್ಯ ಇದೆ.
- ತಾಯಿಮಗು ಆಸ್ಪತ್ರೆಯಲ್ಲಿ ಸುಸಜ್ಜಿತ ಕಚೇರಿ ಇಲ್ಲ.

ಡಾ. ನಾಗೇಂದ್ರಪ್ಪ ನೇತೃತ್ವದಲ್ಲಿ ಆಸ್ಪತ್ರೆಯಲ್ಲಿ ಉತ್ತಮ ಆರೋಗ್ಯ ಸೇವೆಯೇನೋ ಸಿಗುತ್ತಿದೆ. ಆದರೆ ಬರುವ ಗರ್ಭಿಣಿಯರಿಗೆ ಸ್ಥಳಾವಕಾಶ ಕಲ್ಪಿಸಲು ವೈದ್ಯ ಸಿಬ್ಬಂದಿಗಳು ಹರಸಾಹಸ ಪಡುತ್ತಿದ್ದಾರೆ. ತಾಯಿಮಗು ಆಸ್ಪತ್ರೆ ಎಂದಾಕ್ಷಣ ಅಲ್ಲಿ ಮಕ್ಕಳ ತಜ್ಞರು ಖಾಯಂ ಇರಬೇಕು. ಆದರೆ ಮಕ್ಕಳ ತಜ್ಞರು ವಿಸಿಟಿಂಗ್ ಡಾಕ್ಟರ್ ರೀತಿ ಬಂದು ಹೋಗುತ್ತಾರೆ. ತುರ್ತು ಸಂದರ್ಭದಲ್ಲಿ ಮಕ್ಕಳ ವೈದ್ಯರನ್ನು ಭೇಟಿ ಮಾಡಬೇಕು ಎಂದರೆ ಆಟೋದಲ್ಲಿ ಉಪವಿಭಾಗೀಯ ಆಸ್ಪತ್ರೆಗೆ ಕರೆದುಕೊಂಡು ಬರುವ ಸ್ಥಿತಿ ಇದೆ. ಖಾಯಂ ಮಕ್ಕಳ ತಜ್ಞರನ್ನು ನೇಮಕ ಮಾಡಿ ಎಂದರೆ ಶಾಸಕರು ಯಾಕೋ ಕಿವಿ ಮೇಲೆ ಹಾಕಿಕೊಳ್ಳುತ್ತಿಲ್ಲ. ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಇದ್ದರೂ ಅವರು ಉಪವಿಭಾಗೀಯ ಆಸ್ಪತ್ರೆಗೆ ಸೀಮಿತವಾಗಿದ್ದಾರೆ.

ಇನ್ನಾದರೂ ತಾಯಿಮಗು ಆಸ್ಪತ್ರೆಗೆ ಕೊರತೆ ಇರುವ ವೈದ್ಯ ಸಿಬ್ಬಂದಿಗಳನ್ನು ನೇಮಕ ಮಾಡಬೇಕು. ಬಾಣಂತಿ, ಹಸುಗೂಸನ್ನು ನೆಲದ ಮೇಲೆ ಬೆಡ್ ಹಾಕಿ ಮಲಗಿಸದೆ ಅವರಿಗೆ ಮಂಚದ ವ್ಯವಸ್ಥೆ ಮಾಡಬೇಕಾಗಿದೆ.



Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

## ಕಿರುಸುದ್ದಿ

### ಯುದ್ಧದ ಬಿಸಿ: ಎಫ್-1 ರೇಸ್ ಮುಂದೂಡಿಕೆ

• **ದುಬೈ:** ಸೌದಿ ಅರೇಬಿಯಾ ಮತ್ತು ಬಹ್ರೇನ್‌ನಲ್ಲಿ ನಡೆಯಬೇಕಿದ್ದ ಫಾರ್ಮುಲಾ 1 ರೇಸ್ ಮಧ್ಯಪ್ರಾಚ್ಯದಲ್ಲಿ ಹೆಚ್ಚಾಗುತ್ತಿರುವ ಯುದ್ಧ ತೀವ್ರತೆಯಿಂದ ಮುಂದೂಡಲಾಗಿದೆ. ಗಲ್ಫ್ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾದ ಪರಿಣಾಮ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಂತಾರಾಷ್ಟ್ರೀಯ ಮೋಟಾರ್ ಸ್ಪೋರ್ಟ್ಸ್ ಸಂಸ್ಥೆ ಶನಿವಾರದಂದು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದೆ. ವಿಶ್ವಾದ್ಯಂತ ಹೆಚ್ಚಾದ ಯುದ್ಧ ಉದ್ವೇಗದಿಂದಾಗಿ ಈ ಬಾರಿಯ ಗ್ರ್ಯಾಂಡ್ ಪ್ರಿಕ್ಸ್ ಕೂಟ ಮುಂದೂಡಲಾಗಿದೆ ಎಂದು ಹೇಳಿದೆ. ಮುಂದೂಡಿಕೆ ಅನಿರ್ದಿಷ್ಟಾವಧಿಗೆ ಸೀಮೀತವಾಗಿರಲಿದೆ. ಮುಂದಿನ ದಿನಾಂಕ ಚರ್ಚಿಸಿ ಪರಿಸ್ಥಿತಿಗೆ ತಕ್ಕಂತೆ ತೀರ್ಮಾನ ಮಾಡಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಏಪ್ರಿಲ್ 10-12ರವರೆಗೆ ಕೂಟ ನಡೆಯಬೇಕಿತ್ತು.

### ಓಪನ್ ಜಂಪ್ಸ್: ಸರ್ವೇಶ್ ಚಾಂಪಿಯನ್

• **ಬೆಂಗಳೂರು:** ಇಲ್ಲಿ ನಡೆಯುತ್ತಿರುವ 5ನೇ ಓಪನ್ ಜಂಪ್ಸ್ ಕ್ರೀಡಾಕೂಟದಲ್ಲಿ ಮಹಾರಾಷ್ಟ್ರದ ಸರ್ವೇಶ್ ಕುಶಾರೆ ಚಾಂಪಿಯನ್ ಅನಿಸಿಕೊಂಡರು. ಬೆಂಗಳೂರಿನ ಅಂಜು ಬಾಬ್ಬಿ ಹೈ ಪರ್ಫಾಮನ್ಸ್ ಸೆಂಟರ್‌ನಲ್ಲಿ ನಡೆದ ಈ ಕೂಟದಲ್ಲಿ ಮಿಂಚಿದ ಅವರು ಪದಕ ಗಿಟ್ಟಿಸಿಕೊಂಡರೂ ದಾಖಲೆ ಬರೆಯಲಾಗಲಿಲ್ಲ, 2.16 ಮೀ. ದೂರದ ಜಿಗಿತದೊಂದಿಗೆ ಸರ್ವೇಶ್ ಈ ಸಾಧನೆ ಮಾಡಿದರು. 2020ರ ಟೋಕಿಯೊ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಪ್ಯಾರಾ ಅಥ್ಲೀಟ್ ನಿಶಾದ್ ಕುಮಾರ್ ಅವರು 2.10 ಮೀ. ದೂರ ಜಿಗಿದರೂ ಐದನೇ ಸ್ಥಾನಕ್ಕೆ ತೃಪ್ತರಾದರು. ಅಬ್ದುಲ್ಲಾ 16.83ಮೀ.ದೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ 16.78ಮೀ.ದೊಂದಿಗೆ ಹೊರನಡೆದರು.

ದ್ರಾವಿಡ್, ಬಿನ್ನಿ, ಮಿಥಾಲಿಗೆ ಜೀವಮಾನ ಸಾಧನೆ ಪ್ರಶಸ್ತಿ । ದಿಲ್ಲಿಯಲ್ಲಿ ಸಂಪನ್ನಗೊಂಡ ನಮನ್ ಕಾರ್ಯಕ್ರಮ

# ಅಪ್ರತಿಮ ಕ್ರಿಕೆಟಿಗರಿಗೆ ಅತ್ಯುನ್ನತ ಗರಿ








• **ಹೊಸದಿಲ್ಲಿ:** ಕ್ರಿಕೆಟ್ ದಿಗ್ಗಜರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಮತ್ತು ಮಹಿಳಾ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಬಿಸಿಸಿಐ ದಿಲ್ಲಿಯಲ್ಲಿ ಭಾನುವಾರ ನಡೆದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಹಿರಿಯ ಕ್ರಿಕೆಟಿಗರು, ಹಾಲಿ-ಮಾಜಿ ಚಾಂಪಿಯನ್‌ಗಳು ಮತ್ತು ಕ್ರೀಡಾಳಿತ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಕ್ರಿಕೆಟಿಗರಿಗೆ ಗೌರವ ಸಲ್ಲಿಸಲಾಗಿದೆ. ಭಾರತೀಯ ಕ್ರಿಕೆಟಿಗೆ ಆಟಗಾರರಾಗಿ ಮಾರ್ಗದರ್ಶಕರಾಗಿ, ನಾಯಕರಾಗಿ ಮುಂದೆ ಕೋಚ್ ಆಗಿ ದೊಡ್ಡ ಕೊಡುಗೆಗಳನ್ನು ನೀಡಿರುವ ರಾಹುಲ್ ದ್ರಾವಿಡ್ ಅವರನ್ನು ದಿಗ್ಗಜ ಎಂದು ಬಣ್ಣಿಸಲಾದರೆ, ಇತ್ತ ರೋಜರ್ ಬಿನ್ನಿ ಅವರನ್ನು ಅಪ್ರತಿಮ ಕ್ರಿಕೆಟಿಗ, ಅತ್ಯುತ್ತಮ ಆಡಳಿತಗಾರ ಎನ್ನಲಾಗಿದೆ. ಇಬ್ಬರಿಗೂ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿ ನೀಡಲಾಗಿದೆ. ಇನ್ನು ಮಹಿಳಾ ಕ್ರಿಕೆಟ್‌ನಲ್ಲಿ ಅಚ್ಚಳಿಯದ ದಾಖಲೆಗಳನ್ನು ಮಾಡಿರುವ ಮಿಥಾಲಿ ರಾಜ್ ಅವರನ್ನು ಮಹಿಳಾ ಕ್ರಿಕೆಟ್‌ನ ಐಕಾನ್ ಎಂದು ಬಣ್ಣಿಸಲಾಗಿದ್ದು, ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.

ಇದರ ಜೊತೆಗೆ ಶುಭಮನ್ ಗಿಲ್ ಅವರಿಗೆ ವಾರ್ಷಿಕ ಅತ್ಯುತ್ತಮ ಆಟಗಾರ ಎಂಬ ಪಾಲಿ ಪ್ರಶಸ್ತಿ ನೀಡಲಾಗಿದೆ. ಮಂಧಾನ ಅವರಿಗೆ ಅತ್ಯುತ್ತಮ ಮಹಿಳಾ ಕ್ರಿಕೆಟರ್ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ ಆಟಗಾರರಿಗೆ ಇನ್ನಷ್ಟು ಉತ್ಸಾಹ ನೀಡುವುದಕ್ಕೆ ವಿವಿಧ ಪ್ರಶಸ್ತಿಗಳನ್ನೂ ನೀಡಲಾಗಿದೆ.

**ರಾಹುಲ್ ಕೊಡುಗೆಗೆ ತಕ್ಕ ಗರಿ:** ರಾಹುಲ್ ದ್ರಾವಿಡ್ ಅವರಿಗೆ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಟೀಂ ಇಂಡಿಯಾದ ಬಿಗ್ ಫೋರ್' ಬ್ಯಾಟಿಂಗ್ ಲೈನ್ ಅಪ್‌ನ ಭಾಗವಾಗಿದ್ದ ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್ ಅಂತಹ ದಿಗ್ಗಜರ ಪಟ್ಟಿಯಲ್ಲಿ ಒಬ್ಬರಾಗಿದ್ದರು. ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ದ್ರಾವಿಡ್ ನೀಡಿರುವ ಕೊಡುಗೆ ಅಪಾರ. ಏಕದಿನ ಮಾದರಿಯಲ್ಲಿ 10,000 ಕ್ಕೂ ಹೆಚ್ಚು ರನ್ ಗಳಿಸಿರುವ ದ್ರಾವಿಡ್, ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಪರ ಅತಿ ಹೆಚ್ಚು ರನ್ (13,288) ಗಳಿಸಿದ ಎರಡನೇ ಆಟಗಾರ ಎನಿಸಿಕೊಂಡಿದ್ದಾರೆ. 2012 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತರಾದ ದ್ರಾವಿಡ್, ಆ ಬಳಿಕ ವೀಕ್ಷಕ ವಿವರಣೆಗಾರನಾಗಿ ಕಾಣಿಸಿಕೊಂಡರು. ನಂತರ ತರಬೇತುದಾರರಾಗಿ ಭಾರತ 19 ವರ್ಷದೊಳಗಿನವರ ತಂಡವನ್ನು 2018 ರ ವಿಶ್ವಕಪ್‌ನಲ್ಲಿ ಚಾಂಪಿಯನ್ ಮಾಡಿದರು. ಮುಂದೆ ಹಿರಿಯರ ತಂಡಕ್ಕೆ ಪ್ರಧಾನ ಕೋಚ್ ಆಗಿ ನೇಮಕಗೊಂಡಿದ್ದ ದ್ರಾವಿಡ್, ತಮ್ಮ ಅವಧಿಯಲ್ಲಿ ತಂಡವನ್ನು 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿಸಿದ್ದರು. ಬಳಿಕ 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಚಾಂಪಿಯನ್ ಕೂಡ ಮಾಡಿದ್ದರು.

### ರೋಜರ್ ಬಿನ್ನಿಗೆ ಅತ್ಯುತ್ತಮ ಸಾಧನೆಗೆ ಪ್ರಶಸ್ತಿ

1983ರಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಗೆದ್ದಾಗ ತಂಡದ ಭಾಗವಾಗಿದ್ದ ರೋಜರ್ ಬಿನ್ನಿ ಕೂಡ ಕನ್ನಡಿಗರು. ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದ ಅವರು, ಭಾರತವೆಂದೂ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ. ವಿಶ್ವಕಪ್‌ನಲ್ಲಿ ನೆನಪಿಗೆ ಬರುವಂಥ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಅಷ್ಟಕ್ಕೇ ಸೀಮಿತವಾಗದೆ ಕೋಚ್ ಹುದ್ದೆಯಲ್ಲೂ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಬಿಸಿಸಿಐ ಆಡಳಿತಾಧಿಕಾರಿ ಕೂಡ ಆಗಿದ್ದ ಅವರು, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ವಿಭಿನ್ನ ಯೋಜನೆಗಳೊಂದಿಗೆ ಕೊಡುಗೆ ನೀಡಿದ್ದಾರೆ.

### ಮಿಥಾಲಿ ರಾಜ್ ಆಟಕ್ಕೆ ಸಂದ ಪ್ರಶಸ್ತಿ

ಭಾರತ ಮಹಿಳೆಯರ ಕ್ರಿಕೆಟ್ ಎಂದ ತಕ್ಷಣಕ್ಕೆ ನೆನಪಾಗಲೇ ಬೇಕಾದ ಹೆಸರಿದು. ವಿಶ್ವದ ಯಾವುದೇ ಮಹಿಳೆ ಮಾಡಲಾಗದ ದಾಖಲೆಗಳನ್ನು ಮಾಡಿದ್ದಾರೆ. ಇಲ್ಲಿಯವರೆಗೂ ಅತಿ ಹೆಚ್ಚು ರನ್ ಗಳಿಸಿದ ದಾಖಲೆಗಳನ್ನು ಮಾಡಿದ್ದಾರೆ. ಸಾಧನೆಗೆ ಯಾವುದೇ ಸರಿಸಾಟಿ ಇಲ್ಲದಂತೆ ಮುಂದೆ ನಾಯಕಿಯಾದ ಅವರು, ತಂಡ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಿಳಾ ಕ್ರಿಕೆಟ್‌ನಲ್ಲಿ ಭಾರತ ಎತ್ತರಕ್ಕೆ ಬೆಳೆಯಬೇಕಾದರೆ ಅವರ ಪಾತ್ರ ದೊಡ್ಡದು. ಈ ಎಲ್ಲಾ ಸಾಧನೆಗಳನ್ನು ಗಮನಿಸಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

### ಪ್ರಮುಖ ಪ್ರಶಸ್ತಿ ಪಟ್ಟಿ

| ಆಟಗಾರ/ ಆಟಗಾರ್ತಿ | ಪ್ರಶಸ್ತಿ |
|---|---|
| ರೋಜರ್ ಬಿನ್ನಿ | ಸಿ.ಕೆ. ನಾಯ್ಡು ಜೀವಮಾನ ಸಾಧನೆ |
| ರಾಹುಲ್ ದ್ರಾವಿಡ್ | ಸಿ.ಕೆ. ನಾಯ್ಡು ಜೀವಮಾನ ಸಾಧನೆ |
| ಮಿಥಾಲಿ ರಾಜ್ | ಜೀವಮಾನ ಸಾಧನೆ |
| ಶುಭಮನ್ ಗಿಲ್ | ಪಾಲಿ ಉಮ್ರಿಗರ್ |
| ಸ್ಮೃತಿ ಮಂಧಾನ | ವರ್ಷದ ಅತ್ಯುತ್ತಮ ಅಂತಾರಾಷ್ಟ್ರೀಯ ಆಟಗಾರ್ತಿ |
| ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ | ಎನ್ ಶ್ರೀ ಚರಣಿ |
| ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ | ಹರ್ಷಿತ್ ರಾಣಾ |

### ವಿವಿಧ ಆಟಗಾರರಿಗೆ ಪ್ರಶಸ್ತಿ

ಕಾರ್ಯಕ್ರಮದಲ್ಲಿ ವಿವಿಧ ಆಟಗಾರರಿಗೆ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ, ವಿಕೆಟ್ ಪಡೆದ ಆಟಗಾರರಿಗೂ ಪ್ರಶಸ್ತಿ ನೀಡಲಾಗಿದೆ. ಹರ್ಷಿತ್ ರಾಣ ಅವರಿಗೆ ವರ್ಷದಲ್ಲಿ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ ಎಂಬ ಪ್ರಶಸ್ತಿ ನೀಡಿದರೆ, ಸ್ನೇಹ ರಾಣಾ ಅವರಿಗೆ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ ಎಂಬ ಪ್ರಶಸ್ತಿ ನೀಡಲಾಗಿದೆ.

## ವಿಶ್ವಕಪ್ ಗೆದ್ದ ತಂಡಗಳಿಗೆ ಬಿಸಿಸಿಐ ಸನ್ಮಾನ




ಪುರುಷರ ಟಿ20 ವಿಶ್ವಕಪ್ ಚಾಂಪಿಯನ್ಸ್



ಚಾಂಪಿಯನ್ಸ್ ಟ್ರೋಫಿ ಚಾಂಪಿಯನ್ಸ್



ಮಹಿಳಾ ಏಕದಿನ ವಿಶ್ವಕಪ್ ಚಾಂಪಿಯನ್ಸ್



ಅಂಡರ್-19 ಏಕದಿನ ವಿಶ್ವಕಪ್ ಚಾಂಪಿಯನ್ಸ್



ಕಪ್ ವಿಜೇತ ನಾಯಕರು

• **ಹೊಸದಿಲ್ಲಿ:** ದಿಲ್ಲಿಯಲ್ಲಿ ನಡೆದ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವಕಪ್ ಗೆದ್ದ ಭಾರತೀಯ ತಂಡಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸನ್ಮಾನಿಸಿದೆ.

ಕ್ರಿಕೆಟ್‌ನಲ್ಲಿ ಭಾರತ 2025-26ರಲ್ಲಿ ಹೆಚ್ಚು ಸಾಧನೆಗಳನ್ನು ಮಾಡಿದ್ದು, ಈ ಬಗ್ಗೆ ಶ್ಲಾಘಿಸಿದ ಬಿಸಿಸಿಐ ಅಂಡರ್-19 ತಂಡ, ಏಕದಿನ ವಿಶ್ವಕಪ್ ಗೆದ್ದ ಮಹಿಳೆಯರ ಕ್ರಿಕೆಟ್ ತಂಡ ಹಾಗೂ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಿತು.

ಕಳೆದ ವರ್ಷ ಭಾರತದಲ್ಲೇ ನಡೆದಿದ್ದ ಮಹಿಳೆಯರ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಮಹಿಳಾ ತಂಡ ಇತಿಹಾಸ ಬರೆದಿತ್ತು. ವರ್ಷಾಂತ್ಯದಲ್ಲಿ ನಡೆದಿದ್ದ ಅಂಡರ್-19 ವಿಶ್ವಕಪ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರೆ ನೇತೃತ್ವದ ಭಾರತ ತಂಡ ವಿಶ್ವಕಪ್ ಗೆದ್ದು ಬೀಗಿತ್ತು. ಕಳೆದ ವಾರವಷ್ಟೇ ಮುಕ್ತಾಯಗೊಂಡಿರುವ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕಪ್ ಗೆದ್ದಿತ್ತು. ಈ ಮೂರೂ ತಂಡಗಳಿಗೆ ಬಿಸಿಸಿಐ ಸನ್ಮಾನಿಸಿದೆ.

## ಸ್ವದೇಶಕ್ಕೆ ಇರಾನಿ ಆಟಗಾರ್ತಿಯರು

• **ಪರ್ತ್:** ಇರಾನಿ ಬೆಂಬಲಿಗರು ದಾಳಿ ಮಾಡಲೆತ್ನಿಸಿದ ನಂತರ ಆಸ್ಟ್ರೇಲಿಯಾದಲ್ಲೇ ಆಶ್ರಯ ಪಡೆದಿದ್ದ ಮೂವರು ಇರಾನಿ ಫುಟ್‌ಬಾಲ್ ಆಟಗಾರ್ತಿಯರು ತಮ್ಮ ದೇಶಕ್ಕೆ ಮರಳಿದರು. ಏಷ್ಯಾಕಪ್ ಫುಟ್‌ಬಾಲ್ ಪಂದ್ಯಾವಳಿ ಆಸ್ಟ್ರೇಲಿಯಾದಲ್ಲಿ ನಡೆದಿತ್ತು. ಈ ಕೂಟದಲ್ಲಿ ಇರಾನ್ ಕೂಡ ಭಾಗವಹಿಸಿ ಸೋತು ಹೊರಬಂದಿತ್ತು. ಆದರೆ ಮೊದಲನೇ ಪಂದ್ಯದಲ್ಲಿ ಇರಾನಿ ಪಡೆಯ ಮೂವರು ಆಟಗಾರ್ತಿಯರು ಪ್ರತಿಭಟನೆ ರೂಪವಾಗಿ ಇರಾನ್‌ನ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದರು. ಅಲ್ಲಿನ ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಪ್ರತಿಭಟನೆ ನಡೆಸಲೆತ್ನಿಸಿದ್ದರು ಎಂಬ ವರದಿಗಳಿವೆ. ಹೀಗೆ ಮಾಡಿರುವುದಕ್ಕೆ ಹತಾಶಗೊಂಡಿದ್ದ ಆಸ್ಟ್ರೇಲಿಯಾದಲ್ಲಿನ ಇರಾನಿ ಬೆಂಬಲಿಗರು, ಆಟಗಾರರ ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಸುರಕ್ಷತಾ ಕ್ರಮವಾಗಿ ಆಸ್ಟ್ರೇಲಿಯಾ ಆ ಆಟಗಾರ್ತಿಯರನ್ನು ತನ್ನಲ್ಲೇ ಉಳಿಸಿಕೊಂಡಿತ್ತು. ಸೇಫ್ ಹೌಸ್‌ಗೆ ಕಳುಹಿಸಿತ್ತು. ಆದರೆ ಪರಿಸ್ಥಿತಿ ಸುಧಾರಿಸಿಕೊಂಡಿರುವ ನಂತರ ಮೂವರೂ ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ. ಇರಾನ್ ಫುಟ್‌ಬಾಲ್ ಸಂಸ್ಥೆ ಮೂವರೂ ಆಟಗಾರ್ತಿಯರ ಹೆಸರನ್ನು ಬಹಿರಂಗ ಪಡಿಸಿದ್ದು, ಮೊನಾ ಹಮೌದಿ, ಜಹ್ರಾ ಸಬಾರ್ಲಿ ಮತ್ತು ಜಹ್ರಾ ಮೇಷ್ಕರ್ ಎಂದು ಗುರುತಿಸಿದೆ. ಆಟಗಾರ್ತಿಯರು ಮಲೇಷ್ಯಾಗೆ ಅಲ್ಲಿಂದ ಪೂರ್ತಿ ತಂಡ ತೆಹ್ರಾನ್ ಮೂಲಕ ಸ್ವದೇಶಕ್ಕೆ ತಲುಪಲಿದೆ ಎಂದು ಹೇಳಲಾಗಿದೆ.




» ಸೇಫ್ ಹೌಸ್‌ನಲ್ಲಿದ್ದ ಮೂವರು

» ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದ ವಿವಾದ

## ಕೊಚ್ಚಿಯಲ್ಲಿ ಫುಟ್ಬಾಲ್ ಏಷ್ಯಾಕಪ್ ಅರ್ಹತಾ ಸುತ್ತು


• **ಕೊಚ್ಚಿ:** ಭಾರತದ ಹಿರಿಯ ಪುರುಷರ ಫುಟ್ಬಾಲ್ ತಂಡ ಏಷ್ಯಾಕಪ್ 2027 ಅರ್ಹತಾ ಸುತ್ತಿನ ಕೊನೆಯ ಪಂದ್ಯವನ್ನು ಮಾರ್ಚ್ 31ರಂದು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಹಾಂಗ್ ಕಾಂಗ್ ವಿರುದ್ಧ ಆಡಲಿದೆ.

ಈ ಪಂದ್ಯ ಕೊಚ್ಚಿ ಮೈದಾನದಲ್ಲಿ ಭಾರತೀಯ ತಂಡಕ್ಕೆ ವಿಶೇಷವಾಗಿದ್ದು, ಸುಮಾರು 10 ವರ್ಷಗಳ ನಂತರ ಇಲ್ಲಿ ಹಿರಿಯ ಪುರುಷರ ತಂಡದ ಪಂದ್ಯ ನಡೆಯಲಿದೆ. 2016 ಮಾರ್ಚ್‌ನಲ್ಲಿ ಇದೇ ಮೈದಾನದಲ್ಲಿ ಭಾರತ ತುರ್ಕ್‌ಮೆನಿಸ್ತಾನ್ ವಿರುದ್ಧ ವಿಶ್ವಕಪ್ ಅರ್ಹತಾ ಪಂದ್ಯ ಆಡಿತ್ತು. ಅದು ಕೇರಳದಲ್ಲಿ ಭಾರತೀಯ ತಂಡ ಆಡಿದ ಕೊನೆಯ ಪಂದ್ಯವಾಗಿತ್ತು. ಈ ಬಾರಿ ಏಷ್ಯಾ ಕಪ್ 2027 ಅರ್ಹತಾ ಸುತ್ತಿನಲ್ಲಿ ಭಾರತ ಈಗಾಗಲೇ ಮುಂದಿನ ಹಂತಕ್ಕೆ ಹೋಗುವ ಅವಕಾಶ ಕಳೆದುಕೊಂಡಿದೆ. ಆದರೂ ಅಂತಿಮ ಪಂದ್ಯದಲ್ಲಿ ಗೆಲುವಿನೊಂದಿಗೆ ಅಭಿಯಾನವನ್ನು ಮುಕ್ತಾಯಗೊಳಿಸುವುದು ತಂಡದ ಗುರಿಯಾಗಿದೆ. ಈ ಪಂದ್ಯದಲ್ಲಿ ಎರಡೂ ತಂಡಗಳು ಟೂರ್ನಿಯಿಂದ ಹೊರಬಿದ್ದಿರುವುದರಿಂದ ಫಲಿತಾಂಶ ಅರ್ಹತೆಯ ದೃಷ್ಟಿಯಿಂದ ಮಹತ್ವ ಹೊಂದಿಲ್ಲ, ಆದರೆ ಅಂತರರಾಷ್ಟ್ರೀಯ ಶ್ರೇಯಾಂಕ ಅಂಕಗಳು ಲಭ್ಯವಿರುವುದರಿಂದ ಪಂದ್ಯ ಇನ್ನೂ ಮಹತ್ವ ಪಡೆದುಕೊಂಡಿದೆ. ಉತ್ತಮ ಪ್ರದರ್ಶನ ನೀಡುವುದರಿಂದ ವಿಶ್ವ ಶ್ರೇಯಾಂಕದಲ್ಲಿ ಸುಧಾರಣೆ ಸಾಧಿಸಲು ಭಾರತ ಪ್ರಯತ್ನಿಸಲಿದೆ. ಈ ಅರ್ಹತಾ ಸುತ್ತಿನ ಅಂತಿಮ ಹಂತದಲ್ಲಿ ಭಾರತ ಮೂರು ವಿಭಿನ್ನ ತವರು ಮೈದಾನಗಳಲ್ಲಿ ಪಂದ್ಯಗಳನ್ನು ಆಡುತ್ತಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯವನ್ನು ಶಿಲ್ಲಾಂಗ್ ಆತಿಥ್ಯ ವಹಿಸಿತ್ತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಸಿಂಗಾಪುರ್ ವಿರುದ್ಧದ ಪಂದ್ಯವನ್ನು ಮಾರ್ಗಾವ್‌ನಲ್ಲಿ ನಡೆಸಲಾಗಿತ್ತು. ಈಗ ಕೊಚ್ಚಿ ಮೂರನೇ ತವರು ಮೈದಾನವಾಗಿ ಆತಿಥ್ಯ ವಹಿಸುತ್ತಿದೆ.



## ಪದಬಂಧ 5925

» ರಾಜಾ ಸಂಗಮೇಶ ಹಿರೇಮಠ



**ಎಡದಿಂದ ಬಲಕ್ಕೆ**

2.ಹಿತವಾಗಿ ನಡೆದುಕೊಳ್ಳುವವನು (5)
5.ಶೀಕ್ಷ್ಣ-ಭಯಂಕರವಾದುದು ತಿರುಗಿದೆ (2)
6.ಹೊಸದಾಗಿ ಕರು ಹಾಕಿದ ಹಸು (2)
7.ಜಗಳ-ಹೊಡೆದಾಟ(3)
9.ಅವನು ನಿಂತದ್ದು ಈ ಭೂಮಿಯ ಮೇಲೆ (3)
11.ಕಾದಿರುವಂತೆ ಮಾಡುವುದು ತಿರುಗಿದೆ (3)
13.ಮಂದಿಗೆ ಮೊದಲು ಕಂಡ ತಾಯಿ (3)
15.ಬಲವನ್ನು ಉಪಯೋಗಿಸಿದ ರಾಮಮಿತ್ರ (2)
16. ಉಗ್ರ ದೇವತೆಯಲ್ಲಿ ತಿರುಗಿದ್ದಾಳೆ (2)
17.ಕರಾರುವಾಕ್ಕಾಗಿ ನಡೆಯುವಂತೆ ಸರಿಹೊಂದಿಸು (5)

**ಮೇಲಿನಿಂದ ಕೆಳಕ್ಕೆ**

1.ಆಕೆಯ ಕರ್ಕಶ ದನಿಯಲ್ಲಿಯೂ ಸೆಳೆತವಿದೆ (4)
2.ಸಿಕ್ಕ ಕೃಪೆ-ಆಶೀರ್ವಾದವಿದು (4)
3.ಆಗದ ನಡುವಿನ ಪ್ರೇಮ ತಲೆಕೆಳಗಾಗಿದೆ (4)
4.ಮಾಂಸಮಿಶ್ರಿತವಾದ ಕಲಸನ್ನ (4)
8.ಹಿಂದಿ ಭಾಷೆಯಲ್ಲಿ ಜಗಳ (3)
10.ಅಂದು ಬಂದವನ ಮುಖ (3)
11.ಒಳ್ಳೆಯ ಇತಿಹಾಸ ಹೊಂದಿರುವ ವ್ಯಕ್ತಿ (4)
12.ಗತಿಶೀಲವಾದ ಸಮಯ (4)
13.ಮಾಯಿ ನಡುವೆ ಇರುವ ಸಂಗ್ರಹಿಸು (4)
14.ನೋವು ಕಡೆಯಲ್ಲಿರುವ ಅರಿಕೆ (4)

**5924 ಉತ್ತರ**

**ಎಡದಿಂದ ಬಲಕ್ಕೆ:**
2.ನಮನ 5.ವಿಧ 7.ಅಕ್ಷ
8.ತಂಬೂರಿ 9.ಹಸನು
10.ವಾಮನ 12.ಬೇಸರ
13.ಖೇದ 14.ಹಣ
16.ಹರಳು

**ಮೇಲಿನಿಂದ ಕೆಳಕ್ಕೆ:**
1.ಕ್ರೋದಾಂಧ 2.ನರಹರಿ
3.ನವಗ್ರಹ 4.ಸಮಕ್ಷ
6.ವಿತಂಡವಾದ
7.ಅನುಕರಣ
11.ಹನುಮಾನ
12.ಬೇನೆಬೀಳು
13.ಖೇಚರ 15.ಹಲಗೆ

## ಉತ್ಪಾದನೆ, ಪರಿವರ್ತನೆ ಮತ್ತು ವೈವಿಧ್ಯೀಕರಣ: ಭಾರತದ ಇಂಧನ ವ್ಯವಸ್ಥೆಯ ಭದ್ರ ಬುನಾದಿ

ಇಂಧನ ಕ್ಷೇತ್ರದಲ್ಲಿನ ರಚನಾತ್ಮಕ ಬದಲಾವಣೆಗಳು ಸುಗಮವಾದ ಕಾಲಘಟ್ಟದಲ್ಲಿ ಸಂಭವಿಸುವುದು ವಿರಳ. ಯಾವುದಾದರೂ ಬಿಕ್ಕಟ್ಟು ಎದುರಾಗಿ, ಕ್ರಮ ಕೈಗೊಳ್ಳದಿದ್ದರೆ ಆಗುವ ನಷ್ಟವು ಅತಿಯಾದಾಗ ಮಾತ್ರ ಇಂತಹ ಬದಲಾವಣೆಗಳು ಅನಿವಾರ್ಯವಾಗುತ್ತವೆ. ಆದರೆ, ಕಳೆದ 11 ವರ್ಷಗಳಲ್ಲಿ ಮೋದಿ ಸರ್ಕಾರವು ಇದಕ್ಕೆ ಭಿನ್ನವಾದ ಹಾದಿ ಆರಿಸಿಕೊಂಡಿದೆ. ಯಾವುದೇ ತುರ್ತು ಪರಿಸ್ಥಿತಿ ಇಲ್ಲದಿದ್ದಾಗಲೂ ಇಂಧನ ವಲಯದಲ್ಲಿ ದೀರ್ಘಕಾಲಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಈ ಮುನ್ನೆಚ್ಚರಿಕೆಯ ಕ್ರಮಗಳು ಜಾಗತಿಕ ಪೂರೈಕೆ ಸರಪಳಿಯಲ್ಲಿ ಉಂಟಾಗುವ ಏರಿಳಿತಗಳನ್ನು ತಡೆದುಕೊಳ್ಳುವ ಬಲಿಷ್ಠ ಸಾಮರ್ಥ್ಯವನ್ನು ಭಾರತಕ್ಕೆ ಒದಗಿಸಿವೆ. ದೇಶೀಯ ಉತ್ಪಾದನೆಯ ವಿಸ್ತರಣೆ, ಹೊಸ ಇಂಧನ ಮೂಲಗಳಿಗೆ ವ್ಯವಸ್ಥಿತ ಪರಿವರ್ತನೆ ಮತ್ತು ಪೂರೈಕೆಯ ಮೂಲಗಳ ವೈವಿಧ್ಯೀಕರಣದ ಮೂಲಕ ಮೋದಿ ಸರ್ಕಾರವು ಇಂಧನ ಭದ್ರತೆಯನ್ನು ಖಾತರಿಪಡಿಸಿದೆ ಮತ್ತು ಬಾಹ್ಯ ಆಘಾತಗಳಿಂದ ದೇಶದ ಮೇಲಿನ ಪರಿಣಾಮವನ್ನು ಯಶಸ್ವಿಯಾಗಿ ತಗ್ಗಿಸಿದೆ.

ಭಾರತವು ಸಾಗಬೇಕಾದ ಹಾದಿ ಎಂದಿಗೂ ಅಸ್ಪಷ್ಟವಾಗಿರಲಿಲ್ಲ; ಅದಕ್ಕೆ ಬೇಕಿದ್ದುದು ಆ ಹಾದಿಯಲ್ಲಿ ಸ್ಥಿರವಾಗಿ ಸಾಗುವ 'ರಾಜಕೀಯ ಇಚ್ಛಾಶಕ್ತಿ' ಮಾತ್ರ. ಕಳೆದ ಒಂದು ದಶಕದಲ್ಲಿ ಮೋದಿ ಸರ್ಕಾರವು ಅಂತಹ ಬದ್ಧತೆಯನ್ನೇ ತೋರಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವರಿಗೆ ಉತ್ತರದಾಯಿಯಾಗಿರುವ ಆಡಳಿತವನ್ನೇ ಸರ್ಕಾರವು ತನ್ನ ಆದ್ಯತೆಯನ್ನಾಗಿಸಿಕೊಂಡಿತು. ಈ ಇಡೀ ಕಾರ್ಯತಂತ್ರವು ಮೂರು ಮುಖ್ಯ ಸ್ತಂಭಗಳ ಮೇಲೆ ನಿಂತಿದ್ದು, ಪ್ರತಿಯೊಂದು ಸ್ತಂಭವೂ ಸರ್ಕಾರದ ಕಡೆಯಿಂದ ಭಿನ್ನವಾದ ಮತ್ತು ಗಟ್ಟಿಯಾದ ಬದ್ಧತೆಯನ್ನು ನಿರೀಕ್ಷಿಸಿದ್ದವು.

**ಎಥೆನಾಲ್ ಮಿಶ್ರಣದ ಪ್ರಭಾವ:** ಮೊದಲನೆಯ ಸ್ತಂಭ 'ದೇಶೀಯ ಉತ್ಪಾದನೆ'. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ಪ್ರಕ್ರಿಯೆ 2001ರಲ್ಲೇ ಪ್ರಾಯೋಗಿಕ ಯೋಜನೆಯಾಗಿ ಆರಂಭವಾಗಿತ್ತು. ಆದರೆ ದಶಕಗಳ ಕಾಲ ಭಾರತವು ಈ ನಿಟ್ಟಿನಲ್ಲಿ ಯಾವುದೇ ಗಣನೀಯ ಪ್ರಗತಿ ಕಾಣದೆ, ಎಥೆನಾಲ್ ಉತ್ಪಾದನೆಯು ಕುಂಠಿತವಾಗಿತ್ತು. 2014ರ ನಂತರವಷ್ಟೇ, ಸರಣಿ ಸಮಗ್ರ ಸುಧಾರಣೆಗಳ ಮೂಲಕ ಈ ಉಪಕ್ರಮದ ನೈಜ ಸಾಮರ್ಥ್ಯವನ್ನು ಅನಾವರಣಗೊಳಿಸಲು ಭಾರತಕ್ಕೆ ಸಾಧ್ಯವಾಯಿತು. ಇಂಧನ ಭದ್ರತೆಯನ್ನು ಬಲಪಡಿಸಲು, ಹವಾಮಾನ ಬದಲಾವಣೆಯನ್ನು ಎದುರಿಸಲು ಮತ್ತು ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡಲು ಮೋದಿ ಸರ್ಕಾರವು ಬೃಹತ್ ಸುಧಾರಣಾ ಕ್ರಮಗಳನ್ನು ಕೈಗೊಂಡಿತು. 'ಎಥೆನಾಲ್ ಮಿಶ್ರಣ ಕಾರ್ಯಕ್ರಮ'ದ (ಇಬಿಪಿ) ಅಡಿಯಲ್ಲಿ ಪೆಟ್ರೋಲ್ ನಲ್ಲಿ ಶೇ. 20 ರಷ್ಟು ಎಥೆನಾಲ್ ಬೆರೆಸುವ ಗುರಿಯನ್ನು ಆರಂಭದಲ್ಲಿ 2030ಕ್ಕೆ ನಿಗದಿಪಡಿಸಲಾಗಿತ್ತು.

ಆದರೆ, 2020ರಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು (ಸಿಸಿಇಎ) ಈ ಗುರಿಯನ್ನು ಐದು ವರ್ಷ ಮುಂಚಿತವಾಗಿ ಅಂದರೆ 2025ಕ್ಕೇ ಅಂತಿಮಗೊಳಿಸಿತು. ಈ ನೀತಿಬದ್ಧ ನಿರ್ಧಾರಗಳ ಫಲವಾಗಿ, 2014ರಲ್ಲಿ ಕೇವಲ ಶೇ. 1.5ರಷ್ಟಿದ್ದ ಎಥೆನಾಲ್ ಮಿಶ್ರಣದ ಪ್ರಮಾಣವು 2025ರ ವೇಳೆಗೆ ಶೇ. 20ಕ್ಕೆ ಏರಿಕೆಯಾಗಿದೆ. ಇದು ಕಳೆದ 11 ವರ್ಷಗಳಲ್ಲಿ ಕಂಡ 13 ಪಟ್ಟು ಭಾರಿ ಹೆಚ್ಚಳವಾಗಿದೆ. ಅಷ್ಟೇ ಅಲ್ಲದೆ, ಎಥೆನಾಲ್ ಉತ್ಪಾದನೆಯು 2014ರಲ್ಲಿದ್ದ 38 ಕೋಟಿ ಲೀಟರ್‌ಗಳಿಂದ ಜೂನ್ 2025ರ ವೇಳೆಗೆ 661.1 ಕೋಟಿ ಲೀಟರ್‌ಗಳಿಗೆ ಜಿಗಿದಿದೆ. ಈ ಶೇ. 20 ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಈಗ ವಾರ್ಷಿಕವಾಗಿ ಸುಮಾರು 44 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲದ ಬಳಕೆಯನ್ನು ಉಳಿಸುತ್ತಿದೆ.



**ಇವಿ ಬಳಕೆ ಹೆಚ್ಚಳ:** ಇಂಧನ ಭದ್ರತೆಯ ಎರಡನೆಯ ಸ್ತಂಭ 'ಇಂಧನ ಪರಿವರ್ತನೆಯನ್ನು ಸಮರ್ಪಕವಾಗಿ ಜಾರಿಗೆ ತರುವುದು'. ದೇಶದ ಎಲೆಕ್ಟ್ರಿಕ್ ವಾಹನ (ಇವಿ) ಉದ್ಯಮದ ಅಭಿವೃದ್ಧಿಗೆ ಮೋದಿ ಸರ್ಕಾರವು ಎಲ್ಲಾ ಹಂತಗಳಲ್ಲೂ ಬೆಂಬಲ ನೀಡಿದೆ. ಆಟೋಮೊಬೈಲ್ ವಲಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಿದ್ದರಿಂದ, 4 ವರ್ಷಗಳಲ್ಲಿ ಈ ಕ್ಷೇತ್ರವು ಸುಮಾರು 36 ಬಿಲಿಯನ್ ಡಾಲರ್ ಹೂಡಿಕೆ ಆಕರ್ಷಿಸಿದೆ. ತಾಂತ್ರಿಕ ಆವಿಷ್ಕಾರಗಳನ್ನು ಉತ್ತೇಜಿಸಲು ಮತ್ತು ವಾಹನ ಉತ್ಪಾದನಾ ವಲಯದಲ್ಲಿ ಪೂರೈಕೆ ಸರಪಳಿಯನ್ನು ಬಲಪಡಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರಲಾಯಿತು. ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳ ಬಳಕೆಯನ್ನು ಹೆಚ್ಚಿಸಲು 2015 ರಲ್ಲಿ 'ಫೇಮ್-1' ಯೋಜನೆಯನ್ನು ಅಧಿಕೃತವಾಗಿ ಆರಂಭಿಸಲಾಯಿತು.

ಮೊದಲ ಹಂತದಲ್ಲಿ, 2.78 ಲಕ್ಷ ಎಲೆಕ್ಟ್ರಿಕ್ ವಾಹನಗಳು ರಸ್ತೆಗಿಳಿದವು, ಇದರಿಂದ ಸರಿಸುಮಾರು 59 ಮಿಲಿಯನ್ ಲೀಟರ್ ಇಂಧನ ಉಳಿತಾಯವಾಯಿತು. 'ಫೇಮ್-1' ಯೋಜನೆಯ ಯಶಸ್ಸು ಮತ್ತು ಅನುಭವದ ಆಧಾರದ ಮೇಲೆ, 2019 ರಲ್ಲಿ ಇದರ ಎರಡನೇ ಹಂತವನ್ನು (ಫೇಮ್-ಐಐ) ಆರಂಭಿಸಲಾಯಿತು. ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಬೆಲೆಯನ್ನು ನೇರವಾಗಿ ಕಡಿತಗೊಳಿಸುವ ಮೂಲಕ ಗ್ರಾಹಕರಿಗೆ ಆಕರ್ಷಕರಿಯಾಯಿತಿ ಮತ್ತು ಉತ್ತೇಜಕಗಳನ್ನು ನೀಡಲಾಯಿತು. ಇದರೊಂದಿಗೆ 16 ಲಕ್ಷ ಎಲೆಕ್ಟ್ರಿಕ್ ವಾಹನಗಳ ಖರೀದಿ ಮತ್ತು ಅಗತ್ಯ ಚಾರ್ಜಿಂಗ್ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಯಿತು, ಇದು ಒಟ್ಟಾರೆಯಾಗಿ 42.9 ಮಿಲಿಯನ್ ಲೀಟರ್ ಇಂಧನವನ್ನು ಉಳಿಸಲು ಸಹಕಾರಿಯಾಯಿತು. ಇದಲ್ಲದೆ, ಸರ್ಕಾರದ ಈ ಸತತ ಪ್ರಯತ್ನಗಳ ಫಲವಾಗಿ, 2019-20ಕ್ಕೆ ಹೋಲಿಸಿದರೆ 2023-24ನೇ ಸಾಲಿನಲ್ಲಿ ಭಾರತದಲ್ಲಿ ನೋಂದಾಯಿಸಲಾದ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯಲ್ಲಿ 9.7 ಪಟ್ಟು ಭಾರಿ ಹೆಚ್ಚಳ ಕಂಡುಬಂದಿದೆ. ಎಲೆಕ್ಟ್ರಿಕ್ ವಾಹನಗಳು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು ಸರಿಯಾದ ದಿಕ್ಕಿನಲ್ಲಿಯೇ ಸಾಗುತ್ತಿವೆಯಾದರೂ, ಈ ಇಂಧನ ಪರಿವರ್ತನೆಯು 'ನಿರ್ಣಾಯಕ ಖನಿಜಗಳ' ಮೇಲಿನ ಅವಲಂಬನೆಯ ಸವಾಲನ್ನು ಹೊತ್ತುತಂದಿದೆ. ಈ ಅಪಾಯವನ್ನು ಮೊದಲೇ ಅರಿತ ಮೋದಿ ಸರ್ಕಾರ, ಇಂಧನ ಭದ್ರತೆಯಲ್ಲಿನ ಈ ದುರ್ಬಲತೆಯನ್ನು ಹೋಗಲಾಡಿಸಲು 'ರಾಷ್ಟ್ರೀಯ ನಿರ್ಣಾಯಕ ಖನಿಜ ಮಿಷನ್' ಅನ್ನು ಪ್ರಾರಂಭಿಸಿದೆ. ನಿರ್ಣಾಯಕ ಖನಿಜಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಭಾರತದ ಖನಿಜ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ.

**ಪೂರೈಕೆ ಪಾಲುದಾರರ ವೈವಿಧ್ಯೀಕರಣ:** ಇಂಧನ ಭದ್ರತೆಯ ಮೂರನೆಯ ಸ್ತಂಭ 'ಇಂಧನ ಮೂಲಗಳು ಮತ್ತು ಪೂರೈಕೆ ಪಾಲುದಾರರ ವೈವಿಧ್ಯೀಕರಣ'. ಪ್ರಧಾನಿ ನರೇಂದ್ರ ಮೋದಿ 'ಬಹು-ಪಕ್ಷೀಯ ಹಿತಾಸಕ್ತಿ' ಎಂಬ ರಾಜತಾಂತ್ರಿಕ ನೀತಿಯನ್ನು ಅನುಸರಿಸಿದರು. ಇದು ಭಾರತಕ್ಕೆ ಹಲವಾರು ರಾಷ್ಟ್ರಗಳೊಂದಿಗೆ ಏಕಕಾಲದಲ್ಲಿ ಆಳವಾದ ಮತ್ತು ಸಮಾನಾಂತರವಾದ ಸಂಬಂಧಗಳನ್ನು ಬೆಳೆಸಲು ಹಾಗೂ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗಿದೆ. ರಾಜತಾಂತ್ರಿಕ ಸಂಪರ್ಕದ ಫಲವಾಗಿ, ಕಚ್ಚಾ ತೈಲಕ್ಕಾಗಿ ಭಾರತವು ಅವಲಂಬಿಸಿರುವ ದೇಶಗಳ ಸಂಖ್ಯೆ ದಶಕದ ಹಿಂದಿನ 27 ರಿಂದ ಇಂದು 40ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿದೆ.

ಈ ಎಲ್ಲಾ ಕ್ರಮಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಒಂದು ಉತ್ತಮ ಮಾರ್ಗವೆಂದರೆ, ಒಂದು ವೇಳೆ ಈ ಕ್ರಮಗಳನ್ನು ಕೈಗೊಳ್ಳದಿದ್ದರೆ ಪರಿಸ್ಥಿತಿ ಇಂದು ಹೇಗಿರುತ್ತಿತ್ತು ಎಂದು ಊಹಿಸುವುದು. ರಷ್ಯಾ-ಉಕ್ರೇನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆಗಳಂತಹ ಘಟನೆಗಳು, ಜಾಗತಿಕ ಪೂರೈಕೆ ಸರಪಳಿಗಳು ಎಷ್ಟು ವೇಗವಾಗಿ ಅಸ್ತವ್ಯಸ್ತಗೊಳ್ಳಬಲ್ಲವು ಎಂಬುದನ್ನು ಪದೇ ಪದೇ ಸಾಬೀತುಪಡಿಸಿವೆ. ಉದಾಹರಣೆಗೆ, ಎಥೆನಾಲ್ ಮಿಶ್ರಣದಂತಹ ದೇಶೀಯ ಪರ್ಯಾಯಗಳ ವಿಸ್ತರಣೆಯನ್ನೇ ತೆಗೆದುಕೊಳ್ಳಿ; 2014 ರಿಂದ ಈವರೆಗೆ ಇದು 190 ಮಿಲಿಯನ್ ಮೆಟ್ರಿಕ್ ಟನ್ ಗೂ ಹೆಚ್ಚು ಕಚ್ಚಾ ತೈಲ ಆಮದನ್ನು ಮಿತಗೊಳಿಸಿದೆ ಮತ್ತು ಅಂದಾಜು 1.55 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ವಿದೇಶಿ ವಿನಿಮಯವನ್ನು ಉಳಿಸಿದೆ. ಒಂದು ವೇಳೆ ಎಥೆನಾಲ್ ಮಿಶ್ರಣಕ್ಕೆ ಆದ್ಯತೆ ನೀಡದಿದ್ದಲ್ಲಿ, ಇಂತಹ ಜಾಗತಿಕ ಬಿಕ್ಕಟ್ಟುಗಳಿಗೆ ಭಾರತವು ಅತಿ ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಆ ಸನ್ನಿವೇಶದಲ್ಲಿ, ಜಾಗತಿಕ ಪೂರೈಕೆಯಲ್ಲಾಗುವ ಸಣ್ಣ ವ್ಯತ್ಯಯವೂ ಭಾರತದ ದೇಶೀಯ ಆರ್ಥಿಕತೆಯ ಮೇಲೆ ತೀವ್ರವಾದ ಒತ್ತಡವನ್ನು ಉಂಟುಮಾಡುತ್ತಿತ್ತು. ನೀತಿಗಳನ್ನು ಅನುಸರಿಸದಿದ್ದರೆ, ಜಾಗತಿಕ ಪೂರೈಕೆಯಲ್ಲಿನ ಅಡೆತಡೆಗಳು ಭಾರತದ ಇಂಧನ ವ್ಯವಸ್ಥೆಯಲ್ಲಿ ತೀವ್ರ ಅಸ್ಥಿರತೆಯನ್ನು ಉಂಟುಮಾಡುತ್ತಿದ್ದವು. ಭಾರತದಂತಹ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗೆ ಇದರ ಪರಿಣಾಮಗಳು ಅಕ್ಷರಶಃ 'ಹಾಹಾಕಾರ' ಅಥವಾ ತಲ್ಲಣಕ್ಕೆ ಕಾರಣವಾಗುವ ಸಾಧ್ಯತೆಯಿತ್ತು. ಆದರೆ, ಕಳೆದ ದಶಕದಲ್ಲಿ ಕೈಗೊಂಡ ಸುಧಾರಣೆಗಳು, ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಭಾರತಕ್ಕೆ ತನ್ನ ಇಂಧನ ಅಗತ್ಯಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ನಮ್ಯತೆಯನ್ನು ಒದಗಿಸಿವೆ. ಭಾರತದ ಇಂಧನ ಭದ್ರತೆಯು ಕೇವಲ ಒಂದು ಸಮುದ್ರ ಮಾರ್ಗದ ಪರಿಸ್ಥಿತಿಯನ್ನು ಅವಲಂಬಿಸಿ ಏರಿಳಿತ ಕಾಣುತ್ತಿದ್ದ ಕಾಲ ಈಗ ಮುಗಿದಿದೆ.ಯಾವುದೇ ಮಾರ್ಗದಲ್ಲಿ ಅಡೆತಡೆ ಉಂಟಾದರೂ, ಅದು ಕೇವಲ 'ಪೂರೈಕೆಯ ಹೊಂದಾಣಿಕೆ'ಗೆ ಕಾರಣವಾಗುತ್ತದೆಯೇ ಹೊರತು, ತುರ್ತು ಪರಿಸ್ಥಿತಿಯನ್ನಲ್ಲ, ಭಾರತೀಯ ತೈಲ ಸಂಸ್ಕರಣಾಗಾರಗಳು ಈಗ ಕೇವಲ ನಿಶ್ಚಿತ ದೇಶ ಅಥವಾ ನಿಶ್ಚಿತ ಮೂಲದ ಮೇಲೆ ಅವಲಂಬಿತವಾಗಿಲ್ಲ; ಈ ನಮ್ಯತೆಯೇ ದೇಶದ ಇಂಧನ ಭದ್ರತೆಯ ಪ್ರಮುಖ ಆಸ್ತಿಯಾಗಿದೆ. ಹಾರ್ಮುಜ್ ಜಲಸಂಧಿಯು ಇಂದಿಗೂ ಒಂದು ಪ್ರಮುಖ ಮಾರ್ಗವಾಗಿದ್ದರೂ, ಅಗತ್ಯಬಿದ್ದಲ್ಲಿ ಭಾರತವು ತನ್ನ ಹಡಗುಗಳನ್ನು ಮರುಮಾರ್ಗಗೊಳಿಸಿ ಇತರ ರಫ್ತುದಾರ ರಾಷ್ಟ್ರಗಳ ಕಡೆಗೆ ತನ್ನ ಕಾರ್ಯತಂತ್ರವನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ. ಒಂದು ದಶಕದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ಭಾರತವು ಜಾಗತಿಕ ಮಾರುಕಟ್ಟೆಯ ಅನಿಶ್ಚಿತತೆಗಳನ್ನು ನಿಭಾಯಿಸಲು ಅತ್ಯಂತ ಸದೃಢವಾದ ಸ್ಥಿತಿಯಲ್ಲಿದೆ. ಪೂರೈಕೆ ಸರಪಳಿಗಳು ಅನಿಶ್ಚಿತವಾಗಿರುವ ಇಂದಿನ ಜಗತ್ತಿನಲ್ಲಿ, ಇಂಧನ ಮೂಲಗಳು ಮತ್ತು ಪಾಲುದಾರಿಕೆಗಳ ಈ ವೈವಿಧ್ಯಮಯ ನೆಲೆಯು ಭಾರತದ ಇಂಧನ ಪೂರೈಕೆಯ ಸುಸ್ಥಿರತೆಗೆ ಪ್ರಬಲ ರಕ್ಷಣಾ ಕವಚವಾಗಿ ಮಾರ್ಪಟ್ಟಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ